ಶ್ರೀ ಎಚ್. ಎನ್. ನಂಜೇಗೌಡ.—ಮತ್ತೊಂದು ಕ್ರಿಯಾಲೋಪ ಸ್ವಾಮಿ. ಮಾನ್ಯ ಮಂತ್ರಿಗಳು ಉಪಯೋಗಿಸಿದ ಪದದ ಬಗ್ಗೆ ಸದಸ್ಯರು ಎತ್ತುವ ಕ್ರಿಯಾಲೋಪ ಹಾಗು ಸದಸ್ಯರು ಉಪಯೋಗಿಸಿದ ಪದದ ಬಗ್ಗೆ ಮಾನ್ಯ ಸಚಿವರು ಎತ್ತುವ ಕ್ರಿಯಾಲೋಪ ಇದರಲ್ಲಿ ವ್ಯತ್ಯಾಸವಿದೆಯೇ? ಇದರಲ್ಲಿ ತಾರತಮ್ಯ ಮಾಡುತ್ತೀರಾ ?

ಉಪಾಧ್ಯಕ್ಷರು.—ವ್ಯತ್ಯಾಸವಿಲ್ಲ, ಯಾವ ತಾರತಮ್ಯವೂ ಇಲ್ಲ.

MOTION OF THANKS TO THE GOVERNOR'S ADDRESS

(Debate Continued)

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾರ್ಪಣ ನಿರ್ಣಯವನ್ನು ಈಗಾಗಲೇ ಸಭೆಯ ಮುಂದೆ ಮಂಡನೆ ಮಾಡಿದ್ದಾರೆ. ಸರಕಾರದ ಅನೇಕ ಇಲಾಖೆಗಳ ವರದಿ ಸಂಗ್ರಹಣೆ ಮಾಡಿ ರಾಜ್ಯಪಾಲರವರ ಬಾಯಿಂದ ಈ ಸಪ್ಪೆ ಭಾಷಣವನ್ನು ಓದಿಸಿದ್ದಾರೆ. ದೇಶದ ಮುಂದೆ ಇರತಕ್ಕಂಥ ಬೃಹತ್ ಸಮಸ್ಯೆಗಳ ಬಗ್ಗೆ ಸ್ಪಷ್ಟವಾಗಿ ತೀರ್ಮಾನ ಕೊಡತಕ್ಕಂಥ ಪ್ರಣಾಲಿಕೆ ಈ ಭಾಷಣದಲ್ಲಿಲ್ಲ. ಅಂಥ ಪ್ರಣಾಲಿಕೆ ರಾಜ್ಯಪಾಲರ ಭಾಷಣದಲ್ಲಿ ಇರದೇ ಸರಕಾರವು ಅಂಜುಬುರುಕತನ ವ್ಯಕ್ತ ಮಾಡಿದಂತಾಗಿದೆ. ಇಂದು ದೇಶದಲ್ಲಿ ಜಾಜ್ವಲ್ಯವಾದ ಸಮಸ್ಯೆಯ ಬಗ್ಗೆ ಒಂದು ಶಬ್ದವೂ ಕೂಡ ಈ ಭಾಷಣದಲ್ಲಿ ಇಲ್ಲ. ಸರಕಾರದವರು ಇಷ್ಟೊಂದು ಅಂಜುಬುರುಕತನದ ದಾರಿ ಹಿಡಿದು ತಲೆ ತಪ್ಪಿಸಿಕೊಳ್ಳತಕ್ಕ ನೀತಿ ಅನುಸರಿಸಿದ್ದಾರೆ ಮತ್ತು ಆ ರೀತಿ ಈ ಭಾಷಣದಲ್ಲಿ ಅವರು ಅಳವಡಿಸಿ ರಾಜ್ಯಪಾಲರ ಬಾಯಿಂದ ಓದಿಸಿದ್ದಾರೆ. ಭಾಷಣದಲ್ಲಿ ಪ್ರಧಾನತಃ ರಾಜ್ಯಪಾಲರು ದೇಶದ ಆಡಳಿತದ ಬಗ್ಗೆ ಲಾ ಅಂಡ್ ಆರ್ಡರ್ ಬಗ್ಗೆ ಒಂದು ವಿಚಾರ ಹೇಳಿದ್ದಾರೆ. ಮೊನ್ನೆ ನಡೆದಂಥ ವಿದ್ಯಾರ್ಥಿಗಳ ಚಳವಳಿ, ಹತ್ಯಾಕಾಂಡ, ಈ ಗೊಂದಲ ಆಗುವುದಕ್ಕೆ ಏನು ಕಾರಣ ಎನ್ನುವುದನ್ನು ಹೇಳುವುದಕ್ಕೆ ಶಕ್ತಿ ಇಲ್ಲದೆ ಜಾರಿಕೊಂಡು ಹೇಳಿದ್ದಾರೆ. ಮಧುಗಿರಿ ಪ್ರಕರಣವಾದ ಮೇಲೆ ಪೋಲೀಸರ ಹತ್ಯಾಕಾಂಡ ನಿರಾಂತಕವಾಗಿ ಬೆಳೆದುಕೊಂಡು ಇಂದು ದೇಶದಲ್ಲಿ ನಾನಾ ಮೂಲೆಯಲ್ಲಿ ಕಿಚ್ಚಿದ್ದು ಉರಿಯುತ್ತಿದೆ.

ಡಿಸೆಂಬರ್ ಅಧಿವೇಶನದಲ್ಲಿ ಮಧುಗಿರಿ ಪ್ರಕರಣದ ಬಗ್ಗೆ ಚರ್ಚೆ ನಡೆದ ಕಾಲದಲ್ಲಿ ನಾನು ಮುಖ್ಯಮಂತ್ರಿಗಳನ್ನು ಕೇಳಿದೆ. ಡಿಸೆಂಬರ್ 23ನೇ ತಾರೀಖಿನ ದಿನ ಮುಖ್ಯ ಮಂತ್ರಿಗಳನ್ನು ಕೇಳಿದೆ. ಮಧುಗಿರಿ ಪೋಲೀಸ್ ಹತ್ಯಾಕಾಂಡದ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡುತ್ತೀರಾ ಎಂದು. ಅದಕ್ಕೆ ಮುಖ್ಯ ಮಂತ್ರಿಗಳು ಈ ರೀತಿ ಹೇಳಿದರು. ಅದನ್ನು ನಾನು ಶನಿವಾರದ ದಿವಸ ಮಾಡುತ್ತೇನೆಂದು ಹೇಳಿದೆ. ಸಂಬಂಧಪಟ್ಟ ಸಚಿವರನ್ನೂ ಕೇಳಿದೆ. ಚೀಫ್ ಜಡ್ಜ್ ಅವರು ಬೆಂಗಳೂರಿನಲ್ಲಿರಲಿಲ್ಲ. ಭಾನುವಾರ ರಾತ್ರಿ ಬಂದರು. ಕೂಡಲೇ ಕಾಂಟ್ಯಾಕ್ಟ್ ಮಾಡಿದರು. ಸೋಮವಾರ ಬೆಳಿಗ್ಗೆ ಸಿಕ್ಕಿದರು. ಇದನ್ನು 2—3 ದಿವಸಗಳಲ್ಲಿ ಯೋಚನೆ ಮಾಡಿ ಹೇಳುತ್ತೇನೆಂದು ಹೇಳಿದರು. ಇವತ್ತು ಸಾಯಂಕಾಲ ಮಾತನಾಡಿ ತೀರ್ಮಾನ ಮಾಡುತ್ತೇನೆಂದು ಆದರೆ ಬೇಕು ಎಂದು ಸುಮ್ಮನೆ ಅದರ ಬಗ್ಗೆ ಕಾಲ ಕಳೆಯುವುದಕ್ಕೆ ನನಗೆ ಇಷ್ಟವಿಲ್ಲ. ಇವತ್ತೇ ತೀರ್ಮಾನ ಮಾಡುತ್ತೇನೆ..." ಎಂದು ಈ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಡಿಸೆಂಬರ್ 23ನೇ ತಾರೀಖಿನ ದಿನ ಮಂತ್ರಿಮಂಡಳದ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿದಾಗ್ಗೆ ಉತ್ತರ ಕೊಡುತ್ತಾ ಹೇಳಿದರು.

[MR. CHAIRMAN (SRI S. D. KOTHAVALE) in the Chair.]

ಅಂದು ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟರು. ನ್ಯಾಯ ತೀರ್ಮಾನ ಅತಿ ಶೀಘ್ರವಾಗಿ ಆಗಬೇಕು, ವಿಳಂಬವಾಗುವುದು ಸರಿಯಾದ್ದಲ್ಲ ಎಂದು ಹೇಳಿದಾಗ ಮಾನ್ಯ ನಿಜಲಿಂಗಪ್ಪನವರು ಇವೊತ್ತೇ ಮಾಡುತ್ತೇನೆ ಎಂದು 1967ನೆ ಡಿಸೆಂಬರ್ ತಿಂಗಳು 23ನೇ ತಾರೀಖು ಹೇಳಿದರು. ಏನು ಮಾಡಿದರೂ ಸಹ ಅವರು ಕೊಟ್ಟಂಥ ಭರವಸೆಯನ್ನು ನೀರು ಪಾಲು ಮಾಡಿದ್ದಾರೆ. ಅವರು ನ್ಯಾಯಾಂಗ ವಿಚಾರಣೆ ಮಾಡಿಸುತ್ತೇನೆಂದು ಹೇಳಿ ಈ ಸಭೆಗೆ ಆಶ್ವಾಸನೆಯನ್ನು ಕೊಟ್ಟಂಥ ಈ ಸರ್ಕಾರ ಒಂದು ತಿಂಗಳಾದ ಮೇಲೆ ಜನವರಿ 22ನೇ ತಾರೀಖು ಒಬ್ಬ ಜಿಲ್ಲಾಧಿಕಾರಿಯನ್ನು

(ಶ್ರೀ ಎಸ್. ಶಿವಪ್ಪ)

ನ್ಯಾಯಾಧೀಶರು ಎಂದು ನೇಮಕ ಮಾಡಿ ಮಧುಗಿರಿ ಪ್ರಕರಣದ ವಿಚಾರಣೆ ಮಾಡುತ್ತಾರೆಂದು ಒಂದು ಹೇಳಿಕೆಯನ್ನು ಹೊರಡಿಸಿದ್ದಾರೆ. ಸರ್ಕಾರ ತಾನೇ ಈ ಸಭೆಗೆ ಕೊಟ್ಟಂಥ ಒಂದು ಭರವಸೆಯನ್ನು ಎಷ್ಟರಮಟ್ಟಿಗೆ ನೆರವೇರಿಸಿದೆ ಎನ್ನುವುದನ್ನು ಈ ಒಂದು ವಿಷಯದಿಂದಲೇ ಅಳತೆ ಮಾಡಬೇಕಾಗಿದೆ. ನ್ಯಾಯಾಂಗ ವಿಚಾರಣೆ ಮಾಡಬೇಕೆಂದು ಕೇಳಿದಾಗ ಬೇರೆ ಯಾರನ್ನೋ ನೇಮಕ ಮಾಡಿದರೆ ಅದರಿಂದ ಎಷ್ಟರಮಟ್ಟಿಗೆ ನ್ಯಾಯ ಸಿಕ್ಕುತ್ತದೆ ಎಂದು ಯಾರಾದರೂ ನ್ಯಾಯಾಂಗವನ್ನು ಅರಿತವರು, ಅತ್ತ ಕಡೆಯೂ ಲಾಯರುಗಳಿದ್ದಾರೆ, ಅವರೇ ಅದನ್ನು ಹೇಳಲಿ ಸ್ವಾಮಿ. ಬಹುಶಃ ಅಲ್ಲಿ ಸಾಹಿತ್ಯ ಸಿಕ್ಕದೆ, ಸಾಕ್ಷ್ಯ ಸಿಕ್ಕದೆ ಇರಲಿ ಎಂದು ಈ ರೀತಿ ವಿಳಂಬ ಮಾಡಿರಬಹುದು ಎಂದು ಭಾವಿಸಬೇಕಾಗುತ್ತದೆ. ಅಲ್ಲಿಯ ಜನ ಇವತ್ತು ಏನು ಸಾಕ್ಷ್ಯ ಕೊಟ್ಟಾರು ? ಅಲ್ಲಿ ನಡೆದಿರುವ ತಪ್ಪುಗಳನ್ನು ಸರಿಪಡಿಸುವುದಕ್ಕೋಸ್ಕರವಾಗಿ ಸರ್ಕಾರದವರು ಇಂಥ ಒಂದು ಕುಂಟು ನೆಪವನ್ನು ಒಡ್ಡಿ ವಿಚಾರಣೆ ಮಾಡುವುದಕ್ಕೆ ಹೊರಟಿದ್ದಾರೆಂದು ನಾನಾದರೂ ಹೇಳುತ್ತೇನೆ. ಒಬ್ಬ ಅಧಿಕಾರಿಯಿಂದ ನಿಮಗೆ ಬೇಕಾದ ರಿಪೋರ್ಟನ್ನು ಬರೆಸುವುದಕ್ಕೆ ವಿಚಾರಣೆ ಮಾಡುತ್ತೇವೆಂದು ಹೇಳಿ ಈ ರೀತಿ ಮಾಡಿದ್ದೀರಿ ಎಂದು ಕಾಣುತ್ತದೆ. ಅವರ ಮುಂದೆ ಏನು ಸಾಕ್ಷಿ ಸಾಹಿತ್ಯ ಕೊಟ್ಟರೂ ಅವರಿಂದ ನ್ಯಾಯ ದೊರಕುತ್ತದೆ ಎನ್ನುವ ನಂಬಿಕೆ ನಮಗೆ ಇಲ್ಲ. ಶ್ರೀ ನರೋನ ಅವರ ಬಗ್ಗೆ ನಮಗೆ ಗೌರವವಿರಬಹುದು, ಅವರ ವ್ಯಕ್ತಿತ್ವಕ್ಕೆ ಕಳಂಕ ತರುವುದಕ್ಕೆ, ಅವರ ವಿಚಾರದಲ್ಲಿ ಏನಾದರೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಸರ್ಕಾರದವರು ಈ ವಿಚಾರಣಾ ಕಮಿಷನ್ ಅನ್ನು ಯಾವ ರೀತಿ ನೇಮಕ ಮಾಡಿದ್ದಾರೆಂಬುದನ್ನು ನೋಡಿದರೆ ನಮಗೆ ನ್ಯಾಯ ದೊರೆಯುವುದಿಲ್ಲ, ಎಂದು ಹೇಳಬೇಕಾಗಿದೆ. ಮಧುಗಿರಿ ಪ್ರಕರಣದಲ್ಲಿ ನಡೆದಿರುವ ಅನ್ಯಾಯಗಳು, ಅಲ್ಲಿಯ ಸ್ತ್ರೀಯರಿಗೆ ಆಗಿರುವ ಅವಮಾನ ಇವನ್ನೆಲ್ಲ ನಾನೊಬ್ಬನಲ್ಲ, ಆಡಳಿತ ಪಕ್ಷಕ್ಕೆ ಸೇರಿದ ಸದಸ್ಯರು ಮತ್ತು ಮಹಿಳಾ ಸದಸ್ಯರೂ ಬಂದು ನೋಡಿ ಕಣ್ಣೀರು ಸುರಿಸಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ಈ ರೀತಿಯ ಅಮಾನುಷ ಕೃತ್ಯ ನಡೆದಿರುವುದನ್ನು ಎರಡೂ ಕಡೆಯ ಸದಸ್ಯರು ಸಭೆಯಲ್ಲಿ ಪ್ರಸ್ತಾಪ ಮಾಡಿ ಒತ್ತಾಯ ಮಾಡಿ ವಿಚಾರಣೆ ಮಾಡಿ ಎಂದರೆ ಇಂಥ ವಾತಾವರಣದ ಬಗ್ಗೆಯೂ ಕೂಡ ಅಲಕ್ಷ್ಯ ಮನೋಭಾವವನ್ನು ತೋರಿಸಿದ್ದಾರೆ. ಇದರಿಂದಲೇ ಎಷ್ಟುಮಟ್ಟಿಗೆ ನ್ಯಾಯ ದೊರಕುತ್ತದೆ ಎನ್ನುವುದನ್ನು ಅಳತೆ ಮಾಡಬೇಕಾಗಿದೆ. ನಿಮ್ಮ ಕುಂಟು ನೆಪದ ವಿಚಾರಣೆಯಿಂದ ನಮಗೆ ನ್ಯಾಯ ದೊರಕುವುದಿಲ್ಲ ಎಂದು ನಮಗೆ ಗೊತ್ತು. ಈ ವಿಚಾರಣೆಯಲ್ಲಿ ನಾವು ಸಹಕರಿಸಬೇಕೇ, ಬೇಡವೇ ಎಂದು ಕೂಡ ವಿಚಾರ ಮಾಡಬೇಕಾಗಿದೆ. ಎರಡು ತಿಂಗಳಾದ ಮೇಲೆ ಯಾವ ರೀತಿ ಒಬ್ಬ ಅಧಿಕಾರಿಯ ಮುಂದೆ ಹೋಗಿ ಸಾಕ್ಷಿ, ಸಾಹಿತ್ಯ ಕೊಟ್ಟರೆ ಅದರಿಂದ ಪ್ರಯೋಜನವಾದರೂ ಕೂಡ ಏನಾಗುತ್ತದೆ ಎನ್ನುವುದನ್ನು ನಾನು ಇವತ್ತು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ವಿಚಾರಣೆಗೆ ಬಹಿಷ್ಕಾರ ಹಾಕಬೇಕೆಂದು ನಮ್ಮ ಮಿತ್ರರು ಕೆಲವರು ಆಲೋಚನೆ ಮಾಡುತ್ತಿದ್ದಾರೆ. ಅಂಥ ವಿಚಾರ ಮಾಡಿದರೆ ನಾವು ಸಹಕರಿಸುವುದಕ್ಕೆ ಸಾಧ್ಯವಾಗಲಾರದು.

Mr. CHAIRMAN.—I would like to bring to the notice of the member the provision of rule 148 (viii) :

> "it shall not relate to any matter which is under adjudication by a court of law having jurisdiction in any part of India".

So, nothing should be said which is likely to prejudice the proceedings of the Commission ; He will please remember this.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ನಾನು ಇವೊತ್ತು ಯಾವ ವಿಚಾರಣೆಗೂ ಕೂಡ ಪ್ರಿಜುಡಿಸ್ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಸರ್ಕಾರ ಏನೊಂದು ಭರವಸೆಯನ್ನು ಈ ಸಭೆಗೆ ಕೊಟ್ಟಿದೆಯೋ ಅದು ಒಬ್ಬ ಹೈಕೋರ್ಟ್ ನ್ಯಾಯಾಧೀಶರನ್ನು ನೇಮಕ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದು ಎಷ್ಟುಮಟ್ಟಿಗೆ ಪಾಲಿಸಲ್ಪಟ್ಟಿದೆ ಎಂದು ತೋರಿಸುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಸರ್ಕಾರ ಸಮಿತಿಯನ್ನು ನೇಮಕ ಮಾಡುವುದರಲ್ಲಿ ಅನುಸರಿಸಿರುವ ಧೋರಣೆ ಏನಿದೆ ಅದರಿಂದ ಸಂಶಯ ಬರುತ್ತಿದೆ. ಅದಕ್ಕಾಗಿ ಹೇಳುತ್ತಿದ್ದೇನೆ.

Sri S. S. SHETTAR (Hubli).—Sir, even before the court, if we feel that we may not be able to get proper justice, we have got that right to express. So, there is no harm in saying that the matter has been delayed for long, whether we get justice or not, etc.,......

Mr. CHAIRMAN.—What happens in the court or you express want of confidence in the court, we are not concerned. The Rules of Procedure say that any matter pending before the civil court, or tribunal or before a judicial or semi—Judicial body, reference should not be made in this House. We are governed by the rules and not by the I.P.C. for carrying out the proceedings in a decorous and dignified manner; that is the position.

Sri H. SIDDAVEERAPPA. (Harihara).—Sir, what you just now observed, in my humble submission, refers only to courts of law as established under Criminal Procedure Code and Civil Procedural Code. As a matter of fact, there are umpteen number of tribunals in this country which are in the nature of quasi-judicial. What my learned friend says is, the proceedings would show that when we pressed the Chief Minister at that time that a High Court Judge may be appointed I remember, the Chief Minister said that he had consulted the Chief Justice whether any Judge of the High Court could be made available. That was the intensity of the feeling on that day on both sides of the House. In fact one Congress member said that if he had anything to do, he would shoot that officer. That is what he stated. What is the good of this Commission having been appointed? What is the point he is driving at.

Mr. CHAIRMAN.—I have no objection to the member saying that the Judge of the High Court should have been appointed. Let us not cast aspersion on the man who is appointed there.

Sri S. SIVAPPA.—I have made it abundantly clear that I have nothing against the person who is appointed there.

ಮಧುಗಿರಿ ಪ್ರಕರಣದ ವಿಚಾರದಲ್ಲಿ ಸರಕಾರ ಎಷ್ಟು ಮೋಸಮಾಡಿದೆ ಎಂಬುದು ದೇಶಕ್ಕೆ ಎದ್ದುಕಾಣುತ್ತಿದೆ. ಆ ಪ್ರಕರಣವಾದಮೇಲೆ ಗೃಹಸಚಿವರು ರಾಜೀನಾಮೆ ಕೊಟ್ಟರು, ಅದು ಎಷ್ಟೋ ಗೊಂದಲವನ್ನು ಉಂಟುಮಾಡಿದೆ. ಈ ವಿಚಾರದಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ, ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಒಂದು ಸರಿಯಾದ ಹೇಳಿಕೆ ಈ ವಿಚಾರದಲ್ಲಿ ಕೊಡ ಬೇಡವೇ? ಮಧುಗಿರಿ ಪ್ರಕರಣವಾದಮೇಲೆ ಡಿಸೆಂಬರಿನಲ್ಲಿ ಗೃಹ ಸಚಿವರು ರಾಜೀನಾಮೆ ಕೊಟ್ಟರು. ಆದರೆ ಅವರು ಇಲ್ಲೇ ಇದ್ದರೇ ಅಥವಾ ತುಮಕೂರಿನಲ್ಲಿರುವ ತಮ್ಮ ಮನೆಗೆ ಹೋದರೇ ಎಂಬ ವಿಚಾರದಲ್ಲಿ ಸಂಶಯವಿದೆ. ಗೃಹ ಸಚಿವರು ರಾಜೀನಾಮೆ ಕೊಟ್ಟಮೇಲೆ ಇಲ್ಲಿದ್ದ ಮನೆ ಖಾಲಿ ಮಾಡಿ ತುಮಕೂರಿಗೆ ಹೋದರೆಂಬ ವರ್ತಮಾನವಿದೆ, ರಾಜೀನಾಮೆ ಪತ್ರ ವಾಪಸು ಪಡೆದರು ಎಂದು ಹೇಳುತ್ತಾರೆ. ಅದು ನಿಜವಾದರೆ ರಾಮರಾಯರು ಯಾವಾಗ ಅಧಿಕೃತ ನಿವಾಸಕ್ಕೆ ಮತ್ತೆ ವಾಪಸು ಬಂದರು? ಅವರು ಗೃಹ ಸಚಿವರಾಗಿ ರಾಜೀನಾಮೆ ಕೊಟ್ಟಮೇಲೆ ಅದು ಅಂಗೀಕಾರವಾಗುವವರೆಗೆ ಕೆಲಸಮಾಡಿದರೇ ಎಂಬ ವಿಚಾರದಲ್ಲಿ ಸಂಶಯವಿದೆ. ಗೃಹ ಸಚಿವರು ತುಮಕೂರಿನಲ್ಲಿದ್ದುಕೊಂಡೇ ತಮ್ಮ ಇಲಾಖೆಯ ಕೇಸ ನಡೆಸುತ್ತಿದ್ದರೆಂದು ಹೇಳುತ್ತಾರೆ. ಈ ವಿಚಾರವನ್ನು ಸಂಶಯಕ್ಕೆ ಎಡೆಯಿಲ್ಲದಂತೆ ವಿಶದಪಡಿಸಬೇಕು. ಇಷ್ಟೇ ಅಲ್ಲ, ಗೃಹ ಸಚಿವರು ಎ. ಐ. ಸಿ. ಸಿ. ಸೆಕ್ರೆಟರಿಗಳಾಗಿಯೂ, ಮುಖ್ಯ ಮಂತ್ರಿಗಳು ಅಧ್ಯಕ್ಷರಾಗಿಯೂ ಆರಿಸಲ್ಪಟ್ಟಿದ್ದಾರೆ. ಅವರು ದೆಹಲಿಗೆ ಹೋದ ವೇಳೆ ಈ ದೇಶದಲ್ಲಿ ಕಾನೂನು ರಕ್ಷಣೆ ಯಾರು ನೋಡಿಕೊಳ್ಳುತ್ತಿದ್ದಾರೆ? ಈಚೆಗೆ ಜನವರಿಯಲ್ಲಿ ದೇಶದಲ್ಲಿ ಕೆಲವು ಕಡೆ ಗೋಳೀಬಾರು ಆಯ್ತು, ಬೆಂಗಳೂರು, ಮೈಸೂರು, ಮಂಗಳೂರು, ದೊಡ್ಡಬಳ್ಳಾಪುರ ಮುಂತಾದ ಕಡೆಗಳಲ್ಲೆಲ್ಲಾ ಗೋಳೀಬಾರು ಆಯ್ತು, ಎಷ್ಟೋ ಜನ ಸತ್ತರು. ಆದರೆ ಕರಾರುವಾಕ್ಕಾಗಿ ಎಷ್ಟು ಮಂದಿ ಸತ್ತರು ಎಂಬುದು ಗೊತ್ತಾಗಿಲ್ಲ, ಸರಕಾರ ಇದನ್ನು ತಿಳಿಸಬೇಕು. ಅಂಗಡಿಗಳ ಲೂಟಿ ಆಯಿತು, ಅನೇಕರು ಗಾಯಗೊಂಡರು. ಅದರ ವಿವರ ಹೇಳಲಿಲ್ಲ. ಪೋಲೀಸರು ತಮ್ಮ ಅನುಮತಿ ಪಡೆಯದೆ ವಿಶ್ವವಿದ್ಯಾನಿಲಯದ ಅವರಣಕ್ಕೆ ಪ್ರವೇಶಮಾಡಿ ವಿದ್ಯಾರ್ಥಿಗಳು, ಲೆಕ್ಚರರು

(Sri S. SHIVAPPA)

ಗಳು, ಪ್ರಿನ್ಸಿಪಾಲರು ಮುಂತಾದವರನ್ನು ಹೊಡೆದರು, ಹೆಣ್ಣುಮಕ್ಕಳ ಮೇಲೆ ಕೈಮಾಡಿದರು ಎಂದು ವಿಶ್ವವಿದ್ಯಾನಿಲಯದ ಮುಖ್ಯಾಧಿಕಾರಿಗಳಾದ ವೈಸ್‌ಛಾನ್ಸಲರು ಹೇಳಿದರು. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಹಾಸ್ಟಲಿನ ವಿದ್ಯಾರ್ಥಿಗಳು ನನ್ನನ್ನು ಕರೆದುಕೊಂಡುಹೋಗಿ ಹಾಸ್ಟೆಲಿನಲ್ಲಿ ಎಂಥ ಅತ್ಯಾಚಾರ ನಡೆದಿದೆ ಎಂಬುದನ್ನು ತೋರಿಸಿದರು. ಅಲ್ಲಿ ವಿದ್ಯಾರ್ಥಿಗಳ ತಲೆಬುರುಡೆ ಒಡೆದು ರಕ್ತ ಸುರಿದಿರುವ ದೃಶ್ಯ ನೋಡಿ ಸಂಕಟವಾಯಿತು. ಅಲ್ಲಿ ಕೆಲವು ಕೊಠಡಿಗಳ ಬಾಗಿಲನ್ನು ಒಡೆದು ಬೀಗ ಒಡೆದು ಸಿಕ್ಕಿದ ಸಾಮಾನುಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ, ಗಡಿಯಾರ, ಬಟ್ಟೆಬರೆ ಮುಂತಾದ ಸಾಮಗ್ರಿಗಳನ್ನು ಅಲ್ಲಿಂದ ಅಪಹರಿಸಿದ್ದಾರೆ. ಕಾಲೇಜ್ ಡೀನ್‌ರವರು ಅಲ್ಲಿಗೆ ಬಂದು ಕಂಪ್ಲೈಂಟು ಬರೆಯುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ವಿಶ್ವವಿದ್ಯಾನಿಲಯದ ಆವರಣಕ್ಕೆ ಹೋಗಿ ಗೋಕಾಕ್‌ರವರನ್ನು ಭೇಟಿಮಾಡಿದಾಗ ಅವರು ನಡೆದ ಸಂಗತಿಯನ್ನು ಹೇಳಿ ಕಣ್ಣೀರಿಟ್ಟರು, ಪೋಲೀಸರು ದುಷ್ಕೃತ್ಯಗಳನ್ನೆಸಗಿದರು, ಕಲ್ಲು ಎಸೆದರು, ಪ್ರಚೋದನೆ ಮಾಡಿದರು, ಪ್ರಿನ್ಸಿಪಾಲರು ಕೂಡ ಏಟು ತಿಂದರು ಎಂದು ಹೇಳಿದರು. ಆದರೆ ಇತ್ತೀಚೆಗೆ ಒಂದು ಆಶ್ಚರ್ಯಕರವಾದ ಹೇಳಿಕೆ ಹೊರಬಿದ್ದಿದೆ, ಮೇಲ್ಮನೆಯಲ್ಲಿ ಪ್ರಿನ್ಸಿಪಾಲರಿಗೆ ಏಟು ಬಿದ್ದಿಲ್ಲವೆಂದು ಸರಕಾರದವರಿಂದ ಹೇಳಿಕೆ ನೀಡಲ್ಪಟ್ಟಿದೆ, ವಿದ್ಯಾ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಪ್ರಿನ್ಸಿಪಾಲರಿಗೆ ಏಟು ಬಿದ್ದಿಲ್ಲವೆಂದು ಹೇಳಿದ್ದಾರೆ. ಇಂದು ಸಭೆಗೆ ಬರುವುದಕ್ಕೆ ಮುಂಚೆ ಉನ್ನತ ಅಧಿಕಾರಿಯನ್ನು ಕೇಳಿದೆ, ಏಟು ಬಿತ್ತು ಎಂದು ಹೇಳಿದರು, ಗೊಂದಲದಲ್ಲಿ ಬಿದ್ದಿರಬಹುದು. ಆದರೆ ಪೋಲೀಸಿನವರು ಷಡಕ್ಷರಸ್ವಾಮಿಗಳನ್ನೇ ಹುಡುಕಿಕೊಂಡು ಹೋಗಿ ಹೊಡೆದಿಲ್ಲದಿರಬಹುದು. ಆದರೆ ಏಟು ಬಿದ್ದಿದ್ದರೂ ಸರಕಾರ ಇಲ್ಲವೆಂದು ಹೇಳುತ್ತಿದೆ. ದೊಂಬಿಯಾದಾಗ ವಿಜಲಿಂಗಪ್ಪನವರು ಅಲ್ಲಿದ್ದರೆ ಅವರಿಗೆ ಕೂಡ ಏಟು ಬೀಳುತ್ತದೆ, ಯಾರನ್ನೂ ಬಿಡುವುದಿಲ್ಲ. ಇಂದು ಪೋಲೀಸರು ಉಪಕುಲಪತಿಗಳ ಅನುಮತಿ ಪಡೆಯದೆ ವಿಶ್ವವಿದ್ಯಾಲಯದ ಆವರಣದೊಳಕ್ಕೆ ಪ್ರವೇಶ ಮಾಡಿ ಹುಡುಗರನ್ನು ಮನಸ್ಸಿಗೆ ಬಂದಹಾಗೆ ಹೊಡೆದಿದ್ದಾರೆ. ಹುಡುಗರಿಗೆ ಗುರಿಯಿಟ್ಟು ಹೊಡೆದಿರುವುದನ್ನು ನೋಡಿದರೆ, ಸೇಡು ತೀರಿಸಿಕೊಳ್ಳುವ ಮನೋಭಾವದಿಂದ ಹೊಡೆದಿದ್ದಾರೆಂದು ಹೇಳಬಹುದು. ಅನೇಕರು ಬಲವಾದ ಪೆಟ್ಟು ತಿಂದು ಆಸ್ಪತ್ರೆಗಳಲ್ಲೇ ಈ ದಿವಸ ಕೂಡ ಇದ್ದಾರೆ. ಪೋಲೀಸರ ಈ ಅತ್ಯಾಚಾರಕ್ಕೆ ಸರಕಾರ ಹೇಳುವ ಕಾರಣವಾದರೂ ಏನು? ಹೊರಗಡೆಯವರು ಬಂದು ಗಲಾಟೆಮಾಡಿದ್ದಾರೆ, ಪ್ರಚೋದನೆ ಮಾಡಿದ್ದಾರೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗೆ ಒಂದುವೇಳೆ ಮಾಡಿದ್ದರೆ ಇಲ್ಲಿನ ಸಿ.ಐ.ಡಿ. ಗಳು ಮುಂತಾದವರೇನು ಮಾಡುತ್ತಿದ್ದರು? ಈ ವಿಚಾರವನ್ನು ತಮ್ಮ ಕೈಕೆಳಗಿರುವ ಪೋಲೀಸು ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಕೊಳ್ಳಬೇಕಾಗಿತು. ಏಕೆ ಆ ರೀತಿ ಹೊರಗಿನವರ ಮೇಲೆ ಕ್ರಮಕೈಕೊಳ್ಳಲಿಲ್ಲ? ಏಕೆ ಹೊರಗಿನವರು ನಮ್ಮ ದೇಶಕ್ಕೆ ಬಂದು ಗಲಾಟೆಗೆ ಅವಕಾಶ ಕೊಡದಂತೆ ತಡೆಗಟ್ಟಲಿಲ್ಲ? ಇದನ್ನು ಮಾಡಲು ಸರಕಾರದ ಕೈಲಾಗಲಿಲ್ಲ ಎಂಬುದು ಎದ್ದುಕಾಣುತ್ತದೆ. ಬೆಂಗಳೂರು ಮುಂತಾದ ಕಡೆಗಳಲ್ಲಿ ಸತ್ತವರ ಬಗ್ಗೆ ಅನುಕಂಪ ಕೂಡ ತೋರಿಸಲಿಲ್ಲ. ಅದಕ್ಕೆ ಕೂಡ ಸರಕಾರಕ್ಕೆ ಯೋಗ್ಯತೆಯಿಲ್ಲ. ಒಬ್ಬ ನಿರಪರಾಧಿಯಾದ ಹೆಂಗಸು ಅಂಗಡಿಗೆ ಸಾಮಾನನ್ನು ತರಲು ಹೋಗಿದ್ದಾಗ ಗುಂಡಿನೇಟಿಗೆ ಸಿಕ್ಕಿ ಸತ್ತಳು, ಇದು ನಡುಬೀದಿಯಲ್ಲಿ ಅದ ಕೆಲಸ. ಇದನ್ನು ಆಕೆಯ ಗಂಡ ಮುಖ್ಯ ಮಂತ್ರಿಗಳಿಗೆ ತಿಳಿಸಿದ. ಸಂಬಂಧಪಟ್ಟವರಿಗೆ ಸರಕಾರ ಕೊಂಚ ಪರಿಹಾರ ಕೊಡಬಹುದು. ನಮ್ಮ ಜಿಲ್ಲೆಯ ಒಬ್ಬ ಹುಡುಗ ನರಸಿಂಹರಾಜ ರಸ್ತೆಯಲ್ಲಿ ಗುಂಡಿನ ಏಟಿಗೆ ತುತ್ತಾದ, ಅವನು ಚಳವಳಿ ಮಾಡುವುದಕ್ಕೆ ಬಂದಿರಲಿಲ್ಲ.

Mr. CHAIRMAN.—The House will now rise and meet again after half-an-hour.

The House rose at Three of the Clock to re-assemble at Thirty Minutes past Three of the Clock.

The House re-assembled at Thirty Minutes past Three of the Clock.

[MR. DEPUTY SPEAKER in the Chair].

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ನಾನು ಬೆಂಗಳೂರು ನಗರದಲ್ಲಿ ಆದಂತಹ, ಗೋಳಿಬಾರು ಮತ್ತು ಪೋಲೀಸ್‌ನವರ ಅತ್ಯಾಚಾರದ ವಿಚಾರವಾಗಿ ಮಾತನಾಡುತ್ತಾ ಇದ್ದೆ. ಬೆಂಗಳೂರಿನಲ್ಲಿ ನಡೆದಂತಹ ಈ ಪೋಲೀಸ್‌ನವರ ಗೋಳಿಬಾರು ಮತ್ತು ಪೋಲೀಸ್‌ನವರು ವಿನಾಕಾರಣ

ವಿದ್ಯಾರ್ಥಿಗಳ ಮೇಲೆ ಅವರು ಇದ್ದಂತಹ ಹಾಸ್ಟೆಲ್‌ಗಳಿಗೆ ನುಗ್ಗಿ, ಕಾಲೇಜುಗಳಿಗೆ ನುಗ್ಗಿ ಆ ಮಕ್ಕಳ ಮೇಲೆ ಕೈ ಮಾಡಿ ಅವರನ್ನು ಹೊಡೆದು ಪ್ರಚೋದನೆಗೊಳಿಸಿ ಈ ದೇಶದಲ್ಲಿ ಇಷ್ಟೊಂದು ಪರಿಸ್ಥಿತಿ ಉಲ್ಬಣವಾಗುವುದಕ್ಕೆ ನಾನೀವತ್ತು ಪೋಲೀಸ್‌ನವರ ಬೇಜಾಬ್ದಾರಿ ವರ್ತನೆಯೇ ಕಾರಣ ಎಂದು ತಮ್ಮ ಮುಂದೆ ಹೇಳಬೇಕಾಗಿದೆ. ಇವತ್ತು ಈ ಪೋಲೀಸ್‌ನವರ ಅತ್ಯಾಚಾರದ ವಿಚಾರ ತಾವು ಯೋಚನೆ ಮಾಡುವುದಾದರೆ ಬೆಂಗಳೂರು ನಗರದಲ್ಲಾಗಲಿ, ಮೈಸೂರು ನಗರದಲ್ಲಾಗಲಿ ಮಂಗಳೂರು ನಗರದಲ್ಲಾಗಲಿ ಯಾವುದೇ ಪ್ರದೇಶದಲ್ಲಾಗಲಿ ಈ ಚಳುವಳಿ ಇಷ್ಟೊಂದು ಬೃಹತ್ ರೂಪವನ್ನು ತಾಳಬೇಕಾದರೆ ಏನು ಕಾರಣ ಇದೆ ಎಂದು ಹುಡುಕಿ ನೋಡಬೇಕಾಗಿದೆ. ಇವತ್ತು ಸರ್ಕಾರದವರು ಹೇಳುತ್ತಾರೆ ಈ ಚಳುವಳಿ ಇಷ್ಟೊಂದು ಉಲ್ಬಣವಾಗಬೇಕಾಗಿದ್ದರೆ ಇದಕ್ಕೆ ಹೊರಗಡೆಯವರ ಕೈವಾಡ ಇದೆ ಅಂತ ಹೇಳಿ ಆ ಒಂದು ಕಾರಣವನ್ನು ಮೇಲಿಂದ ಮೇಲೆ ಕೊಡುತ್ತಾ ಇದ್ದಾರೆ. ಈ ನಮ್ಮ ರಾಜ್ಯಪಾಲರ ಭಾಷಣದಲ್ಲೂ ಕೂಡ ಹೀಗಿದೆ:

> "Exploitation by anti-social elements, of student unrest in connection with the language question has caused some trouble in recent months."

ಅವರು ಹೇಳತಕ್ಕ ಕಾರಣ ಹೊರಗಿನವರ ಕೈವಾಡ ವಿದ್ಯಾರ್ಥಿಗಳ ಚಳುವಳಿ ಇಷ್ಟೊಂದು ಉಲ್ಬಣವಾಗುವುದಕ್ಕೆ ಕಾರಣ ಎಂದು ಹೇಳಿ ಜಾರಿಕೊಳ್ಳತಕ್ಕ ಕಾರಣವನ್ನು ಕೊಟ್ಟಿದ್ದಾರೆ, ಸರ್ಕಾರದವರಿಗೆ ಇವತ್ತು ಹೇಳುತ್ತೇನೆ, ತಾವು ಇಂತಹ ಜಾರು ಮಾತುಗಳಿಂದ ಇಂತಹ ಬೃಹತ್ ಪ್ರಶ್ನೆಗಳನ್ನು ನಿವಾರಿಸುವುದಕ್ಕೆ ನಿಮ್ಮಿಂದ ಎಂದೆಂದಿಗೂ ಸಾಧ್ಯವಿಲ್ಲ. ಇಷ್ಟೊಂದು ಸಂಖ್ಯೆಯಲ್ಲಿ ಹಳ್ಳಿ ಹಳ್ಳಿಗಳಲ್ಲಿ, ತಾಲ್ಲೂಕು ತಾಲ್ಲೂಕುಗಳಲ್ಲಿ, ಜಿಲ್ಲಾ ಕೇಂದ್ರಗಳಲ್ಲಿ, ಪ್ರತಿಯೊಂದು ನಗರದಲ್ಲೂ ಕೂಡ ಬೃಹತ್ ರೂಪದಲ್ಲಿ ಚಳುವಳಿ ಆಗಬೇಕಾಗಿದ್ದರೆ ಮನಸ್ಸಿನ ಹಿಂದೆ ಒಂದು ಅಶಾಂತಿಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ಇರಬೇಕು ಎಂಬುದನ್ನು ಸರ್ಕಾರದವರು ಅಳತೆ ಮಾಡಬೇಕು. ಏಕಾ ಏಕಿ ಯಾರೂ ಬಂದು ಹೇಳುವುದಿಲ್ಲ. ಇಡೀ ದೇಶಾದ್ಯಂತ ಈ ಒಂದು ಕಿಚ್ಚಿಗೆ ಒಳಗಾಗಬೇಕಾಗಿದ್ದರೆ ಇದು ಅಷ್ಟು ಸುಲಭವಾದ ಪ್ರಶ್ನೆ ಅಲ್ಲ. ಇವತ್ತು ಇದರ ಹಿಂದೆ ಭಾರಿ ಬೇರು ಇದೆ, ಅದನ್ನು ಕಂಡುಹಿಡಿಯುವುದು ಸರ್ಕಾರದವರ ಕರ್ತವ್ಯ ಎಂದು ಹೇಳುತ್ತಾ ಇದ್ದೇನೆ. ಇವತ್ತು ವಿದ್ಯಾರ್ಥಿಗಳ ಮನಸ್ಸಿನಲ್ಲಿ, ಯುವಕರ ಮನಸ್ಸಿನಲ್ಲಿ ಅಶಾಂತಿಯು ಅಲೆ ಎದ್ದಿದೆ. ಅದು ಇವತ್ತು ದೇಶದಲ್ಲಿ ಎಷ್ಟು ಬೃಹತ್ ರೂಪವನ್ನು ತಾಳಿದೆ ಅದಕ್ಕೆ ಏನು ಕಾರಣ, ಮೂಲ ಎಲ್ಲಿದೆ ಎಂಬ ಕಾರಣವನ್ನು ಕಂಡುಹಿಡಿದು ಅದಕ್ಕೆ ಏನು ಸೂತ್ರವನ್ನು ಕಂಡುಹಿಡಿಯಬೇಕೆಂಬುದು ಇವತ್ತು ಸರ್ಕಾರದ ದೊಡ್ಡ ಜವಾಬ್ದಾರಿಯಾಗಿದೆ. ಅವರು ಆ ಗೋಜಿಗೆ ಹೋಗದೆ, ವಿದ್ಯಾರ್ಥಿಗಳಲ್ಲಿ ಇಷ್ಟೊಂದು ಅತೃಪ್ತಿ ಇರುವುದಕ್ಕೆ ಏನು ಕಾರಣ ಎಂಬುದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡದಿದ್ದರೆ, ವಿದ್ಯಾರ್ಥಿಗಳು ಈ ದೇಶದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮರೆತು ಎಲ್ಲವನ್ನೂ ತ್ಯಾಗಮಾಡುವುದಕ್ಕೂ ಸಿದ್ಧವಾಗಿದ್ದಾರೆ. ಮೇಲಿಂದ ಮೇಲೆ ಈ ಒಂದು ದೊಡ್ಡ ಪ್ರಶ್ನೆ ಬರುತ್ತಾ ಇದೆ ಇದನ್ನು ನಿವಾರಣೆ ಮಾಡತಕ್ಕ ಶಕ್ತಿ ಮತ್ತು ವ್ಯಕ್ತಿಗಳು ಈ ದೇಶದಲ್ಲಿ ಯಾರೂ ಇಲ್ಲವೆ ಅನ್ನತಕ್ಕ ಸಂದೇಹ, ಸಂಶಯ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇಷ್ಟೊಂದು ಪರಿಣಾಮವನ್ನುಂಟುಮಾಡಿದೆ ಎಂಬುದನ್ನು ಈ ದೇಶದ ನಾಯಕತ್ವವನ್ನು ಹೊತ್ತಿರತಕ್ಕ ಈ ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಅದು ಬಿಟ್ಟು ಯಾರೋ ತುಂಟರ ಸಹವಾಸಕ್ಕೆ ಬಿದ್ದರು, ಆ ತುಂಟರೆಲ್ಲಾ ಸೇರಿ ಗಲಾಟೆ ಮಾಡಿದ್ದಾರೆ ಎಂದು ಹೇಳಿರುವುದೇನಿದೆ ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು, ಇದು ಒಂದು ಹೇಡಂಭೂತವಾಗಿ, ಇಷ್ಟೊಂದು ಪ್ರಚೋದನೆಯನ್ನುಂಟು ಮಾಡಬೇಕಾದರೆ ಅವರ ಭವಿಷ್ಯಕ್ಕೆ ಏನು ತೊಂದರೆ ಇದೆ ಎಂದು ಯೋಚನೆ ಮಾಡಿ ಅದಕ್ಕೆ ಕಾರಣವನ್ನು ಕಂಡುಹಿಡಿಯುವುದಕ್ಕೆ ಬದಲಾಗಿ ಅವರ ಮೇಲೆ ಪೋಲೀಸ್‌ನವರನ್ನು ಛೂ ಬಿಟ್ಟು ಬೆಂಗಳೂರು, ಮೈಸೂರು ನಗರಗಳಲ್ಲಿ ಅವರನ್ನು ಕೊಲೆ ಮಾಡಿದ್ದಾರೆ, ಕೊಂದಿದ್ದಾರೆ. ಈ ಹತ್ಯಾಕಾಂಡಕ್ಕೆ ಈ ಸರ್ಕಾರವೇ ಕಾರಣ ಎಂದು ಇವತ್ತಿನದಿವಸ ನಾನು ಹೇಳಬೇಕಾಗಿದೆ. ಇಷ್ಟು ಹತ್ಯಾಕಾಂಡ ನಡೆದರೂ ನೀವೇನು ಮಾಡಿದಿರಿ? ಸತ್ತವರ ಬಗ್ಗೆ ಏನು ಮಾಡಬೇಕೆಂಬ ಇತ್ಯರ್ಥಮಾಡತಕ್ಕ ಶಕ್ತಿ ಸರ್ಕಾರಕ್ಕೆ ಇದೆಯೇ ಎಂದು ಕೇಳುತ್ತೇನೆ. ಬೆಂಗಳೂರು ನಗರದಲ್ಲಿ ಎರಡು ಮೂರು ಸಾರಿ ಗೋಳಿ ಬಾರು ಆಗಿದೆ. ಅನೇಕ ಜನ ಸತ್ತಿದ್ದಾರೆ. ಇವತ್ತು ಸರ್ಕಾರ ಮಾಡಿರತಕ್ಕ ಕಾರ್ಯ ಏನು? ಪೋಲೀಸ್ ಮುಖ್ಯಾಧಿಕಾರಿ, ಐ. ಜಿ. ಪಿ. ಅವರು ಒಂದು ಹೇಳಿಕೆಯಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಷನರವರನ್ನು ಮೆಜಿಸ್ಟ್ರೀರಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ನಿಯಮಿಸಿದ್ದೇವೆ ಎಂದು ಹೇಳುತ್ತಾರೆ. ಪ್ರಜಾಸತ್ತಾತ್ಮಕ ಸರ್ಕಾರ ಅಂತ ಹೇಳತಕ್ಕವರು ಇವತ್ತು ತಲೆತಗ್ಗಿಸುವ ರೀತಿಯಲ್ಲಿ ಒಬ್ಬ ಪೋಲೀಸ್ ಅಧಿಕಾರಿ ಈ ಹೇಳಿಕೆಯನ್ನು ಕೊಟ್ಟಿದ್ದಾನೆ.

(ಶ್ರೀ ಎಸ್. ಶಿವಪ್ಪ)

ಒಬ್ಬ ಅಸಿಸ್ಟೆಂಟ್ ಕಮಿಷನರು, ಒಬ್ಬ ರೆವಿನ್ಯೂ ಅಧಿಕಾರಿ ಯಾರು ಇವತ್ತು ರೆವಿನ್ಯೂ ಮಿನಿಸ್ಟರ್ ಮನೆಯಲ್ಲಿ ಇದ್ದಾರೆ ಅಂತಹ ಅಧಿಕಾರಿ ಸರ್ಕಾರದ ಮೇಲೆ ಅವರ ವಿರುದ್ಧ ಏನಾದರೂ ಬರೆಯುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ (ಕಂದಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಮೆಜಿಸ್ಟೀರಿಯಲ್ ಕೆಪ್ಯಾಸಿಟಿಯಲ್ಲಿ ಜ್ಯುಡೀಷಿಯಲ್ ಆಫೀಸರಾಗಿ ಅವರನ್ನು ನೇಮಕ ಮಾಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ಅದೇ ನಾನು ಹೇಳುವುದು, ಅಂತಹವರಿಂದ ಜ್ಯುಡಿಷಿಯಲ್ ಎನ್‌ಕ್ವೈರಿ ಎಂದರೆ ಎಷ್ಟೊಂದು ಹಾಸ್ಯಾಸ್ಪದ ಎಂದು ಇದರಿಂದಲೇ ಕಾಣುತ್ತದೆ. ರೆವಿನ್ಯೂ ಮಿನಿಸ್ಟರಿಂದ ಫೋನ್ ಬಂತು ಎಂದರೆ ಫೋನ್ ಬಂದ ಕೂಡಲೇ ಎದ್ದುನಿಂತುಕೊಳ್ಳುತ್ತಾರೆ, ಫೋನ್ ಬಂತು ಅಂದರೆ ಇಷ್ಟೊಂದು ಭಯ ಇರುವಾಗ ಅಂತಹ ವ್ಯಕ್ತಿಯನ್ನು ಚುನಾಯಿಸಿ ನಿಮಗೆ ಎದುರಾಗಿ ರಿಪೋರ್ಟ್ ಕೊಡತಕ್ಕ ಅಧಿಕಾರಿ ಇವತ್ತಿನ ದಿವಸ ಯಾರಾದರೂ ಇದ್ದರೆ ಅವರನ್ನು ಅರ್ಧ ಘಳಿಗೆಯೊಳಗೆ ಟ್ರಾನ್ಸ್‌ಫರ್ ಮಾಡಿಬಿಡುತ್ತೀರಿ, ಇಲ್ಲದೇ ಇದ್ದರೆ ಅವರಿಗೆ ಶಿಕ್ಷೆ ಮಾಡುತ್ತೀರಿ ಇಂತಹ ಕಾಲದಲ್ಲಿ ಅವರಿಂದ ಮೆಜಿಸ್ಟ್ರೀರಿಯಲ್ ಎನ್‌ಕ್ವೈರಿ ಎಂದರೆ ಇದರಿಂದ ಏನು ನ್ಯಾಯ ದೊರಕುತ್ತದೆ ? ಇದನ್ನು ಯಾರು ತಾನೆ ಒಪ್ಪುವುದಕ್ಕೆ ಸಾಧ್ಯ ? ಇಂತಹ ಕೇವಲ ಅಣುಕು ಮಾತುಗಳಿಂದ ಈ ದೇಶದಲ್ಲಿ ಜ್ಯುಡೀಷಿಯಲ್ ಎನ್‌ಕ್ವೈರಿಗೆ ಏನಾದರೂ ಇವತ್ತಿನದಿವಸ ಮಹತ್ವ ಇದ್ದರೆ ಅದನ್ನೂ ಕೂಡ ಸರ್ಕಾರ ಕಳೆದಂತಾಗುತ್ತದೆ. ದೊಡ್ಡಬಳ್ಳಾಪುರದ ಗೋಳಿಬಾರಾಗಲಿ, ಮಂಗಳೂರಿನಲ್ಲಾಗಿರತಕ್ಕ ಗೋಳೀಬಾರಾಗಲಿ ಯಾವುದನ್ನೇ ತೆಗೆದುಕೊಂಡರೂ ಕೂಡ ಸರ್ಕಾರ ಈ ದೇಶದಲ್ಲಿದೆಯೇ ಎನ್ನತಕ್ಕ ಪ್ರಶ್ನೆ ಇದೆ ? ಕಳೆದ ಎರಡು ತಿಂಗಳಿನಿಂದ, ಡಿಸೆಂಬರ್ ಅಧಿವೇಶನವಾದ ಮೇಲೆ ಈ ಫೆಬ್ರವರಿ ಅಧಿವೇಶನ ಸೇರುವುದಕ್ಕೆ ಮುಂಚೆ ಈ ಎರಡು ತಿಂಗಳಿನಲ್ಲಿ ಪೋಲೀಸ್‌ನವರು ಗೂಂಡಾಗಿರಿಯಿಂದ ಈ ದೇಶದಲ್ಲಿ ಕಾನೂನೇ ಇಲ್ಲ ಎನ್ನತಕ್ಕ ರೀತಿಯಲ್ಲಿ ಪೋಲೀಸ್‌ನವರ ಸಹಾಯದಿಂದ, ಪೋಲೀಸ್‌ನವರ ಗುಂಡುಗಳಿಂದ, ಪೋಲೀಸ್‌ನವರ ಗೋಳಿಬಾರಿನಿಂದ ಈ ದೇಶವನ್ನು ಆಳುತ್ತೇವೆ ಎನ್ನತಕ್ಕ ಧೋರಣೆಯಿಂದ ಹೋಗಿದ್ದೀರೇ ಹೊರತು ಇವತ್ತು ಜನತೆ ಇಷ್ಟೊಂದು ಉದ್ರೇಕಗೊಂಡಿರಬೇಕಾದರೆ ಕಾರಣವೇನು ಎಂಬುದನ್ನು ಕಂಡು ಹಿಡಿಯತಕ್ಕ ಸಾಹಸವನ್ನು ಈ ಸರ್ಕಾರ ಮಾಡಿಲ್ಲ, ಮಾಡತಕ್ಕ ಛಾತಿ ಇಲ್ಲ, ಧೈರ್ಯ ಇಲ್ಲ. ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಅವರ ಮನಸ್ಸನ್ನು ತಿರುಗಿಸತಕ್ಕ ಒಂದು ಮುಂದಾಳತ್ವ ಅಥವಾ ನಾಯಕತ್ವ ಈ ಸರ್ಕಾರಕ್ಕೆ ಇಲ್ಲದೇ ಇರುವುದರಿಂದ ಈ ಒಂದು ಪ್ರಚೋದನೆ ಇಷ್ಟೊಂದು ಘೋರ ರೂಪವನ್ನು ತಾಳಿರುವುದಕ್ಕೆ ಸಾಕ್ಷಿಯಾಗಿದೆ. ಯುವಕರು ಈ ದಿವಸ ಈ ಸರ್ಕಾರದಲ್ಲಿ ತಮಗೆ ನಂಬಿಕೆಯಿಲ್ಲ ಅನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಇಷ್ಟೆಲ್ಲಾ ಗೊಂದಲಕ್ಕೆ ಕಾರಣವೇನು ಎಂಬುದನ್ನು ನಾವು ಈಗ ಪರಿಶೀಲನೆ ಮಾಡಬೇಕಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿಗಳ ಚಳುವಳಿ ಅಷ್ಟು ಘೋರ ರೂಪವನ್ನು ತಾಳುವುದಕ್ಕೇನು ಕಾರಣ ಅನ್ನುವುದನ್ನು ನಾವು ಅಳತೆಮಾಡಬೇಕಾಗಿದೆ, ಅದನ್ನು ಪರಿಶೀಲನೆ ಮಾಡಬೇಕಾಗಿದೆ ಮತ್ತು ಅದರ ಬಗ್ಗೆ ಒಂದು ಸೂಕ್ತವಾದ ಪರಿಹಾರಮಾರ್ಗವನ್ನು ಕಂಡುಹಿಡಿಯಬೇಕಾದ್ದು ನಮ್ಮೆಲ್ಲರ ಜವಾಬ್ದಾರಿ ಆಗಿದೆ. ಆದರೆ ಇಷ್ಟೆಲ್ಲಾ ಬೃಹದಾಕಾರದ ಚಳುವಳಿಗೆ ಮೂಲ ಕಾರಣ ಭಾಷಾ ಗೊಂದಲವೇ ಎಂಬುದನ್ನು ನಾವುಗಳು ಯಾರೂ ಮರೆಯಬಾರದು. ನಮ್ಮ ವಿದ್ಯಾರ್ಥಿಗಳು ಯಾವ ಭಾಷೆಯಲ್ಲಿ ತಮ್ಮ ಪಾಠಪ್ರವಚನಗಳನ್ನು ಮುಂದುವರಿಸಬೇಕು, ಅವರು ಎಷ್ಟು ಭಾಷೆಗಳನ್ನು ಕಲಿಯಬೇಕು ಅನ್ನುವ ವಿಚಾರ ಈ ದಿವಸ ಒಂದು ಭೃಹದಾಕಾರ ತಾಳಿ ನಿಂತಿದೆ. ಈ ಪ್ರಶ್ನೆ ಈ ದಿವಸ ನಮ್ಮ ವಿದ್ಯಾರ್ಥಿ ವೃಂದವನ್ನು ಕಾಡುತ್ತಿದೆ. ಈ ಸಮಸ್ಯೆ ಇಡೀ ದೇಶದಲ್ಲಿರತಕ್ಕ ವಿದ್ಯಾರ್ಥಿವೃಂದವನ್ನು ಆವರಿಸಿದೆ. ಅದಕ್ಕೆ ನಾವು ಈ ದಿವಸ ಒಂದು ಪರಿಹಾರವನ್ನು ಕಂಡು ಹಿಡಿಯದಿದ್ದರೆ ಸಾಧ್ಯವೇ ಇಲ್ಲ. ಇಲ್ಲಿಯ ತನಕ ಇಂಥ ಒಂದು ಜಟಿಲ ಪ್ರಶ್ನೆಯ ಬಗ್ಗೆ ಕಣ್ಣು ಮುಚ್ಚಿ ಕುಳಿತಿದ್ದ ಸಮಾಜದ ಕಣ್ಣುಗಳನ್ನು ಅರಳುವಂತೆ ಮಾಡಿದುದಕ್ಕಾಗಿ ನಾನು ಈ ಸಂದರ್ಭದಲ್ಲಿ ಆ ನಮ್ಮ ವಿದ್ಯಾರ್ಥಿವೃಂದಕ್ಕೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ; ಅವರಿಗೆ ಹಾಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆ ವಿದ್ಯಾರ್ಥಿಗಳು ಈ ಭಾಷಾ ವಿಚಾರದಲ್ಲಿ ದೇಶದ ಹಾಗೂ ಸರ್ಕಾರದ ಕಣ್ಣುಗಳನ್ನು ಅಗಲಿಸುವಂತೆ ಪ್ರಯತ್ನ ಮಾಡಿದ್ದಾರೆ. ಮತ್ತು ಈ ಭಾಷಾ ಸಮಸ್ಯೆ ಹೇಗೆ ಬೃಹದ್ರೂಪ ತಾಳುತ್ತಿದೆ ಎಂಬುದನ್ನು ಎತ್ತಿ ತೋರಿಸಿದ್ದಾರೆ. ಈಗಲಾದರೂ ಸರ್ಕಾರ ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ತೀವ್ರತರದ ಗಮನವನ್ನು ಕೊಡಬೇಕಾಗಿದೆ. ಇಲ್ಲಿಯವರೆಗೂ ನಮ್ಮ ಮುಖ್ಯ ಮಂತ್ರಿಗಳು ಈ ಭಾಷಾ ಗೊಂದಲದ ಬಗ್ಗೆ ಅವರು ದೆಹಲಿಯಲ್ಲಿದ್ದಾಗ ಒಂದು ಮಾತು, ಅಲ್ಲಿಂದ ಬೆಂಗಳೂರಿಗೆ

ಬಂದಾಗ ಇಲ್ಲೇ ಒಂದು ಮಾತು. ಹೀಗೆ ಒಂದು ನಿಲುವಿಲ್ಲದ ಭಾಷಣಗಳನ್ನು ಮಾಡಿದ್ದು ವಿದ್ಯಾರ್ಥಿವೃಂದದಲ್ಲಿ ದೊಡ್ಡ ಗೊಂದಲಕ್ಕೆ ಅವಕಾಶವನ್ನುಂಟು ಮಾಡಿತು. ಪಾರ್ಲಿಯಮೆಂಟಿನ ಮುಂದೆ ಅಥವಾ ಕೇಂದ್ರ ಸರ್ಕಾರದ ಮುಂದೆ ಹೋಗಿ ದಕ್ಷಿಣ ಭಾರತದ ಮಕ್ಕಳಿಗೆ ಇದರಿಂದ ಭಾರಿ ಅನ್ಯಾಯವಾಗಿದೆ, ಅವರ ಮೇಲೆ ಒಂದು ಹೆಚ್ಚಿನ ಹೊರೆ ಬಿದ್ದಿದೆ ಎಂದು ಹೇಳತಕ್ಕ ಧಾತಿ ನಮ್ಮ ಮಂತ್ರಿಗಳಿಗೆ ಇಲ್ಲವಾಯಿತು. ಇಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಒಂದು ಸಮಾಧಾನವಾಗತಕ್ಕ ನುಡಿಯನ್ನು ಹೇಳುವುದಕ್ಕೆ ಇವರಿಗೆ ಮನಸ್ಸು ಬರಲಿಲ್ಲ. ಜೊತೆಗೆ ನಮ್ಮ ನಾಯಕರು ಇಲ್ಲೊಂದು ಮಾತು ದೆಹಲಿಯಲ್ಲೊಂದು ಮಾತು ಹೇಳುವುದನ್ನು ಮನಗಂಡ ವಿದ್ಯಾರ್ಥಿವೃಂದ ನಮ್ಮ ನಾಯಕರಲ್ಲಿ ಶಂಕೆ ಅನುಮಾನಗಳನ್ನು ವ್ಯಕ್ತಪಡಿಸುವುದಕ್ಕೆ ಹೊರಟಿದ್ದರಲ್ಲಿ ಆಶ್ಚರ್ಯವೇನಿದೆ? ನಮ್ಮ ನಾಯಕರಿಗೆ ದೇಶದಲ್ಲಿ ಎದ್ದಿರತಕ್ಕ ಚಳುವಳಿಗೆ ಮೂಲ ಕಾರಣವೇನು ಎಂಬುದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡದೆ, ದೇಶದ ವಿದ್ಯಾರ್ಥಿ ವೃಂದದಲ್ಲಿ ಉಂಟಾಗಿರತಕ್ಕ ಸಂಶಯಗಳನ್ನು ನಿವಾರಣೆ ಮಾಡುವುದಕ್ಕೆ ಮಾರ್ಗವನ್ನು ಕಂಡುಹಿಡಿಯುವುದರ ಬದಲು ನಮ್ಮ ದೇಶದಲ್ಲಿ ಬೇರೆ ಹೊರಗಿನವರು ಯಾರೋ ಇಲ್ಲಿಗೆ ಬಂದು ಇಲ್ಲಿ ಭಾಷಾ ಗೊಂದಲವನ್ನು ಎಬ್ಬಿಸಿದ್ದಾರೆ ಎಂಬ ಒಂದು ಕುಂಟು ನೆಪವನ್ನು ಹೇಳಿಕೊಂಡು ಯಾರನ್ನೊ ನಾವು ಜರೆಯುವುದಕ್ಕೆ ಪ್ರಯತ್ನ ಮಾಡಿದ್ದು ಬಹಳ ಕ್ಷುಲ್ಲಕತನ. ಅವರು ನ್ಯಾಯವಾಗಿ ಮಾಡಬೇಕಾಗಿದ್ದುದು ಏನು? ನಮ್ಮ ವಿದ್ಯಾರ್ಥಿವೃಂದದಲ್ಲಿ ಇಷ್ಟು ಬೃಹದಾಕಾರದ ಚಳುವಳಿಯೇಕೆ ಎದ್ದಿದೆ, ಇದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿದು ಅದಕ್ಕೆ ತಕ್ಕ ಪರಿಹಾರ ಮಾರ್ಗವನ್ನು ಕಂಡುಹಿಡಿಯಬೇಕಾದ್ದು ದೇಶದ ಹಿತದೃಷ್ಟಿಯನ್ನು ಕಾಪಾಡತಕ್ಕ ಜನರ ನಿಲುವದು. ಕಳೆದ ಡಿಶಂಬರ್ ತಿಂಗಳಲ್ಲಿ ನಮ್ಮ ಪಾರ್ಲಿಮೆಂಟಿನ ಮುಂದೆ ಯಾವ ಆ ಒಂದು ಭಾಷಾ ಸಮಸ್ಯೆಗೆ ಸಂಬಂಧಪಟ್ಟ ನಿರ್ಣಯವು ಬಂದಿತೋ ಮತ್ತು ಅದು ಯಾವಾಗ ಅಲ್ಲಿ ಪಾಸಾಯಿತೋ ಅಂದಿನಿಂದಲೂ ನಮ್ಮ ಇಡೀ ದಕ್ಷಿಣ ಭಾರತದ ರಾಜ್ಯಗಳಲ್ಲಿ ಭಾಷಾ ವಿಚಾರವಾಗಿ ದೊಡ್ಡ ಗೊಂದಲವೇ ಎದ್ದಿದೆ. ಅಂದಿನಿಂದ ನಮ್ಮ ವಿದ್ಯಾರ್ಥಿವೃಂದದ ಮೇಲೆ ಒಂದು ಭಾರಿ ಹೊರೆ ಬಿತ್ತು. ಇದರ ಬಗ್ಗೆ ಜನರು ತಮ್ಮ ಕಣ್ಣನ್ನು ತೆರೆಯದೆ ಹಾಗೇ ಕುಳಿತಿದ್ದುದನ್ನು ಕಂಡ ನಮ್ಮ ವಿದ್ಯಾರ್ಥಿವೃಂದ ಅವರ ಕಣ್ಣನ್ನು ಇಂದು ಅರಳಿಸಿ ನೋಡುವಂತೆ ಮಾಡಿದೆ. ಎಲ್ಲರ ಮನಸ್ಸಿನಲ್ಲೂ ವಿಚಾರದ ಅಲೆಗಳನ್ನೆಬ್ಬಿಸಿದೆ. ಅದನ್ನು ನಾವುಗಳ್ಯಾರೂ ಮರೆಯುವ ಹಾಗಿಲ್ಲ. ಆದರೆ ಈ ವಿಚಾರದಲ್ಲಿ ಯಾರು ಆಗಲೇ ಮುಂದೆ ನುಗ್ಗಿ ಒಂದು ಮುಂದಾಳತ್ವವನ್ನು ವಹಿಸಿ ಒಂದು ಭಾಷಾ ಗೊಂದಲದ ಬಗ್ಗೆ ಮಾರ್ಗದರ್ಶನ ಮಾಡಿಸಿದ್ದಾರೋ ಅಂಥವರ ಬಗ್ಗೆ ನಾವು ಹಗುರವಾಗಿ ಮಾತನಾಡಿ ಅವರನ್ನು ಅಲ್ಲಗಳೆಯುವುದು ಸರಿಯಾದ್ದಲ್ಲ. ಅದನ್ನು ಕೈ ಬಿಟ್ಟು ನಾವಿಲ್ಲಿ ನಮ್ಮ ವಿದ್ಯಾರ್ಥಿ ವೃಂದದಲ್ಲಿ ತಲೆದೋರಿರತಕ್ಕ ಗೊಂದಲವನ್ನು ತಪ್ಪಿಸುವುದಕ್ಕಾಗಿ ಏನು ಪರಿಹಾರ ಮಾರ್ಗವನ್ನು ಕೈಗೊಂಡಿದ್ದೇವೆ ಎಂಬುದನ್ನು ಪ್ರಶ್ನೆ ಹಾಕಿಕೊಳ್ಳಬೇಕಾಗಿದ್ದು ಮುಖ್ಯವಾದಂಥ ವಿಷಯವಾಗಿವೆ. ಈ ದಿವಸ ನಾವು ನಮ್ಮ ವಿದ್ಯಾರ್ಥಿಗಳ ಮೇಲೆ ಬಿದ್ದಿರತಕ್ಕ ಭಾಷಾ ಹೊರೆಯ ತೂಕವನ್ನು ಅಳತೆಮಾಡತಕ್ಕ ಪ್ರಸಂಗ ಉಂಟಾಗಿದೆ. ಈ ಭಾಷಾ ಗೊಂದಲವನ್ನು ತಪ್ಪಿಸುವುದಕ್ಕೆ ತ್ರಿಭಾಷಾ ಸೂತ್ರ ಒಂದೇ ದಾರಿ ಎಂಬುದಾಗಿ ನಾವೆಲ್ಲರೂ ಇಲ್ಲಿಯತನಕ ಹೇಳುತ್ತಲೇ ಬಂದಿದ್ದೇವೆ. ಆದರೆ ಇನ್ನು ಈ ಉಪದೇಶದಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಹಿಂದೀ ದುರಭಿಮಾನಿಗಳು ಈ ಹಿಂದಿಯನ್ನು ದೇಶಾದ್ಯಂತವೂ ಎಲ್ಲಾ ಕಡೆಗಳಿಗೂ ಹರಡಬೇಕು ಇದನ್ನು ರಾಷ್ಟ್ರಭಾಷೆಯನ್ನಾಗಿ ಮಾಡಬೇಕು ಎಂಬ ಹಟಮಾರಿತನ ಅವರಲ್ಲಿ ಹುಟ್ಟಿದ್ದೇ ದಕ್ಷಿಣದಲ್ಲಿ ವಿದ್ಯಾರ್ಥಿಗಳ ಪ್ರಚೋದನೆಗೆ ಮೂಲ ಕಾರಣವಾಯಿತು. ನಮ್ಮ ವಿದ್ಯಾರ್ಥಿ ವೃಂದದಲ್ಲಿ ತಮ್ಮ ಪಾಠಪ್ರವಚನಗಳು ಯಾವ ಭಾಷೆಯಲ್ಲಿ ಮುಂದುವರಿಯಬೇಕು, ನಾವು ಎಷ್ಟು ಭಾಷೆಗಳನ್ನು ಕಲಿಯಬೇಕು, ನೌಕರಿಗಳಿಗೆ ಹೋಗಬೇಕಾದರೆ, ಹೆಚ್ಚಿನ ಜ್ಞಾನಾರ್ಜನೆಯಾಗಬೇಕಾದರೆ ನಾವು ಯಾವ ಭಾಷೆಯನ್ನು ಕಲಿಯಬೇಕು ಅನ್ನುವುದು ಅವರ ಮನಸ್ಸಿನಲ್ಲಿ ತುಂಬಾ ಕಳವಳವನ್ನು ಉಂಟುಮಾಡಿದೆ. ನಾವು ವಿದ್ಯಾರ್ಥಿಗಳಿಗೆ ಒತ್ತಾಯ ಮಾಡಿ ನೀವು ಇಷ್ಟು ಭಾಷೆಗಳನ್ನು ಕಲಿಯಲೇ ಬೇಕು ಅಂದರೆ ಅದು ಸಾಧ್ಯವಿಲ್ಲದ ಮಾತು. ಭಾಷೆಯ ಬಗ್ಗೆ ನಾವು ಯಾರ ಮೇಲೂ ಒಂದು ಒತ್ತಾಯವನ್ನು ಹಾಕಿ ಅದನ್ನು ಸಾಧಿಸುತ್ತೇವೆಂದರೆ ಅದು ಸಫಲವಾಗುವುದಿಲ್ಲ. ಅದು ಹಿಂದಿ ಭಾಷೆಯಾಗಲೀ, ಇಂಗ್ಲೀಷ್ ಭಾಷೆಯಾಗಲಿ ಅಥವಾ ಮತ್ತೆ ಯಾವ ಭಾಷೆಯೇ ಆಗಲಿ ಅದನ್ನು ಕಲಿಯಬೇಕೆಂಬ ಆಕಾಂಕ್ಷೆ ಅವರ ಹೃದಯಾಂತರಾಳದಿಂದ ಬರಬೇಕು, ಅಲ್ಲದಿದ್ದರೆ ಅದು ಸಾಧ್ಯವಿಲ್ಲ. ಹೀಗೆ ಕಲಿಯತಕ್ಕ ಭಾಷೆ ಅದು ಯಾವುದೇ ಆಗಲಿ ಅದು ಹೃದಯಾಂತರಾಳದಿಂದ ಮೂಡಿಬಂದರೆ ಒಳ್ಳೆಯದು. ಆದರೆ ಈ ದಿವಸ ಪಾರ್ಲಿಮೆಂಟಿನಲ್ಲಿ ಪಾಸಾಗಿರತಕ್ಕ ಆಭಾಷಾ ಮಸೂದೆಗೆ ಸಂಬಂಧಪಟ್ಟ ನಿರ್ಣಯದಿಂದ ದಕ್ಷಿಣ ಭಾರತದ ವಿದ್ಯಾರ್ಥಿಗಳಿಗೆ ಭಾಷೆಯ ಭಾರ ಹೆಚ್ಚಾಗಿದೆ. ಆ ಹಿಂದೀ ಪ್ರದೇಶದಲ್ಲಿರತಕ್ಕವರು ಒಂದು ಹಿಂದೀ ಭಾಷೆಯನ್ನು ಕಲಿತರೆ ಸಾಕು. ಏತಕ್ಕೆಂದರೆ, ಅದು ಅವರಿಗೆ ಮಾತೃ ಭಾಷೆಯೂ ಆಗಿದೆ. ರಾಷ್ಟ್ರ

(ಶ್ರೀ ಎಸ್. ಶಿವಪ್ಪ)

ಭಾಷೆಯೂ ಆಗಿದೆ; ಮತ್ತು ಪ್ರದೇಶ ಭಾಷೆಯೂ ಅದೇ ಆಗಿದೆ. ಪಾರಿಭಾಷಿಕ ಭಾಷೆಯೂ ಅವರಿಗೆ ಅದೇ ಆಗಿದೆ. ಇಲ್ಲಿ ಬಂದಿರತಕ್ಕದ್ದು ಮೂರು ಭಾಷೆ ಅಥವಾ ಎರಡು ಭಾಷೆ ಅನ್ನುವುದು ಮುಖ್ಯ ವಲ್ಲ. ಈ ಭಾಷಾ ಹೊರೆ ಇಡೀ ಭರತಖಂಡದಲ್ಲಿ ವಿದ್ಯಾಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳಿಗೆಲ್ಲಾ ಒಂದೇ ಸಮನಾಗಿರಬೇಕು. ಒಂದು ತೂಕದಲ್ಲಿರಬೇಕು ಅನ್ನುವುದು ಸರ್ವ ಸಮ್ಮತವಾದ ವಿಚಾರ. ಇಡೀ ಭರತಖಂಡದ ವಿದ್ಯಾರ್ಥಿ ವೃಂದಕ್ಕೆಲ್ಲಾ ಒಂದೇ ತೂಕದಲ್ಲಿ ವ್ಯಾಸಂಗ ಮಾಡತಕ್ಕ ಒಂದು ಪದ್ಧತಿಯನ್ನು ಕಂಡುಹಿಡಿಯಬೇಕಾದ ಒಂದು ಸಮಸ್ಯೆ ಇಂದು ಉಂಟಾಗಿದೆ. ಅದನ್ನು ನಾವು ಇಂದು ಎದುರಿಸಬೇಕಾಗಿದೆ. ಇದಕ್ಕಾಗಿ ನಾವು ಎಲ್ಲರಿಗೂ ಅನ್ವಯಿಸತಕ್ಕಂಥ ಒಂದು ಸೂತ್ರ ವನ್ನು ಕಂಡುಹಿಡಿಯಬೇಕಾಗಿದೆ. ಅಂಥಾ ಒಂದು ಸೂತ್ರ ಯಾವುದಿದೆ ಎಂದರೆ :

"Pro-regional, Pro-equality and not anti anything."

ನಮಗೆ ರಾಜ್ಯ ಭಾಷೆ ಒಂದು ಬೇಕೇ ಬೇಕು. ಅದರ ಜೊತೆಗೆ ಪ್ರೋ ಈಕ್ವಾಲಿಟಿ ಅಂದರೆ ಅವನು ಯಾವ ರಾಜ್ಯದವನೇ ಆಗಿರಲಿ, ಅವನು ಭಾರತೀಯನಾಗಿದ್ದಾನೆ ಎಂದು ಭಾವಿಸಿ ಯಾವ ಒಂದು ಅಂತರವನ್ನಾಗಲೀ ಭೇದವನ್ನಾಗಲೀ ಮಾಡುವುದಕ್ಕೆ ಅವಕಾಶವಿಲ್ಲದಂತೆ ಮಾಡುವುದು ಮತ್ತು ಭಾರತದ ಯಾವ ಮೂಲೆಯಲ್ಲಿ ಯಾರು ವಿದ್ಯಾಭ್ಯಾಸ ಮಾಡಿದರು ಎಲ್ಲರಿಗೂ ಈ ಭಾಷೆಯ ಭಾರ ಒಂದೇ ತೂಕದಲ್ಲಿರುವಂತೆ ಮಾಡತಕ್ಕದ್ದು, ಎಲ್ಲರನ್ನೂ ಒಂದು ಸಮ ಭಾವನೆಯಿಂದ ಕಾಣತಕ್ಕದ್ದು ಆಗ ಯಾರಿಗೂ ಈ ಆಂಟಿ ಹಿಂದೀ, ಆಂಟಿ ಮರಾಠಿ, ಆಂಟಿ ಇಂಗ್ಲೀಷ್, ಆಂಟಿ ತಮಿಳು ಅನ್ನುವ ಭೇದವೇ ಇರುವುದಿಲ್ಲ. ಯಾರು ಯಾರಿಗೆ ಯಾವ ಯಾವ ಭಾಷೆ ಬೇಕೋ ಅದನ್ನು ಅವರು ಕಲಿಯಲಿ. ಆದರೆ ನಾವು ಮೊದಲು ನಮ್ಮ ಮಾತೃ ಭಾಷೆಗೆ ಮೊದಲು ಹೆಚ್ಚಿನ ಗೌರವವನ್ನು ಕೊಡಬೇಕು. ಅದಕ್ಕೆ ನಾವು ಪ್ರಥಮ ಸ್ಥಾನವನ್ನು ಕೊಡಬೇಕು. ಆದರೆ ಇಲ್ಲಿಯವರೆಗೂ ನಾವು ನಮ್ಮ ಮಾತೃ ಭಾಷೆಗೂ ರಾಜ್ಯ ಭಾಷೆಗೂ ಮಾಡಿರತಕ್ಕ ಅಪಮಾನ ಅಗೌರವ ಅಷ್ಟಿಷ್ಟಲ್ಲ. ನಮ್ಮ ರಾಜ್ಯದಲ್ಲಿ 1945 ಕ್ಕೆ ಹಿಂದೆ, 1947 ಕ್ಕೆ ಹಿಂದೆ ಇಲ್ಲಿ ಯಾವ ದಿವಾನರ ಹಾಗೂ ರಾಜ ಮಹಾರಾಜರುಗಳ ಆಡಳಿತವಿತ್ತೋ ಯಾವುದನ್ನು ನಾವೆಲ್ಲರೂ ಬೇಜವಾಬ್ದಾರಿಯ ಆಡಳಿತ ಎಂದು ಕರೆಯುತ್ತಿದ್ದೆವೋ ಅಂಥ ಕಾಲದಲ್ಲಿ ಕೂಡ ಆಗಿದ್ದ ಸರ್ಕಾರ ಕನ್ನಡ ಭಾಷೆಗೆ ಮಾತೃ ಭಾಷೆಗೆ ಒಂದು ಹೆಚ್ಚಿನ ಮನ್ನಣೆಯನ್ನು ಕೊಟ್ಟಿತ್ತು. ಅಂಥ ಒಂದು ಮನ್ನಣೆ ಇಂದಿನ ಜವಾಬ್ದಾರಿ ಸರ್ಕಾರದಲ್ಲಿ ಸಿಕ್ಕಲಿಲ್ಲವಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾನು ಆ ಕಾಲದಲ್ಲಿ ರೆಪ್ರಸೆಂಟೇಟೀವ್ ಅಸೆಂಬ್ಲಿಯ ಸದಸ್ಯನಾಗಿದ್ದೆ. ಆಗ ನನಗೆ ಕನ್ನಡದ ಮೈಸೂರು ಗೆಜೆಟ್ ಬರುತ್ತಿತ್ತು. ಶಾಸನ ಸಭೆಯ ಕಾಗದ ಪತ್ರಗಳು, ಮಸೂದೆಗಳೆಲ್ಲಾ ಕನ್ನಡದಲ್ಲಿ ಬರುತ್ತಿದ್ದವು. ಅಂಥ ಒಂದು ಪದ್ಧತಿ ತಪ್ಪಿ ಹೋಗಿ ಕನ್ನಡ ರಾಜ್ಯವಾದ 20 ವರ್ಷಗಳ ನಂತರ ಹಿಂದೆ ಇದ್ದ ಕೆಲವು ಪದ್ಧತಿಗಳನ್ನು ಕನ್ನಡದಲ್ಲಿ ಮತ್ತೆ ಅಚ್ಚು ಹಾಕಿಸುತ್ತೇವೆಂಬುದನ್ನು ಒಂದು ಹೆಗ್ಗಳಿಕೆಯಿಂದ ಹೇಳಿಕೊಂಡಿರತಕ್ಕದ್ದು ನಾಚಿಗೆ ಗೇಡು ತನ. ಹೀಗೆ ಇಂದು ನಮ್ಮ ಮಾತೃ ಭಾಷೆಗೆ ಕನ್ನಡ ಭಾಗಗಳೆಲ್ಲಾ ಒಂದಾಗಿ 20 ವರ್ಷಗಳು ಕಳೆದಿದ್ದಾಗ್ಯೂ ಕನ್ನಡಕ್ಕೆ ಒಂದು ಮನ್ನಣೆ ಕೊಡದಿರುವುದು ಅದಕ್ಕೆ ಈ ಸರ್ಕಾರ ಮಾಡಿರತಕ್ಕ ಒಂದು ದೊಡ್ಡ ಅಪಮಾನ. ಇದನ್ನು ನೋಡಿದರೆ ಇಲ್ಲಿ ಆಡಳಿತ ನಡೆಸುವುದಕ್ಕೆ ಬಂದಿರತಕ್ಕ ಜನರಲ್ಲಿ ಲೇಶಾಂಶವೂ ದೇಶ ಸೇವೆ ಮಾಡಬೇಕೆಂಬ ಮನೋಭಾವ ಇದ್ದಂತೆ ಕಂಡುಬರುವುದಿಲ್ಲ. 1956 ನೇ ಇಸವಿಯಿಂದೀಚೆಗೆ ಕನ್ನಡಕ್ಕೆ ಆಗಿರುವ ಅವಮಾನ ಎಂದಿಗೂ ಆಗಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಏತಕ್ಕೋಸ್ಕರ ಕನ್ನಡ ಗೆಜೆಟ್ಟನ್ನು ನಿಲ್ಲಿಸಿದರು, ಗೊತ್ತಾಗಲಿಲ್ಲ. ಬಡ್ಜೆಟ್ ಕಾಪಿಯನ್ನು ಕನ್ನಡದಲ್ಲಿ ಇದುವರೆಗೂ ಕೊಡಲಿಲ್ಲ. ಇವತ್ತು ಕನ್ನಡ ರಾಜ್ಯವಾಯಿತು, ಅಂದಮೇಲೆ ಕನ್ನಡ ಬರದೇ ಇರತಕ್ಕ ಅಧಿಕಾರಿಗಳು ಏತಕ್ಕೆ ಇಲ್ಲಿ ಬಂದಿದ್ದಾರೆ, ಮಾನ್ಯ ಶ್ರೀ ಜತ್ತಿಯ ವರಿಗೆ ಕನ್ನಡದಲ್ಲಿ ಭಾಷಣ ಮಾಡುವುದಕ್ಕೆ ಬರುವುದಿಲ್ಲ. ಇಂಗ್ಲೀಷ್‌ನಲ್ಲಿ ಬರುತ್ತದೆ. ಅನೇಕ ಮಂತ್ರಿಗಳಿಗೆ ಕನ್ನಡದಲ್ಲಿ ಭಾಷಣ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಡಿ. ಜತ್ತಿ (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಶಾಖೆಗಳ ಮಂತ್ರಿ ಗಳು).—ನನ್ನ ಮಾತೃಭಾಷೆ, ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಕನ್ನಡ ಬಿ.ಎ. ವಿದ್ಯಾರ್ಥಿಯಾಗಿ ದ್ದಾಗ ಕನ್ನಡ ತೆಗೆದುಕೊಂಡಿದ್ದೆ. ಮರಾಠಿ ಕಲಿತನಂತರ ಕನ್ನಡವನ್ನು ಕಲಿತಿದ್ದು.

ಶ್ರೀ ಎಸ್. ಶಿವಪ್ಪ.—ಕಾರ್ಯತಃ ಏನಾಗಿದೆ ಎಂಬುದನ್ನು ನೋಡುವುದಾದರೆ 1956ನೇ ಇಸವಿ ಯಿಂದಲೂ ಈಚೆಗೆ ಕನ್ನಡ ಭಾಷೆಗೆ ಆಗಿರುವ ಅವಮಾನ ಹಿಂದೆ ಎಂದಿಗೂ ಆಗಿಲ್ಲವೆಂಬುದನ್ನು ನಾನು ಇಲ್ಲಿ ಸ್ಪಷ್ಟೀಕರಿಸುತ್ತೇನೆ. 1956ನೇ ಇಸವಿಯಿಂದ ಕನ್ನಡ ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಆಗಿತ್ತು. ಡಾ॥ ಕೆ. ವಿ. ಪುಟ್ಟಪ್ಪನವರೇ ಮೊನ್ನೆ ಕನ್ನಡ ಭಾಷೆ ಬಗ್ಗೆ ಒಂದು ಸ್ಟೇಟ್‌ಮೆಂಟನ್ನೂ

ಸಹ ಕೊಟ್ಟಿದ್ದಾರೆ. ಬೆಂಗಳೂರಿನ ಮಹಾರಾಣೀ ಕಾಲೇಜಿನಲ್ಲಿ ಆಗಿನಿಂದಲೂ ಕನ್ನಡ ಇತ್ತು. ಇವತ್ತು ಎಲ್ಲಿದೆ? ಇವತ್ತು ಇವರು ಬಂದಮೇಲೆ ಅಲ್ಲಿ ಅದನ್ನು ಕಿತ್ತುಹಾಕಿದರು. ಆಗಲೇ ಡಾ॥ ಪುಟ್ಟಪ್ಪನವರು ಅದಕ್ಕಾಗಿ ಅವಹೇಳನ ಮಾಡಿದರು. ಅಂದಮೇಲೆ ಇವರಿಗೆ ಕನ್ನಡವನ್ನು ರಾಜ್ಯ ಭಾಷೆಯಾಗಿ ತರುವುದಕ್ಕೆ ನಿಜವಾಗಿ ಸಾಧ್ಯವೇ ಎಂದು ಹೇಳಿಕೊಂಡೇ ಅವರು ಮನೆಗೆ ಹೋದರು. ಇವತ್ತು ನಾವು ಕಣ್ಣು ತೆರೆಯುತ್ತಿದ್ದೇವೆ. ಇಂಗ್ಲಿಷ್ ಎಲ್ಲಾ ಮಟ್ಟದಲ್ಲಿಯೂ ಆಳವಡಿಸಿಕೊಂಡು ವಿಚಾರ ಮಾಡುವ ಮಟ್ಟಕ್ಕೆ ಬಂದಿದ್ದಾರೆ. ಇವರು ನಿಜವಾಗಿ ಕನ್ನಡ ಭಾಷೆಗೆ ಎಷ್ಟು ಉತ್ತೇಜನ ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ. ಅಂದಮೇಲೆ ಮದ್ರಾಸ್ ಡಿ.ಎಂ.ಕೆ. ಸರ್ಕಾರವನ್ನು ಅವಹೇಳನ ಮಾಡಿದರೆ ಏನು ಪ್ರಯೋಜನ? ತಮ್ಮ ರಾಜ್ಯ ಭಾಷೆಯಾಗತಕ್ಕ ಕನ್ನಡವನ್ನು ಇಷ್ಟೊಂದು ತೀರಾ ಕೆಳಮಟ್ಟದಲ್ಲಿಟ್ಟು ಅಗೌರವ ಮಾಡುತ್ತಿದ್ದೀರಿ. ಕೆಲವು ರಾಜ್ಯಗಳಲ್ಲಿ ಈಗಾಗಲೇ ಅವರವರ ಭಾಷೆಯನ್ನು ತಂತಮ್ಮ ರಾಜ್ಯಭಾಷೆಯಾಗಿ ಮಾಡಿದ್ದಾರೆ. ಅಂದಮೇಲೆ ನಮ್ಮ ರಾಜ್ಯದಲ್ಲಿಯೂ ಈ ಸರ್ಕಾರ ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡಬೇಕು. ಸುಮ್ಮನೆ ಬೇರೆಯವರ ಮೇಲೆ ಬೊಬ್ಬೆ ಹಾಕಿದರೆ ಏನು ಪ್ರಯೋಜನ? ಇದು ಒಂದು ಅಂಜುಬುರುಕ ನೀತಿ ಎಂದು ಹೇಳಬಹುದು. ಈ ಕನ್ನಡ ದೇಶ ಎಷ್ಟೊಂದು ಕೆಳಮಟ್ಟಕ್ಕೆ ಬಂದಿದೆ ಎನ್ನುವುದಕ್ಕೆ, ಬೆಂಗಳೂರನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ನಮ್ಮ ಕನ್ನಡ ಜನರೇ ಎಲ್ಲಾದರೂ ಮುಸಲ್ಮಾನರ ಅಂಗಡಿಗೆ ಹೋದರೆ ಕೆಲವು ಕಡೆಗಳಲ್ಲಿ ಸಲಾಂವಾಲೇಕುಂ ಎಂದು ಹೇಳಿದರೇನೇ ಮಾತನಾಡುವುದು, ಬೀಡಿ ಅಂಗಡಿ ಇಟ್ಟಿರುವ ಒಬ್ಬ ತಮಿಳು ಮಾತನಾಡುವವನ ಹತ್ತಿರ ತಮಿಳಿನಲ್ಲಿಯೇ ಮಾತನಾಡಬೇಕು, ತೆಲುಗು ಮಾತನಾಡುವವರ ಅಂಗಡಿಗೆ ಹೋದರೆ ತೆಲುಗಿನಲ್ಲಿಯೇ ಮಾತನಾಡಬೇಕಾಗುತ್ತದೆ. ಇಂತಹ ಪ್ರಸಂಗಗಳನ್ನು ನಾವು ಇವತ್ತು ನೋಡುತ್ತಿದ್ದೇವೆ. ಕನ್ನಡ ಭಾಷೆಯ ಬಗ್ಗೆ ಒಂದು ದೃಢವಾದ ನೀತಿ ಇವರಿಗೆ ಇನ್ನೂ ಬಂದಿಲ್ಲ. ಎಷ್ಟೊಂದು ಧೀರತ್ವ ಇವರಿಗೆ ಇರಬೇಕೋ ಆ ಧೀರತ್ವವೇ ಮಾಯವಾಗಿದೆ. ಇದರಿಂದ ನಾವೇ ನಾವಾಗಿ ಈ ಎಲ್ಲಾ ಭಾಷೆಗಳಿಗೂ ಗುಲಾಮರಾಗಿದ್ದೇವೆ. ಇಂತಹ ಕೆಲಸವನ್ನು ಈ ದೇಶದಲ್ಲಿ ಮಾಡಿರುವುದರಿಂದ ಕನ್ನಡಭಾಷೆ ಕುಂಟಿಕೊಂಡು ನಡೆಯುತ್ತಾ ಇದೆ. ರಾಜ್ಯ ಭಾಷೆಯಾಗುವ ಕನ್ನಡಕ್ಕೆ ಎಷ್ಟು ಮರ್ಯಾದೆ ಕೊಡಬೇಕೋ ಅದನ್ನು ಈ ಸರ್ಕಾರದವರು ಕೊಟ್ಟಿಲ್ಲ. ಕನ್ನಡ ಭಾಷೆಯಾವ ರೀತಿಯಲ್ಲಿಯೂ ಮುಂದುವರಿಯುವುದಕ್ಕೆ ಸಾಧ್ಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ಭಾಷಾ ಗೊಂದಲದಲ್ಲಿ ನಮ್ಮ ವಿದ್ಯಾರ್ಥಿಗಳು ನಮ್ಮ ಕಣ್ಣು ತೆರೆಸುವ ಕಾರ್ಯವನ್ನು ಮಾಡಿದ್ದಾರೆ. ಇದರಿಂದ ಸರ್ಕಾರದವರು ಅವರಿಗೆ ಏನು ಉಪಕಾರವನ್ನು ಮಾಡಿದ್ದಾರೆಂದರೆ, ಅದರ ಬಗ್ಗೆ ಚಳುವಳಿ ಮಾಡಿದಂತಹವರನ್ನು ಹೊಡೆದಿದ್ದಾರೆ, ಬಡಿದಿದ್ದಾರೆ, ರಕ್ತ ಬರುವ ಹಾಗೆ ಅನೇಕ ಶಿಕ್ಷೆಗಳನ್ನು ಮಾಡಿದ್ದಾರೆ. ಪೋಲೀಸಿನವರು ಅನೇಕರನ್ನು ಅನ್ಯಾಯವಾಗಿ ಜೈಲಿಗೆ ಹಾಕಿದ್ದಾರೆ, ಗುಂಡಿಕ್ಕಿ ಕೊಂದಿದ್ದಾರೆ, ಅನೇಕ ಜನರು ಸತ್ತಿದ್ದಾರೆ. ಇಷ್ಟೊಂದು ಹೀನಕೃತ್ಯಗಳನ್ನು ವಿದ್ಯಾರ್ಥಿಗಳಮೇಲೆ ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯ ಬಾಗಿಲು ಹಾಕುವ ಪರಿಸ್ಥಿತಿಗೆ ಬಂತು. ಮೈಸೂರು ವಿಶ್ವವಿದ್ಯಾನಿಲಯದ ಬಾಗಿಲೂ ಸಹ ಹಾಕುವ ಪರಿಸ್ಥಿತಿಗೆ ಬಂತು. ಮೆಡಿಕಲ್ ವಿದ್ಯಾಭ್ಯಾಸಕ್ಕೆ ಕುಂಠಿತವಾಗುವ ರೀತಿಯಲ್ಲಿ ಒಂದೆರಡು ತಿಂಗಳುಗಳ ಕಾಲ ಆ ವಿಶ್ವವಿದ್ಯಾನಿಲಯವೂ ಕೂಡ ಮುಚ್ಚುವ ಪರಿಸ್ಥಿತಿಗೆ ಬಂತು. ಆದರೂ ಕೂಡ ನಾವೆಲ್ಲರೂ ಸಂತೋಷಪಡುವ ವಿಚಾರವೆಂದರೆ, ವಿದ್ಯಾರ್ಥಿಗಳ ಕಮಿಟಿಯಲ್ಲಿ ಒಂದು ತೀರ್ಮಾನವಾಗಿ ಅವರ ಕರೆಯನ್ನು ಕೇಳಿ ಎಲ್ಲಾ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಹೋಗಬೇಕೆಂದು ಈಗ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಆ ರೀತಿಯಾದಂಥ ಒಂದು ತೀರ್ಮಾನವನ್ನು ಕಮಿಟಿಯವರು ಕೈಗೊಂಡಿದ್ದಾರೆ. ಇದು ಬಹಳವಾಗಿ ಅಭಿನಂದನೀಯವಾದುದು. ಒಟ್ಟಿನಲ್ಲಿ ಇಂತಹ ಚಳುವಳಿಗಳಿಂದ ಈ ದೇಶದಲ್ಲಿ ನಮ್ಮ ಕಣ್ಣುಗಳನ್ನು ತೆರೆಯುವಹಾಗೆ ಮಾಡಿದ್ದಾರೆ. ನಾವು ಅವರಿಗೆ ಏನು ಹೇಳಿದ್ದೇವೆ ಅಂದರೆ, ನೀವು ನಿಮ್ಮ ನಿಮ್ಮ ಶಾಲಾಕಾಲೇಜುಗಳಿಗೆ ಹೋಗಿ, ಈ ಸಮಸ್ಯೆಯನ್ನು ಈ ದೇಶದ ನಾಯಕರ ಮುಂದೆ ಇಟ್ಟಿದ್ದೇವೆ, ನಾಯಕರು ಇದಕ್ಕೆ ತಕ್ಕ ಪರಿಹಾರ ಕೊಡುತ್ತಾರೆ ಎಂಬ ನಂಬಿಕೆ ನಮಗೆ ಇದೆ, ಆದ್ದರಿಂದ ನೀವು ಕಾಲೇಜುಗಳಿಗೆ ಹೋಗಿ ಎಂದು ಹೇಳಿದ್ದೇವೆ. ಈ ದೇಶದಲ್ಲಿ ಇಂತಹ ಒಂದು ಅನಾಯಕತ್ವವನ್ನು ಬಗೆಹರಿಸುವುದರಲ್ಲಿ ಸರ್ಕಾರದವರು ವಿಫಲರಾದರೆ, ಯಾರೇ ಆಗಲೀ ನಿಮ್ಮ ಒಂದು ಗುರಿಗೆ ಅಡ್ಡಿ ಬಂದರೆ, ನಿಮ್ಮ ಚಳುವಳಿಗೆ ಮತ್ತೊಂದು ಅವಕಾಶವುಂಟಾಗುತ್ತದೆ, ಆ ಒಂದು ಅವಕಾಶ ಮತ್ತೆ ಪಡೆಯಬಹುದು, ನೀವು ನಿಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ಎಂಬುದಾಗಿ ನಾನು ವಿದ್ಯಾರ್ಥಿಗಳಿಗೆ ಈ ವೇದಿಕೆಯಿಂದ ಪ್ರಾರ್ಥನೆಮಾಡುತ್ತೇನೆ. ಮುಂದೆಯೂ ಕೂಡ ವಿದ್ಯಾರ್ಥಿಗಳು ಏತಕ್ಕೋಸ್ಕರ ಚಳುವಳಿ ಮಾಡಿದರೋ ಆ ಸಂಬಂಧವಾಗಿರತಕ್ಕ ಪ್ರಶ್ನೆಯನ್ನು ಈ ಸರ್ಕಾರದವರು ಜಾಗ್ರತೆ ಇತ್ಯರ್ಥವಾಡದೇ ಹೋದರೆ ಈ ಸರ್ಕಾರವನ್ನು ಕಿತ್ತುಹಾಕುವ ಕೆಲಸವನ್ನು ವಿದ್ಯಾರ್ಥಿಗಳೇ ಮಾಡಬೇಕು ಎಂಬುದಾಗಿ ಹೇಳುತ್ತೇನೆ. ವಿದ್ಯಾರ್ಥಿಗಳು ಖಂಡಿತವಾಗಿ ಇವರನ್ನು ಸುಮ್ಮನೆ ಬಿಡುವುದಿಲ್ಲ. ಅವರು ನಿಮ್ಮನ್ನು ಬೆನ್ನುಹತ್ತಿದ್ದಾರೆಂಬುದಾಗಿ ಈಗಲೇ ನಿಮಗೆ ಎಚ್ಚರಿಕೆ ಕೊಡುತ್ತೇನೆ.

(ಶ್ರೀ ಎಸ್. ಶಿವಪ್ಪ)

[MR. CHAIRMAN (SRI G. RAME GOWDA) in the Chair.]

ಇನ್ನು ಭಾಷೆಯ ವಿಷಯದಲ್ಲಿ ನಮ್ಮ ಮೈಸೂರು ಸರ್ಕಾರಕ್ಕೆ ಒಂದು ಇಕ್ಕಟ್ಟು ಇದೆ. ಅದಕ್ಕಾಗಿ ಎಷ್ಟೋ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಒಂದು ಹೇಳಿಕೆ ಕೊಡಬೇಕು, ಕಾಂಗ್ರೆಸ್ ಅಧ್ಯಕ್ಷರಾಗಿ ಹೋದಾಗ ಅಲ್ಲಿ ಒಂದು ರೀತಿ ಹೇಳಿಕೆ ಕೊಡಬೇಕಾಗಿದೆ. ನಾಳೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಈ ವಿಚಾರ ಪ್ರಸ್ತಾಪಕ್ಕೆ ಬಂದಾಗ, ನಮ್ಮ ಮುಖ್ಯ ಮಂತ್ರಿಗಳಿಗೆ ಅಲ್ಲಿ ಹೇಳಿಕೆಯನ್ನು ಕೊಡುವುದಕ್ಕೆ ಖಂಡಿತವಾಗಿ ಭಯವಾಗುತ್ತದೆ. ಏಕೆಂದರೆ ಅಲ್ಲಿ ಅಸ್ತಕಡೆಯವರ ಸಂಖ್ಯೆ ಜಾಸ್ತಿ ಇದೆ. ಅಲ್ಲಿಯವರನ್ನು ಮೆಚ್ಚಿಸುವುದಕ್ಕೋಸ್ಕರ ಅವರಂತೆಇವರು ವಾಲಲೇಬೇಕಾಗುತ್ತದೆ. As spokesman of the Congress Organisationಅಲ್ಲಿ ಆ ರೀತಿ ಇವರು ಹೇಳಬೇಕಾಗುತ್ತದೆ. ಮೈಸೂರಿಗೆ ಬಂದಾಗ ಮೈಸೂರು ದೇಶದ ಮುಖ್ಯಮಂತ್ರಿಯಾಗಿ ಮೈಸೂರು ದೇಶದ ಪರವಾಗಿ ಅದನ್ನು ಅದೇ ಬಾಯಿಯಿಂದಲೇ ಇಲ್ಲಿ ಹೇಳಬೇಕಾಗಿದೆ. ಅವರ ಒಂದೇ ಬಾಯಿನಿಂದ ಎರಡು ತರಹ ವಾದಗಳನ್ನು ಹೂಡುವ ಪರಿಸ್ಥಿತಿ ಈ ದೇಶದ ಮುಖ್ಯ ಮಂತ್ರಿಗಳಿಗೆ ಬಂದಿದೆ. ನಿಜವಾಗಿ ಈ ಭಾಷಾ ವಿಚಾರದಲ್ಲಿ ತೊಂದರೆಯಾಗುತ್ತದೆ ಎಂಬುದಾಗಿ ನಾನು ಆಗ್ರಹಪೂರ್ವಕವಾಗಿ ಸರ್ಕಾರದ ನಾಯಕತ್ವದಲ್ಲಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೇಳುತ್ತೇನೆ. ಅಲ್ಲಿ ಒಂದು ವಾದವನ್ನು ಹೇಳುತ್ತಾರೆ. ಇಲ್ಲೊಂದು ವಾದವನ್ನು ಹೇಳುತ್ತಾರೆ. ಹೀಗೆ ಎರಡು ವಾದಗಳನ್ನು ಒಂದೇ ಬಾಯಿಯಿಂದ ಎರಡು ವ್ಯಕ್ತಿತ್ವದಿಂದ ಹೇಗೆ ಹೇಳುವುದಕ್ಕೆ ಸಾಧ್ಯವೆಂಬುದನ್ನು ಅವರು ಯೋಚನೆ ಮಾಡಬೇಕು. ಈ ದೇಶದಲ್ಲಿ ಈ ವಿಚಾರದ ಬಗ್ಗೆ ಒಂದು ಸಂಶಯವನ್ನುಂಟುಮಾಡಿ ಹೆಚ್ಚಿನ ಗೊಂದಲಕ್ಕೆ ನಿಮ್ಮ ಬಾಯಿನಿಂದಲೇ ಈಡುಮಾಡಿ ಕೊಡುತ್ತಿದ್ದೀರಿ. ನಿಮ್ಮ ಈ ಒಂದು ರೀತಿಯ ದ್ವಂದ್ವ ನೀತಿ, ದ್ವಂದ್ವ ಮಾತುಗಳಿಂದ ಮೈಸೂರು ದೇಶದ ಹಿತಕ್ಕೆ ಖಂಡಿತವಾಗಿ ಧಕ್ಕೆಯಾಗುತ್ತದೆ. ಅವರಿಗೆ ಈಗಲೇ ಒಂದು ಎಚ್ಚರಿಕೆ ಕೊಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಿಯೇ ಇರಲಿ, ಅವರು ಮೈಸೂರಿನ ವಾದವನ್ನು ಮುಂದಿಡಬೇಕು. ಅದನ್ನು ಎತ್ತಿ ಹಿಡಿಯುವುದಕ್ಕೆ ಅವರಿಗೆ ಅಲ್ಲಿ ಏನಾದರೂ ತೊಂದರೆಯಾದರೆ ಅವರು ಅಲ್ಲಿನ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಈ ರಾಜ್ಯದ ಹಿತದೃಷ್ಟಿಯಿಂದ ಇವರ ದ್ವಂದ್ವ ನೀತಿ, ದ್ವಂದ್ವ ಸ್ಥಳಗಳಲ್ಲಿರುವುದು—ಇದರ ಬಗ್ಗೆ ಇವರಿಗೆ ಈಗಲೇ ಎಚ್ಚರಿಕೆ ಕೊಡುತ್ತಿದ್ದೇನೆ.

ಈ ದೇಶದ ಅತಿ ಮುಖ್ಯ ವಿಚಾರಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಅಂಜುಬುರಕ ನೀತಿಯ ರೂಪದಲ್ಲಿ ಹೇಳಿದೆ. ಇವತ್ತು ನಮಗೆ ಸಂಬಂಧಪಟ್ಟ ಇನ್ನೊಂದು ಮುಖ್ಯ ವಿಚಾರ ಅಂದರೆ, ಗಡೀ ಪ್ರಶ್ನೆಯ ಬಗ್ಗೆ ಮಹಾಜನ್ ಅವರು ಕೊಟ್ಟಿರುವ ವರದಿ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಅವಾರ್ಡ್ ಎಂದು ಪರಿಗಣಿಸಬೇಕು, ಅದು ಅಂತಿಮ ನಿರ್ಧಾರವೆಂದು ಮೈಸೂರಿನಲ್ಲಿ ಅವರ ಅಭಿಪ್ರಾಯ ಕೊಡುತ್ತಿದ್ದಾರ.

4–00 P. M.

ಇವೊತ್ತು ಅದರ ಪರಿಸ್ಥಿತಿ ಏನಾಗಿದೆ ಎಂದು ನಾನು ಕೇಳುತ್ತೇನೆ. ಈ ಒಂದು ಕಮಿಷನ್ ನೇಮಕ ಮಾಡಿದಮೇಲೂ ದೆಹಲಿಯಲ್ಲಿ ಕೇಂದ್ರ ಸರ್ಕಾರದಲ್ಲಿ ಗೃಹಮಂತ್ರಿಗಳಾಗಿರತಕ್ಕ ಶ್ರೀ ಚವಾನ್ ಅವರು ಪಾರ್ಲಿಮೆಂಟಿನ ಅನೇಕ ಮುಖಂಡರನ್ನು ಕರೆಸಿ ಈಗ ಈ ಸಮಸ್ಯೆಯ ಬಗ್ಗೆ ರಾಷ್ಟ್ರೀಯ ಅಭಿಪ್ರಾಯವನ್ನು ಪಡೆಯುತ್ತಿದ್ದಾರೆ. ಈಗಾಗಲೇ ಎಲ್ಲಾ ಮುಖಂಡರನ್ನೂ ಕರೆದು ಒಂದು ಅಭಿಪ್ರಾಯ ವನ್ನು ಸಂಗ್ರಹಣೆ ಮಾಡುವಂತಹ ಕಾರ್ಯವನ್ನು ಅವರು ಮುಂದುವರೆಸುತ್ತಿದ್ದಾರೆ. ಈ ಮಹಾಜನ್ ಕಮಿಷನ್ನಿನ ವರದಿಯ ಫಲಿತಾಂಶವೇನಾಯಿತು.? ಅದು ಎಲ್ಲಿ ಹೋಯಿತು ? ಆ ವರದಿಯನ್ನುಚವಾಣರು ಕಸದ ಬುಟ್ಟಿಗೆ ಬಿಸಾಡಿಬಿಟ್ಟಿದ್ದಾರೆಯೇ ? ಶ್ರೀಮಾನ್ ನಿಜಲಿಂಗಪ್ಪರೇ ಹೈಕಮಾಂಡಿನವರಾಗಿದ್ದಾರೆ, ಅವರು ಚವಾಣರಿಗೆ ಛೀಮಾರಿ ಮಾಡುವ ಕೆಲಸವನ್ನು ಮಾಡುತ್ತಾರೆಯೇ ? ಮಹಾಜನ್ ಕಮಿಷನ್ನು ಕಾಂಗ್ರೆಸ್ವರ್ಕಿಂಗ್ ಕಮಿಟಿಯವರ ಅಭಿಪ್ರಾಯದ ಮೇಲೆ ಸರ್ಕಾರ ನೇಮಕಮಾಡಿದಂತಹ ಸಮಿತಿ. ಅದನ್ನು ಮೀರಿ ರಾಷ್ಟ್ರೀಯ ಅಭಿಪ್ರಾಯವನ್ನು ಸಂಗ್ರಹಣೆ ಮಾಡತಕ್ಕ ಕೆಲಸಕ್ಕೆ ಕೈ ಹಾಕಿದ್ದು ತಪ್ಪು ಎಂದು ಚವಾಣರನ್ನು ಛೀಮಾರಿ ಮಾಡಿ ಎಚ್ಚರಿಸುವುದಕ್ಕೆ ಇವರಿಗೆ ಧೈರ್ಯವಿದೆಯೇ ಎಂದು ನಾನು ಕೇಳುತ್ತೇನೆ. ಈ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳನು ಮಾಡಬೇಕು ತಾವು ಮಾಡಿದ್ದಕ್ಕೆ ಬೆಲೆ ಸಿಕ್ಕದೇಹೋದರೆ ತಾವು ಏನು ಏನು ಮಾಡುತ್ತೀರಿ ಎಂದು ನಾನು ಮುಖ್ಯಮಂತ್ರಿಗಳನ್ನು ಕೇಳಬಯಸುತ್ತೇನೇ. ತಾವು ಧೈರ್ಯದ ಮಾತು ಹೇಳಲಿಲ್ಲ. ಇದು ಅಂಜುಬುರುಕತನದ ಮಾತು. ಈ ಅಂಜುಬುರುಕುತನದಿಂದ ಕೆಲಸ ಸಾಧನೆಯಾಗುವುದಿಲ್ಲ ಎಂದು ನಾನು ಹೇಳಬೇಕಾಗಿದೆ.

ಇನ್ನು ಕೃಷ್ಣಾ ನದಿಯ ನೀರಿನ ಹಂಚಿಕೆಯ ವಿಷಯದಲ್ಲಿ ಏನು ಹೇಳುತ್ತಾರೆಂದರೆ, ಕೇಂದ್ರ ಸರ್ಕಾರದವರಿಗೆ ಆಕ್ಷೇಪಣೆಯನ್ನು ಸೂಚಿಸಿದ್ದೇವೆ. ಟ್ರಿಬ್ಯೂನಲ್ ಮಾಡಬೇಕೆಂದು ಕೇಳಿದ್ದೇವೆ ಎಂದು ಹೇಳುತ್ತಾರೆ. ಈ ರೀತಿ ಹೇಳಿಕೆ ಕೇಳಿಕೆ ಮಾಡುವುದರಿಂದ ನೀರಿನ ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯವಿಲ್ಲ. ಆಂಧ್ರದವರು ಮುಂದೆ ಹೋಗಿದ್ದಾರೆ. ಬ್ರಹ್ಮಾನಂದ ರೆಡ್ಡಿಯವರು ಧೈರ್ಯವಾಗಿ ಹೇಳಿದ್ದಾರೆ. ಯಾರು ಏನೇ ಹೇಳಲಿ ನಾವು ಕ್ರೆಸ್ಟ್‌ಗೇಟ್ ಹಾಕುತ್ತೇವೆ. ಅದು ಮೊದಲನೇ ಸ್ಟೇಜಿನಲ್ಲಿ ಇದೆಯೆಂದು ಧೈರ್ಯವಾಗಿ ಹೇಳಿದ್ದಾರೆ. 3 ಜನ ಮುಖ್ಯಮಂತ್ರಿಗಳೂ ಸೇರಿದ್ದರು. ಬ್ರಹ್ಮಾನಂದ ರೆಡ್ಡಿಯವರು, ನಿಜಲಿಂಗಪ್ಪನವರು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು 3 ಜನ ಸೇರಿದರೂ ಕೂಡ ಅದು ಇದುವರೆಗೂ ಏನೂ ಇತ್ಯರ್ಥವಾಗಿಲ್ಲ. ಇನ್ನು ಎಷ್ಟು ದಿವಸಗಳು ಕಾಯುತ್ತಾರೋ ಗೊತ್ತಿಲ್ಲ. ಇದನ್ನು ಯಾವಾಗ ಟ್ರಿಬ್ಯೂನಲ್ಲಿಗೆ ತೆಗೆದುಕೊಂಡು ಹೋಗುತ್ತಾರೆಂಬ ಪ್ರಶ್ನೆ ಬಂದಾಗ ಸಚಿವರು ಹೇಳಿದರು, ನಾವು ಅಕ್ಟೋಬರ್ 31ನೇ ತಾರೀಖಿನವರೆಗೂ ಕಾಯುತ್ತೇವೆ ಅದುವರೆಗೆ ಉತ್ತರ ಬಾರದೇ ಹೋದರೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದೂ ಕೂಡ ಲೀಗಲ್ ಅಡ್ವೈಜರ್ ಯೋಚನೆ ಮಾಡುವುದರಲ್ಲಿದ್ದಾರೆ. ಮುಂದಿನ ಕ್ರಮ ಏನು, ಧೃಢವಾದ ನಿಲುವು ಏನು ಎನ್ನುವುದನ್ನು ಇನ್ನೂ ಮೀನಾ ಮೇಷ ನೋಡುತ್ತಿದ್ದಾರೆ. ಆದ್ದರಿಂದ ಇದು ಎಷ್ಟರಮಟ್ಟಿಗೆ ಇದೆಯೆಂಬುದನ್ನು ಯೋಚನೆಮಾಡುವುದಾದರೆ ಇದರಿಂದ ನಮಗೆ ಒಂದು ದೊಡ್ಡ ಅಪಾಯವಾಗುತ್ತದೆ. ಆಂಧ್ರದವರು ಮುಂದೆ ಹೋಗುತ್ತಾರೆ, ನಾವು ಹಿಂದೆ ಬೀಳುತ್ತೇವೆ. ಆಂಧ್ರದವರು ಕ್ರೆಸ್ಟ್‌ಗೇಟ್ ಹಾಕಿದಮೇಲೆ ಯಾವ ಕೋರ್ಟಿಗೆ ಹೋದರೆ, ಯಾವ ಜಡ್ಜ್ ತೀರ್ಪನ್ನು ಕೊಡುತ್ತಾರೆಯೋ ಆ ಕಡೆಗೆ ಎಳೆದುಕೊಂಡು ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಮುಂಚೆ ಧೈರ್ಯವಾದ ನಿಲುವನ್ನು ತೆಗೆದುಕೊಳ್ಳಬೇಕು. ನಾಳೆ ಕೇಂದ್ರದಿಂದ ಸರಿಯಾದ ಉತ್ತರ ಬಾರದೇ ಹೋದರೆ ಅವಾರ್ಡ್ ಕೊಡದೇ ಹೋದರೆ ಟ್ರಿಬ್ಯೂನಲ್ಲಿಗೆ ಹೋಗುತ್ತೇವೆ ಎಂದು ಹೇಳತಕ್ಕ ಧೈರ್ಯ ಬಂದರೆ ಅದು ಬಗೆಹರಿಯುತ್ತದೆ. ಮೀನಾ ಮೇಷಾ ಎಣಿಕೆ ಮಾಡುವುದರಿಂದ ಪ್ರಶ್ನೆಯನ್ನು ಬಗೆ ಹರಿಸುವುದಕ್ಕಾಗುವುದಿಲ್ಲ, ಅದರಿಂದ ಒಂದು ದೊಡ್ಡ ಅಪಕಾರವಾಗುತ್ತದೆ ಎನ್ನತಕ್ಕ ಎಚ್ಚರಿಕೆಯ ಮಾತನ್ನು ಈ ಸಮಯದಲ್ಲಿ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಇನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ವಿಚಾರದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಕಾರ್ಯಗತವಾಗಿಲ್ಲ. ಅದು ಆರ್ಥಿಕ ಅನುಕೂಲತೆಗೆ ಸಂಬಂಧಪಟ್ಟ ವಿಚಾರ. ಸುಮಾರು 20 ವರ್ಷಗಳಿಂದ ಮೂರು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡಿದಂತಹ ದೇಶದಲ್ಲಿ 3 ಯೋಜನೆಗಳ ಫಲಿತಾಂಶದಿಂದ ದೇಶದಲ್ಲಿ ಸಂಪದಭಿವೃದ್ಧಿ ಜಾಸ್ತಿಯಾಗಿ ಈ ದೇಶದಲ್ಲಿ ಮೂರು ಯೋಜನೆಗಳಿಂದ ಬಂದಂತಹ ದುಡ್ಡಿನಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಬೇಕಾದ್ದು ನಮ್ಮ ಕರ್ತವ್ಯ. ಮೂರನೇ ಪಂಚವಾರ್ಷಿಕ ಯೋಜನೆ ಮುಗಿದು ಎರಡು ವರ್ಷಗಳಾದರೂ ಕೂಡ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಗಾತ್ರ ಏನು, ಇದನ್ನು ಯಾವಾಗ ಕಾರ್ಯರಂಗಕ್ಕೆ ಇಳಿಸುತ್ತಾರೆ, ಎಂಬ ಬಗ್ಗೆ ದೃಢವಾದ ನಿಲುವು ಇಲ್ಲ. 1966ನೇ ಇಸವಿಯಲ್ಲಿ ಪ್ರಾರಂಭವಾಗಬೇಕಾಗಿದ್ದ ನಾಲ್ಕನೇ ಪಂಚವಾರ್ಷಿಕ ಯೋಜನೆ 1970ನೇ ಇಸವಿಗೆ ಹೋಯಿತು. 1970ನೇ ಇಸವಿಯಿಂದ ಈ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಆರ್ಥಿಕ ದಿವಾಳಿತನಕ್ಕೆ ಇದಕ್ಕಿಂತ ಸಾಕ್ಷಿ ಬೇರೆ ಬೇಕಾಗಿಲ್ಲ. ಕುಂಟು ನೆಪಗಳನ್ನು ಹೇಳಿದ್ದಾರೆ. ಇವರಿಗೆ ಮಾನ ಇದ್ದರೆ, ಮರ್ಯಾದೆ ಇದ್ದರೆ, ಪ್ರಶ್ಚಾತ್ತಾಪ ಪಡಬೇಕಾಗಿದ್ದರೆ, ಆರ್ಥಿಕ ದಿವಾಳಿತನ ತಂದದ್ದಕ್ಕೆ ರಾಜೀನಾಮೆ ಕೊಟ್ಟು ನಮ್ಮ ತಲೆ ಬೋಳಿಸಿ ಎಂದು ಕೇಳಬೇಕಾಗುತ್ತದೆ.

ಶ್ರೀ ಎಸ್. ಡಿ. ಕೊಠಾವಳೆ (ಸಂಕೇಶ್ವರ್).—ಈಗ ತಾವು ಹೇಳಿದಿರಿ ನಾಲ್ಕನೆಯ ಪಂಚವಾರ್ಷಿಕ ಯೋಜನೆ 66ನೇ ಸಾಲಿನಲ್ಲಿಯೇ ಶುರು ಆಗಬೇಕಾಗಿತ್ತು. ಆದರೆ ಅದು 1970ನೇ ಸಾಲಿಗೆ ಶುರುವಾಗುತ್ತದೆ ಎಂದು. 3ನೇ ಯೋಜನೆ 66-67ನೇ ಸಾಲಿಗೆ ಮುಗಿಯಿತು. ಆದ್ದರಿಂದ ತಾವು ಹೇಳಿದ್ದು ಸ್ವಲ್ಪ ಮಿಸ್‌ಸ್ಟೇಟ್‌ಮೆಂಟ್ ಆಗಿದೆ.

ಶ್ರೀ ಎಸ್. ಶಿವಪ್ಪ.—1966ನೇ ಇಸವಿಯಲ್ಲಿ ಪ್ರಾರಂಭವಾಗಬೇಕಾಗಿದ್ದ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು 1970ನೇ ಇಸವಿಗೆ ಮುಂದುವರಿಸಬೇಕಾದರೆ ಕಾರಣವೇನು? ನಿಮ್ಮಲ್ಲಿ ಸಾಕಷ್ಟು ಹಣವಿಲ್ಲ. ಯಾರು ಯಾರು ಎಷ್ಟೆಷ್ಟು ಹಣವನ್ನು ಕೊಡುತ್ತಾರೆಂದು ಭಿಕ್ಷಾ ಪಾತ್ರೆಯನ್ನು ಹಿಡಿದುಕೊಂಡು ರಷ್ಯಾ ದೇಶಕ್ಕೆ ಒಬ್ಬರು, ಅಮೇರಿಕಾ ದೇಶಕ್ಕೆ ಒಬ್ಬರು, ವರ್ಲ್ಡ್ ಬ್ಯಾಂಕಿಗೆ ಒಬ್ಬರು ಹೀಗೆ ಭಿಕ್ಷೆ ಬೇಡಿ, ಈ ಭಿಕ್ಷಾಟನೆಯಿಂದ ಭಿಕ್ಷಾ ಪಾತ್ರೆಗೆ ಎಷ್ಟು ಹಣ ಬರುತ್ತದೆಯೋ ಅದರಮೇಲೆ ನಿಮ್ಮ ನಾಲ್ಕನೇ ಪಂಚವಾರ್ಷಿಕ ಯೋಜನೆ ಅವಲಂಬನೆ ಮಾಡಿದ. ನೀವು ಹೇಳಿದ ರೀತಿಯಲ್ಲಿ ರೂಪಾಯಿನ ಅಪಮೌಲ್ಯದಿಂದ ಈ ಯೋಜನೆ ತಲೆಕೆಳಕಾಯಿತು ಎಂದು,

(ಶ್ರೀ ಎಸ್. ಶಿವಪ್ಪ)

ನಿಮ್ಮ ಯೋಜನೆ ನಿಮ್ಮ ಆರ್ಥಿಕ ನೀತಿ ಮತ್ತು ರೂಪಾಯಿನ ಅಪಮೌಲ್ಯವನ್ನು ನೀವು ಒಪ್ಪಿಕೊಂಡಿದ್ದೀರಿ ಇದರಿಂದಲೇ ಗೊತ್ತಾಗುತ್ತದೆ ಈ ದೇಶದಲ್ಲಿ ಎಷ್ಟೊಂದು ಅನ್ಯಾಯವನ್ನು ಮಾಡಿ ಆರ್ಥಿಕ ಸ್ಥಿತಿಯನ್ನು ಹಾಳು ಮಾಡಿದ್ದೀರಿ ಎಂದು. ಈ ನೀತಿಯಿಂದ ಜನತೆಗೆ ಸ್ಪಷ್ಟವಾಗಿ ತೋರುತ್ತದೆ. 3 ಯೋಜನೆಗಳು ಕಾರ್ಯಗತವಾಗಿದ್ದರೂ ಕೂಡ ನಮ್ಮ ದೇಶದಲ್ಲಿ ಎಷ್ಟೊಂದು ಸಂಪತ್ ಅಭಿವೃದ್ಧಿಯಾಗಬೇಕಾಗಿತ್ತು, ಎಷ್ಟೊಂದು ಅನ್ನದ ಉತ್ಪತ್ತಿ ಆಗಬೇಕಾಗಿತ್ತು ಉದ್ಯೋಗಗಳ ಉತ್ಪತ್ತಿಯಾಗಬೇಕಾಗಿತ್ತು ಅವೆಲ್ಲವೂ ಆಗಿಲ್ಲ ಎಂದು. ನಮ್ಮ ಹಣ ಖರ್ಚಾಯಿತು. 3 ಯೋಜನೆಗಳು ಮುಗಿದು ಹೋದವು ಆದರೂ ಅನ್ನದ ಸ್ವಯಂಪೂರ್ಣತೆ ಉಂಟಾಗಲಿಲ್ಲ. ಮಕ್ಕಳಿಗೆ ಉದ್ಯೋಗವಿಲ್ಲ. ಇಷ್ಟೊಂದು ಹಣವನ್ನು ಖರ್ಚುಮಾಡುವ ಕೆಲಸವನ್ನು ಮಾಡಿದರೇ ಹೊರತು, ಎಷ್ಟೊಂದು ಹಣ ದುರ್ವ್ಯಯವಾಗಿದೆ, ಅಪವ್ಯಯವಾಗಿದೆ ಎಂಬುದನ್ನು ಹೇಳುತ್ತಾ ಹೋದರೆ ಅದು ಒಂದು ದೊಡ್ಡ ಕತೆಯಾಗುತ್ತದೆ. ನಿಮ್ಮ ಲಂಚಕೋರತನ, ನಿಮ್ಮ ಸರ್ಕಾರದಲ್ಲಿ ಬಿಗಿಯಾದ ಆಡಳಿತ ಇಲ್ಲದೇ ಇರುವುದರಿಂದ ಇವೊತ್ತಿನ ದಿವಸ ನಿಮ್ಮ ಯೋಜನೆಗಳು ಕೇವಲ ಕಂಟ್ರಾಕ್ಟರುಗಳ ಯೋಜನೆಗಳಾಗಿವೆ. ಎಷ್ಟೆಷ್ಟು ಯೋಜನೆಗಳಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟು ಗಳನ್ನು ಕಟ್ಟತಕ್ಕ ಕಾಲದಲ್ಲಿ ಸರ್ಕಾರದ ಕೈವಾಡ ಎಷ್ಟು ನಡೆದಿದೆ, ಕಂಟ್ರಾಕ್ಟುಗಳನ್ನು ತಮಗೆ ಬೇಕಾದವರಿಗೆ ಕೊಡಬೇಕೆಂದು ಏನೇನು ಕಲಮುಗಳನ್ನು ಟೆಂಡರಿನಲ್ಲಿ ಹಾಕಬೇಕೋ ಅದನ್ನೆಲ್ಲಾ ಅದರಲ್ಲಿ ನಮೂದಿಸಿ ಅವರಿಗೆ ಕೊಡುತ್ತಾರೆ. 5 ಸ್ಟಾರ್ ಹೋಟೆಲಿನ ಕಂಟ್ರಾಕ್ಟನ್ನು ತಮಗೆ ಬೇಕಾದವರಿಗೆ ಒಬ್ಬರಿಗೆ ಕೊಡಬೇಕೆಂದು 5 ಅಂತಸ್ತಿನ ಮನೆಗಳನ್ನು ಕಟ್ಟಿರತಕ್ಕ ಅನುಭವ ಇರಬೇಕೆಂದು ಹೇಳಿ ಯಾರಿಗೆ ಕೊಡಬೇಕೋ ಅವರಿಗೆ ಕೊಟ್ಟರು. ಇನ್ನೊಂದು ವಿಚಾರವನ್ನು ಹೇಳುತ್ತೇನೆ ಹೇಮಾವತಿ ಪ್ರಾಜೆಕ್ಟಿನಲ್ಲಿ ನಿಮ್ಮ ಕಂಟ್ರಾಕ್ಟಿನಲ್ಲಿ ನಮೂದು ಮಾಡಿರುವ ಷರತ್ತನ್ನು ಮೀರಿ ಪ್ರಾಜೆಕ್ಟ್ ಕಟ್ಟುವುದರಲ್ಲಿ ಅನುಭವವಿಲ್ಲದ ನಿಮಗೆ ಬೇಕಾದ ವ್ಯಕ್ತಿಗೆ ಮೂರೂವರೆ ಕೋಟಿ ರೂಪಾಯಿಗಳ ಕೆಲಸವನ್ನು ಕೊಟ್ಟಿದ್ದೀರಿ. ಇರಿಗೇಷನ್ ಪ್ರಾಜೆಕ್ಟ್ ಕಟ್ಟುವುದರಲ್ಲಿ ಯಾರಿಗೆ ಅನುಭವ ಇದೆಯೋ ಅಂಥವರಿಗೆ ಈ ಕೆಲಸವನ್ನು ಕೊಡತಕ್ಕದ್ದು, ಅಂಥವರು ಟೆಂಡರು ಹಾಕಬೇಕು ಎಂದು ಹೇಳಿ ಸ್ಪಷ್ಟವಾಗಿ ನಮೂದು ಮಾಡಿದ್ದೀರಿ, ಒಂದು ತಿಂಗಳ ಹಿಂದೆ ಟೆಂಡರನ್ನು ವಿಲೇವಾರಿ ಮಾಡಿ ಇವೊತ್ತು ಕೊಟ್ಟಿರತಕ್ಕ ಟೆಂಡರು ಯಾರಿಗೆ ಇರಿಗೇಷನ್ ಪ್ರಾಜೆಕ್ಟ್ ಕಟ್ಟುವುದರಲ್ಲಿ ಏನೇನೂ ಅನುಭವ ಇಲ್ಲವೋ ಅಂಥವರಿಗೆ ನಿಮಗೆ ಬೇಕಾದವರನ್ನು ಏತಕ್ಕೆ ಆರಿಸಿದಿರಿ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ಇದನ್ನು ವಿಚಾರ ಮಾಡಬೇಕು. ರಾಜ್ಯಪಾಲರ ಭಾಷಣದಮೇಲೆ ನಡೆದ ಚರ್ಚೆಗೆ ಉತ್ತರ ಕೊಡುವ ಕಾಲದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕು. ಹೇಮಾವತಿ ಪ್ರಾಜೆಕ್ಟಿನ $3\frac{1}{2}$ ಕೋಟಿ ರೂಪಾಯಿಗಳ ಕೆಲಸವನ್ನು ನೀರಾವರಿ ಯೋಜನೆಯನ್ನು ಕಟ್ಟುವುದರಲ್ಲಿ ಅನುಭವ ಇಲ್ಲದೆ ಇರುವ ವ್ಯಕ್ತಿಗೆ ನಿಮ್ಮ ಕಂಟ್ರಾಕ್ಟಿನಲ್ಲಿ ನಮೂದು ಮಾಡಿರುವ ಷರತ್ತನ್ನು ಮೀರಿ ಸರ್ಕಾರದವರಿಗೆ ಬೇಕಾದ ಒಬ್ಬ ಕಂಟ್ರಾಕ್ಟರಿಗೆ ಏತಕ್ಕೆ ಕೊಟ್ಟಿದ್ದಾರೆ ಎಂದು ನಾನು ಸರ್ಕಾರದಿಂದ ವಿವರವನ್ನು ಕೇಳುವವನಿದ್ದೇನೆ.

ಚೇರ್ಮನ್ ಅವರು.—ಅವರಿಗೆ ಫಸ್ಟ್ ಕ್ಲಾಸ್ ಲೈಸೆನ್ಸ್ ಇದೆಯೋ ಇಲ್ಲವೋ, ಅವರು ಫಸ್ಟ್‌ಕ್ಲಾಸ್ ಕಂಟ್ರಾಕ್ಟರ್ ಅಲ್ಲವೋ ?

ಶ್ರೀ ಎಸ್. ಶಿವಪ್ಪ.—ಫಸ್ಟ್‌ಕ್ಲಾಸ್ ಕಂಟ್ರಾಕ್ಟರ್ ಎಲ್ಲರೂ ಕೂಡ ಇದ್ದಾರೆ. ಫಸ್ಟ್‌ಕ್ಲಾಸ್ ಕಂಟ್ರಾಕ್ಟರ್ ಪೈಕಿ ನೀರಾವರಿ ಯೋಜನೆಗಳನ್ನು ಕಟ್ಟುವುದರಲ್ಲಿ ಅನುಭವ ಇರತಕ್ಕ ವ್ಯಕ್ತಿಗಳು ಮಾತ್ರ ಟೆಂಡರನ್ನು ಹಾಕಬೇಕೆಂದು ಒಂದು ನಿಬಂಧನೆಯನ್ನು ಸ್ಪಷ್ಟವಾಗಿ ಹಾಕಿದ್ದಾರೆ. ಅಷ್ಟೊಂದು ಸ್ಪಷ್ಟವಾಗಿ ಇದ್ದರೂ ಇಂಥ ಫಸ್ಟ್‌ಕ್ಲಾಸ್ ಕಂಟ್ರಾಕ್ಟರ್‌ಗೆ ಕೊಟ್ಟಿದ್ದಾರೆ. ಹೀಗೆ ಯಾರೋ ಒಬ್ಬರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ಸಹಾಯ ಮಾಡಬೇಕೆಂದು ಮಾಡಿ, ಇವತ್ತು ಇದೊಂದು ಕಂಟ್ರಾಕ್ಟರುಗಳ ರಾಜ್ಯವಾದರೆ, ಕಂಟ್ರಾಕ್ಟರುಗಳಿಗೋಸ್ಕರ ಯೋಜನೆಗಳು ಆದರೆ, ನಾವು ಎಷ್ಟು ಹಣವನ್ನು ಈ ಯೋಜನೆಗಳಿಗೆ ಖರ್ಚು ಮಾಡುತ್ತೇವೋ, ಆ ಹಣ ದುಂದು ವೆಚ್ಚವಾಗಿ, ದುರ್ವ್ಯಯವಾಗುತ್ತದೆ. ಈಗ ಅನೇಕ ವಿಚಾರಗಳನ್ನು ಹೇಳಿದ್ದೇನೆ. ಇನ್ನೂ ಕೆಲವು ವಿಚಾರ ಬಜೆಟ್ ಬಂದಾಗ ಹೇಳುತ್ತೇನೆ. ಈ ರೀತಿಯಾಗಿ ನಮ್ಮ ಯೋಜನೆಗಳು ಎಷ್ಟು ಮಟ್ಟಿಗೆ ಕಾರ್ಯ ಗತವಾಗುತ್ತವೆ ಎಂಬುದನ್ನು ನಾವು ನೋಡಬಹುದು. ಸರ್ಕಾರ ಖರ್ಚು ಮಾಡಿರತಕ್ಕ ಹಣವೆಲ್ಲಾ ಅವರಿಗೆ ಬೇಕಾಗಿರತಕ್ಕ ಕಂಟ್ರಾಕ್ಟರುಗಳಿಗೆ ಹೋಗುತ್ತದೆ. ಇದೇ ಈ ಮೂರು ಯೋಜನೆಗಳು ವಿಫಲವಾಗುವುದಕ್ಕೆ ಪ್ರಾಮುಖ್ಯವಾದ ಕಾರಣವೆಂದು ನಾನು ಹೇಳುತ್ತೇನೆ.

ಇನ್ನು ಹೆಚ್ಚಿಗೆ ವಿಚಾರ ಹೇಳದೆ, ಇನ್ನು ಒಂದು ವಿಚಾರ ಹೇಳುತ್ತೇನೆ. ಅದು ದೇಶದಲ್ಲಿರತಕ್ಕ ಅಭಾವ ಪರಿಸ್ಥಿತಿ ಬಗ್ಗೆ. ಈ ಅಭಾವ ಪರಿಸ್ಥಿತಿ ನಮ್ಮ ದೇಶದಲ್ಲಿ ಬಹಳ ಪ್ರದೇಶದಲ್ಲಿ ಇದೆ. ಅದಕ್ಕೋಸ್ಕರ ನಮ್ಮ ಆಹಾರ ಸರಬರಾಜು, ರಿಲೀಫ್ ಕೆಲಸಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರಕ್ಕೆ ಈ ವಿಚಾರದ ಬಗ್ಗೆ ನಾನು ಎಚ್ಚರಿಕೆ ಕೊಡುತ್ತಿದ್ದೇನೆ. ನೀವು 66–67ರಲ್ಲಿ ಮಳೆಬೆಳೆ ಇಲ್ಲದಂತಹ ಹಾಸನ ಜಿಲ್ಲೆಗೆ ಎಷ್ಟು ಆಹಾರಧಾನ್ಯ ಸರಬರಾಜು ಮಾಡಿದ್ದೀರಿ ? 1968ನೇ ಇಸವಿ ಫೆಬ್ರವರಿ-ಮಾರ್ಚಿನಲ್ಲಿ ಅಲ್ಲಿಗೆ ಎಷ್ಟು ಆಹಾರ ಧಾನ್ಯ ಸರಬರಾಜು ಮಾಡಿದ್ದೀರಿ ಎಂದು ತಾವು ನನಗೆ ಅಂಕಿ ಅಂಶಗಳನ್ನು ತಿಳಿಸಬೇಕು. ತಾವು ಹಿಂದೆ ಎಷ್ಟು ಕೊಡುತ್ತಿದ್ದಿರಿ, ಅದರ ಕಾಲುಭಾಗ ಅಥವಾ ಐದನೇ ಒಂದು ಭಾಗವಾದರೂ ಕೂಡ, ಅದು ಗೋಧಿಯಾಗಲಿ, ಮೈದಾ ಆಗಲಿ ಯಾವುದೂ ಕೊಡುತ್ತಾ ಇಲ್ಲ. ನನಗೆ ಜಿಲ್ಲಾಧಿಕಾರಿಗಳು ಹೇಳಿದ್ದಾರೆ ಕಡಿಮೆ ಪ್ರಮಾಣದಲ್ಲಿ-ಇಷ್ಟು ಆಹಾರ ಧಾನ್ಯ ಕೊಟ್ಟರೆ ಇದನ್ನು ಹೇಗೆ ಹಂಚಲಿ ಎಂದು. ಕಾಗದ ಸಮೇತ ತೋರಿಸಿದರು. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ತಾವು ಏನು ಹೇಳುತ್ತಿದ್ದೀರಿ, ಎಲ್ಲರಿಗೂ ಆಹಾರಧಾನ್ಯ ಕೊಡುತ್ತಿದ್ದೇವೆ ಎಂದು. ಆದರೆ ಅಲ್ಲಿ ಆಹಾರಧಾನ್ಯವೇ ಇಲ್ಲದಿದ್ದರೆ ಸರಬರಾಜು ಮಾಡುವುದಾದರೂ ಹೇಗೆ ? ಪುನಃ ಅದೇ ಕೋ-ಆಪರೇಟಿವ್ ಸೊಸೈಟಿ, ಅದೇ ಕೋ-ಆಪರೇಟಿವ್ ಅಧ್ಯಕ್ಷ. ಅವರು ಬಿಳಿ ಟೋಪಿಯವರು. ಅವರು ಜನರನ್ನು ಹೆದರಿಸುತ್ತಿದ್ದಾರೆ. ಏನಯ್ಯಾ ಓಟ್ ಕೊಡುತ್ತೀಯೋ, ಇಲ್ಲದಿದ್ದರೆ ಆಹಾರಧಾನ್ಯವಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ಮಂಡ್ಯ ಸೊಸೈಟಿಯವರು ಕೆಲವರು ಹೇಳಿದ್ದಾರೆ. ಏನಯ್ಯಾ ಓಟ್ ಕೊಟ್ಟೀಯೇನಯ್ಯ ? ಎಂದು. ಈ ರೀತಿ ಕೆಲವರು ಸೊಸೈಟಿ ತಮ್ಮ ಆಸ್ತಿಯೆಂಬ ಭಾವನೆಯಲ್ಲಿ ವರ್ತಿಸುತ್ತಿದ್ದಾರೆ.

ಶ್ರೀ ನಾಗಪ್ಪ.—ಮಂಡ್ಯದಲ್ಲಿ ಯಾವ ಸೊಸೈಟಿ ಎಂದು ಹೇಳಿ ಸ್ವಾಮಿ ?

ಶ್ರೀ ಎಸ್. ಶಿವಪ್ಪ.—ಮಾನ್ಯ ಚನ್ನೇಗೌಡರು ಅಲ್ಲಿಯ ವಿಚಾರಗಳನ್ನು ಹೇಳಿದ್ದಾರೆ. ಇಂಥದನ್ನು ಸರಿಮಾಡುತ್ತೇವೆಂದು ಹೇಳಿದರೆ ನಾನು ಬಹಳ ಸಂತೋಷಪಡುತ್ತೇನೆ. ಇದು ಮಂಡ್ಯದಲ್ಲಿ ಮಾತ್ರ ಅಲ್ಲ, ಇಡೀ ದೇಶದಲ್ಲಿ ಎಲ್ಲೆಲ್ಲೂ ಕಾಂಗ್ರೆಸ್ಸಿನವರು ಕೆಲಸ ಮಾಡುತ್ತಿದ್ದಾರೆ. ಈ ಸಂಸ್ಥೆಗಳಲ್ಲಿ ಕಾಂಗ್ರೆಸ್ಸೇತರರು ಯಾರಾದರು ಒಬ್ಬಿಬ್ಬರು ಇದ್ದರೆ ಅವರು ಬದುಕುವ ಹಾಗಿಲ್ಲ. ಅವರ ಮೇಲೆ ಕೇಸ್ ಹಾಕುತ್ತಾರೆ ಹಾಗೂ ಇನ್ನೇನೋ ಕಿರುಕುಳ ಕೊಡುತ್ತಿದ್ದಾರೆ. ಆದರೆ, ಕಾಂಗ್ರೆಸ್ ಟೋಪಿ ಹಾಕಿಕೊಂಡರೆ ಅವನು ಏನುಬೇಕಾದರೂ ಮಾಡಬಹುದು ; ಇಲ್ಲದಿದ್ದರೆ, ಅವನ ಮೇಲೆ ಏನೇನೊ ತಪ್ಪು ಹೊರಿಸುತ್ತಾರೆ ಮತ್ತು ಹಿಂಸೆ ಕೊಡುತ್ತಾರೆ. ಇದರಿಂದ ಒಬ್ಬರಿಗೆ ಒಂದು ರೀತಿ ಇನ್ನೊಬ್ಬರಿಗೆ ಇನ್ನೊಂದು ರೀತಿ ಮಾಡುತ್ತಿದ್ದಾರೆ. ಆದ್ದರಿಂದ ಆಹಾರ ಸಚಿವರು ಒಂದೇ ಸಮನಾದ ನೀತಿಯನ್ನು ಪಾಲಿಸುವಂತೆ ಮಾಡಬೇಕು.

ಇನ್ನು ಇವತ್ತು ಲೆವಿ ಕಾನೂನು ಸರಿಯಿಲ್ಲ. ಅರ್ಧ, ಕಾಲು ಎಕರೆ ಜಮೀನು ಇದ್ದ ರೈತರಿಗೂ ಲೆವಿ ಹಾಕುತ್ತಿದ್ದಾರೆ. ಅವನು ನಾಲ್ಕು ಐದು ಮೂಟೆ ಬೆಳೆದರೂ, ಅವನು ಕೊಡಬೇಕೆಂದು ಹೇಳುತ್ತಿದ್ದಾರೆ. ನಿಮ್ಮ ಅಧಿಕಾರಿಗಳು ರೈತರಿಗೆ ಹಾಗೂ ಸಣ್ಣ ಹಿಡುವಳಿದಾರರಿಗೆ ಹಿಂಸೆ ಕೊಡುತ್ತಿದ್ದಾರೆ. ಹೋದ ಅಧಿವೇಶನದಲ್ಲಿ ಯಾರೇ ಆಗಲಿ, ಅವನು ತನ್ನ ಮನೆಗೆ, ಖರ್ಚಿಗೆ ಬೇಕಾದಷ್ಟು ಇಟ್ಟು ಹೆಚ್ಚಿನದನ್ನು ಕೊಡಬೇಕೆಂದು ಹೇಳಿದ್ದಾರೆ. ಆದರೆ, ನನಗೆ ಒಬ್ಬ ಅಧಿಕಾರಿ ಹೇಳಿದರು, ಅದೆಲ್ಲಾ ಏನೂ ಇಲ್ಲ, ಕಾನೂನು ಪ್ರಕಾರ ಒಬ್ಬ ಎಷ್ಟು ಕೊಡಬೇಕೆಂದಿದ್ದರೆ, ಅಷ್ಟನ್ನು ಕೊಟ್ಟೇ ತೀರಬೇಕು ಎಂದು. ಅವನು ಬೆಳೆಯಲಿ, ಬೆಳೆಯದಿರಲಿ, ಅವನು ಮನೆಯಲ್ಲಿ ಉಪವಾಸವಿದ್ದರೂ ಕೊಡಬೇಕಾಗಿದೆ. ಈ ಹೇಳಿಕೆ ಅಪಾರ್ಥ ಮಾಡತಕ್ಕ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಯಾವನೇ ರೈತನಾಗಲಿ ತನ್ನ ಮನೆಯಲ್ಲಿ ಒಂದು ವರ್ಷಕ್ಕೆ ಬೇಕಾಗುವಷ್ಟು ಇಟ್ಟುಕೊಂಡು ಉಳಿದುದನ್ನು ಸರ್ಕಾರಕ್ಕೆ ಕೊಡುವ ರೀತಿಯಲ್ಲಿ ಇರಬೇಕು. ಇವತ್ತು ಹೊಲದಲ್ಲಿ ಬೆಳೆಸತಕ್ಕವನಿಗೆ ತನ್ನ ಮನೆಗೆ, ಬೆಳೆಸಿದ ಆಹಾರವನ್ನು ತೆಗೆದುಕೊಂಡು ಹೋಗುವುದಕ್ಕೆ ನಿಮ್ಮ ಕಾನೂನಿನ ಅಡಚಣೆ ಬಂದಿದೆ. ಇಷ್ಟೇ ಅಲ್ಲ, ಲೆವಿ ಪದ್ಧತಿಯಲ್ಲೂ ಒಂದು ದೊಡ್ಡ ಲೋಪ ಇದೆ. ಯಾವ ರೈತನೇ ಆಗಲಿ, ಅವನು ಬೆಳೆದಂತಹ ಧಾನ್ಯಕ್ಕೆ ಮಾರುಕಟ್ಟೆಯಲ್ಲಿ ಏನು ಧಾರಣೆ ಇದೆಯೋ, ಅದನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯವಾಗಿದೆ. ಇವತ್ತು ನೀವು ಕೊಡತಕ್ಕ ಧಾರಣೆಗೂ ಮಾರುಕಟ್ಟೆಯ ಧಾರಣೆಗೂ ಎಷ್ಟು ವ್ಯತ್ಯಾಸವಿದೆ. 52 ರೂಪಾಯಿ ನೀವು ಕೊಟ್ಟರೆ ಮಾರುಕಟ್ಟೆಯಲ್ಲಿ 100 ರೂಪಾಯಿ ಇದೆ. ಒಂದು ಕ್ವಿಂಟಾಲಿಗೆ 50 ರೂಪಾಯಿ ನಷ್ಟ ಮಾಡಿ ಯಾವ ರೈತನು ಕೊಡುತ್ತಾನೆ ? ಎಂದು ತಾವು ಯೋಚನೆ ಮಾಡಬೇಕು. ಸರ್ಕಾರದವರು ಹೇಳಬಹುದು, ಹೆಚ್ಚು ಧಾರಣೆಯಲ್ಲಿ ಕೊಂಡರೆ, ಬಳಕೆದಾರರಿಗೆ ಹೆಚ್ಚು ದರ ಮಾಡಬೇಕಾಗುತ್ತದೆ. ಸರ್ಕಾರದವರು ದರ ಸಬ್ಸಿಡೈಸ್ ಮಾಡಿ ಮಾರುಕಟ್ಟೆಯ ದರದಲ್ಲಿ ಕೊಂಡು ರೈತನಿಗೆ ಹುಮ್ಮಸ್ಸು ಬರುವ ರೀತಿಯಲ್ಲಿ ಮಾಡಲಿ.

(ಶ್ರೀ ಎಸ್. ಶಿವಪ್ಪ)

ಇವತ್ತು ಮಧ್ಯಪಾನ ಕಾನೂನನ್ನು ವಜಾ ಮಾಡಿದ್ದೀರಿ. ಇದರಿಂದ ಎಷ್ಟು ಹಣ ಬರುತ್ತದೆ, 12 ಕೋಟಿ ರೂಪಾಯಿ ಬರುತ್ತದೆ. ಇದರಲ್ಲಿ 10 ಕೋಟಿ ರೂಪಾಯಿ ಸಬ್ಸಿಡಿ ಕೊಡತಕ್ಕ ರೀತಿಯಲ್ಲಿ ಖರ್ಚು ಮಾಡಿದರೆ, ದೇಶದಲ್ಲಿ ರೈತನಿಗೆ ಉತ್ತೇಜನ ಬಂದು ಹೆಚ್ಚು ಬೆಳೆಯುತ್ತಾನೆ. ಆದ್ದರಿಂದ ಆ ರೀತಿ ಮಾಡಿ ತಾವು ಒಂದು ರೂಪಾಯಿಗೆ ಒಂದು ಕೆ.ಜಿ. ಆಗಿ ಮಾಡಿಕೊಟ್ಟರೆ ನಿಜವಾಗಿಯೂ ಆಹಾರ ಮಂತ್ರಿಯವರಾದ ಜತ್ತಿಯವರನ್ನು ಒಳ್ಳೆಯ ಕೆಲಸ ಮಾಡಿದರು ಎಂದು ಜನರು ಹೇಳಿ ಪ್ರಶಂಸೆ ಮಾಡುವರು. ಈ ಕೆಲಸ ಮಾಡುವುದನ್ನು ಬಿಟ್ಟು ತಾವು ಇವೊತ್ತಿನ ದಿವಸ ಬರೀ ಉಪದೇಶಗಳನ್ನ ಮಾಡಿದರೆ ಅದು ಕೇವಲ ಉಪದೇಶಗಳೇ ಆಗುತ್ತವೆ ಮತ್ತು ಯಾರೂ ಅದನ್ನು ಕೇಳುವುದಿಲ್ಲ. ಆದುದರಿಂದ ಈಗಿನಿಂದಲಾದರೂ ಹೆಚ್ಚು ಅನುಕೂಲವಾಗುವಂತಹ ಕೆಲಸಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು.

ಕೊನೆಯದಾಗಿ ಈ ಸರಕಾರಕ್ಕೆ ಒಂದು ಮಾತನ್ನು ಇಲ್ಲಿ ವ್ಯಕ್ತ ಮಾಡಬೇಕಾಗಿದೆ. ಸರಕಾರ ಈ ದೇಶದಲ್ಲಿ ಯಾವ ಒಂದು ದೊಡ್ಡ ಸಮಸ್ಯೆ ಬಗ್ಗೆ ಕೂಡ ಗಮನಕೊಟ್ಟಿದ್ದೇವೆ ಎನ್ನುವುದರ ಬಗ್ಗೆ ಯಾವ ಪ್ರಸ್ತಾಪವನ್ನೂ ಈ ಭಾಷಣದಲ್ಲಿ ಮಾಡುವ ಕಲ್ಪನೆ ಅವರಿಗಿರಲಿಲ್ಲ ಎನ್ನುವುದು ಎದ್ದು ಕಾಣುತ್ತಿದೆ. ನಾನು ಮೊದಲೇ ಇಲ್ಲಿ ಹೇಳಿದ ಹಾಗೆ ಇದು ಸರಕಾರದ ಅಂಜುಬುರುಕತನದ ನೀತಿ ಮತ್ತು ಯಾವ ಜವಾಬ್ದಾರಿಯನ್ನೂ ಇಟ್ಟುಕೊಂಡು ಹೇಳದೇ ಬರೀ ತಪ್ಪಿಸಿಕೊಂಡು ಹೋಗುವಂತಹ ನೀತಿಗಳನ್ನೇ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದನ್ನು ನಾವು ಚೆನ್ನಾಗಿ ನೋಡಬಹುದು. ನಮ್ಮ ದೇಶದ ಬೃಹತ್ ಸಮಸ್ಯೆಗಳಿಗೆ ಯಾವ ನೇರವಾದ ಉತ್ತರವೂ ರಾಜ್ಯಪಾಲರ ಭಾಷಣದಲ್ಲಿ ಎದ್ದು ಕಾಣುತ್ತಿಲ್ಲ. ಇಂತಹ ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಕೆ. ಎಸ್. ಹೀರಪ್ಪ ಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸರವರು ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆ ಮಾಡಲು ಮಂಡಿಸಿರತಕ್ಕ ಸೂಚನೆಯನ್ನು ನಾನೂ ಕೂಡ ಸಂತೋಷದಿಂದ ಸ್ವಾಗತಿಸಿ ಅನೇಕ ವಿಷಯಗಳ ಬಗ್ಗೆ ತಮ್ಮ ಮುಂದೆ ಪ್ರಸ್ತಾಪಿಸಬೇಕೆಂದು ಯೋಚನೆ ಮಾಡಿದ್ದೇನೆ.

ಸ್ವಾಮೀ, ತಮಗೇ ತಿಳಿದ ಹಾಗೆ ನಾವೆಲ್ಲರೂ ಕೂಡ ಒಂದು ರಾಜ್ಯಾಂಗಬದ್ಧವಾದ ಕಾನೂನಿನ ಮೂಲಕ ಸೇರಿರತಕ್ಕ ಈ ಮಹಾ ಸಭೆಯಲ್ಲಿ ಇಂದು ಕುಳಿತಿದ್ದೇವೆ. ಇಂತಹ ಸಂದರ್ಭದಲ್ಲಿ ನಾವು ಯಾವ ರೀತಿಯಲ್ಲಿ ಹೋಗಬೇಕು ಎನ್ನುವುದನ್ನು ನಾನು ಇಲ್ಲಿ ಹೇಳಬೇಕಾಗಿಲ್ಲ. ಹಿರಿಯರಾಗಿರುವ ತಮಗೆ ಅವೆಲ್ಲಾ ತಿಳಿದೇ ಇದೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ರಾಜ್ಯಪಾಲರು ಭಾಷಣ ಮಾಡತಕ್ಕ ಸಂದರ್ಭದಲ್ಲಿ ನಮ್ಮ ವಿರೋಧ ಪಕ್ಷದ ಸದಸ್ಯರು ಏನು ಸಭಾತ್ಯಾಗ ಮಾಡಿದರು ಆ ಬಗ್ಗೆ ನನಗೆ ಬಹಳ ವಿಷಾದವಾಗುತ್ತದೆ. ನಾವು ನೀವು ಎಲ್ಲರೂ ಸೇರಿಕೊಂಡು ಈ ಸಭೆಯಲ್ಲಿ ತೀರ್ಮಾನಿಸಿ ಮಾಡಿಸಿದ ಅಭಿವೃದ್ಧಿ ವಿಷಯವನ್ನು ಪ್ರಸ್ತಾಪಿಸಿ ಇದುವರೆಗೆ ಆಗಿರತಕ್ಕ ಕೆಲಸಗಳ ಬಗ್ಗೆ ಈ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ ಮತ್ತು ಯಾವ ಹೊಸ ವಿಚಾರಗಳ ಬಗ್ಗೆ ಗಮನ ಕೊಡಬೇಕು ಎನ್ನುವುದರ ಬಗ್ಗೆ ಹೇಳಿದ್ದಾರೆ. ಆದರೆ ನಮ್ಮ ಸ್ನೇಹಿತರು ಗವರ್ನರ್‌ರವರಿಗೆ ಈ ರೀತಿ ಅಗೌರವ ಮಾಡಕೂಡದಾಗಿತ್ತು. ಆದರೂ ವಿರೋಧ ಪಕ್ಷದವರು ಅಗೌರವ ಮಾಡಬೇಕು ಎನ್ನುವ ಒಂದು ಅಭ್ಯಾಸ ಮಾಡಿಕೊಂಡಿರುವಂತಿದೆ ಇದಕ್ಕಾಗಿ ವಿಷಾದಿಸಬೇಕಾಗಿದೆ. ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

ಮೊದಲನೆಯದಾಗಿ ಲಾ ಅಂಡ್ ಆರ್ಡರು ಬಗ್ಗೆ ವಿಶೇಷವಾಗಿ ಹೇಳಿದ್ದಾರೆ. ಇದನ್ನು ತಾವು ಯೋಚನೆ ಮಾಡಿ ನೋಡಬೇಕು. ಲಾ ಅಂಡ್ ಆರ್ಡರನ್ನು ಜಾರಿಗೆ ಕೊಡತಕ್ಕ ಕಾಲದಲ್ಲಿ ಬಹುಶಃ ನಾವೇ ಅಡ್ಡಿ ತರುತ್ತಿದ್ದೇವೋ ಏನೋ ಎಂದು ತೋರುತ್ತಿದೆ. ಇದು ಹೇಗಾದರೂ ಇರಲಿ ದೇಶದಲ್ಲಿ ಇಂದು ಅಶಾಂತಿ ಜಾಸ್ತಿಯಾಗುತ್ತ ಬರುತ್ತಿದೆ. ಅನೇಕ ಕಡೆಗಳಲ್ಲಿ ನಾವು ಗಲಭೆಗಳಾಗಿರುವುದನ್ನು ಕೇಳಿದ್ದೇವೆ. ಇದರ ಬಗ್ಗೆ ನಾವು ಬಹುದೂರ ಹೋಗಬೇಕಾಗಿಲ್ಲ. ಈಚೆಗೆ ನಡೆದ ಮಧುಗಿರಿ ಪ್ರಕರಣದಲ್ಲಿ ನೋಡಬಹುದು. ಇದಕ್ಕಾಗಿ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ಹೇಳಿದೆವು. ಇಂತಹ ಗಲಭೆಗಳನ್ನು ತಪ್ಪಿಸಲಿಕ್ಕೆ ನಾವೆಲ್ಲ ಪ್ರಯತ್ನ ಮಾಡಿದ್ದರೆ ಆದರಿಂದ ಅನುಕೂಲವಾಗುತ್ತಿತ್ತು. ಮಧುಗಿರಿ ಪ್ರಕರಣದ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಯಿತು. ಪೋಲೀಸರ ಬಗ್ಗೆ ಎಷ್ಟುಮಟ್ಟಿಗೆ ಬಯ್ಯಬೇಕೋ ಅಷ್ಟನ್ನೂ ಮಾಡಿದೆವು. ನಾವೂ ಕೂಡ ಇಲ್ಲಿ ತಪ್ಪು ಮಾಡಿದೆವೋ ಏನೋ ಅದರಿಂದ ಪೋಲೀಸು ಇಲಾಖೆಯ ಅಧಿಕಾರಿಗಳು ಕೆಲವು ಸಂದರ್ಭ

ಗಳಲ್ಲಿ ಸ್ವಲ್ಪಮಟ್ಟಿಗೆ ತಟಸ್ಥರಾಗಿದ್ದರೆ ಒಳ್ಳೆಯದು ಎನ್ನುವ ಅಭಿಪ್ರಾಯಕ್ಕೆ ಅವರೂ ಬಂದಿದ್ದರು ಎನ್ನುವುದು ನನಗೂ ಗೊತ್ತಿದೆ. ನಾವು ಮಾಡಿದ್ದೇ ತಪ್ಪು ಎನ್ನುತ್ತಾರೆ ನಮಗೇಕೆ ಎನ್ನುವ ಭಾವನೆ ಬಂದಂತಿದೆ. ಈಚೆಗೆ ಚಿಕ್ಕಮಗಳೂರಿನಲ್ಲಿ ಆದ ಸಾರ್ವಜನಿಕ ಗಲಭೆಗಳನ್ನು ಕೇಳಿದ್ದೇವೆ. ವಿದ್ಯಾರ್ಥಿಗಳು ಮೈಸೂರಲ್ಲಿ ನಡೆಸಿದ ಆಂದೋಲನಗಳನ್ನು ಕೇಳಿದ್ದೇವೆ. ತರೀಕೆರೆ ಹಾಗೂ ಅಜ್ಜಂಪುರದಲ್ಲಾದ ಸಾರ್ವಜನಿಕ ಗಲಭೆಗಳೂ ನಮಗೆ ಗೊತ್ತಿದೆ, ಇದರಿಂದಾಗಿ ದೇಶದಲ್ಲಿ ಅಶಾಂತಿ ಬೆಳೆಯುತ್ತಿದೆಯೋ ಏನೋ ಎಂದು ನಮಗನಿಸುತ್ತಿದೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ನಾವು ಎರಡು ಕಡೆಗೂ ನೋಡಿ ವಿಚಾರ ಮಾಡಬೇಕಾಗುತ್ತದೆ. ನಾವು ಪ್ರಜಾಪ್ರತಿನಿಧಿಗಳಾಗಿ ಸಾರ್ವಜನಿಕವಾಗಿ ಹೇಳುವಾಗ ಒಂದೇ ದೃಷ್ಟಿಯಿಂದ ಮಾತನಾಡುವುದು ಸರಿಯಲ್ಲ. ಲಾ ಅಂಡ್ ಆರ್ಡರ್ ವಿಷಯದಲ್ಲಿ ನಾವು ಹಾಗು ನೀವು ಎಲ್ಲರೂ ಸಹಕರಿಸಬೇಕು. ಮತ್ತು ದೇಶದಲ್ಲಿ ಶಾಂತಿ ನೆಲಸುವುದಕ್ಕೆ ಒಂದು ಅವಕಾಶ ಕಲ್ಪಿಸಿಕೊಡಬೇಕು. ನಮ್ಮಲ್ಲಿ ಯಾವಾಗಲೂ ಒಂದು ಕಾನೂನು ಆದರೆ ಸರಕಾರ ಅದರಂತೆ ಜಾರಿಗೆ ಕೊಡುವಾಗ ಅದಕ್ಕೆ ವಿರೋಧ ಬೆಳೆಸುವದು ಬಹಳ ಜಾಸ್ತಿಯಾಗುತ್ತಿದೆ ; ಇದಕ್ಕೆ ಕಾರಣವನ್ನು ಹೆಚ್ಚು ಹೇಳಬೇಕಾಗಿಲ್ಲ. ನಾವು ಈಗ ಪಂಚಾಯಿತಿ ರಾಜ್ಯದಿಂದ ತಾಲ್ಲೂಕು ಬೋರ್ಡು ಮತ್ತು ಅಸೆಂಬ್ಲಿಯವರೆಗೆ ಸರಿಯಾದ ವ್ಯವಸ್ಥೆಯುಳ್ಳ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೆಲಸಗಳು ನಡೆಯುವುದಕ್ಕೆ ಸರಕಾರ ಅವಕಾಶಗಳನ್ನು ಕಲ್ಪನೆ ಮಾಡಿಕೊಟ್ಟಿದೆ. ಆದರೆ ನಮ್ಮ ಅಭ್ಯಾಸದಿಂದ ಪಂಚಾಯಿತಿ ರಾಜ್ಯಗಳಲ್ಲಿ ಆಡಳಿತ ಹೇಗೆ ನಡೆಯುತ್ತಿದೆ ಎನ್ನುವುದರ ಕಲ್ಪನೆ ಸ್ವಲ್ಪಮಟ್ಟಿಗೆ ನಮಗೆ ಬಂದಿದೆ. ಈಚೆಗೆ ವಿದ್ಯಾರ್ಥಿಗಳ ಚಳುವಳಿಗಳನ್ನು ನಡೆದುದದನ್ನು ನಾವೆಲ್ಲರೂ ನೋಡಿದ್ದೇವೆ. ನನಗೂ ಗೊತ್ತು. ಈ ರೀತಿ ಪ್ರಜಾಪ್ರಭುತ್ವದ ಮಾರ್ಗ ಬಿಟ್ಟು ಚಳುವಳಿ ಮಾಡುವುದು ಸೂಕ್ತವಲ್ಲ. ಇವೊತ್ತು ವಿದ್ಯಾರ್ಥಿಗಳು ನಮ್ಮ ಮಾತನ್ನು ಕೇಳುವುದಿಲ್ಲ ಎಂದಿದ್ದಾರೆ. ನಮ್ಮಲ್ಲೂ ಹೈಸ್ಕೂಲ್ ಕಾಲೇಜು ಇವೆ, ನಾವು ನಡೆಸುತ್ತಿದ್ದೇವೆ. ಅಲ್ಲಿ ಯಾವ ಚಳುವಳಿಯನ್ನೂ ನಮ್ಮ ವಿದ್ಯಾರ್ಥಿಗಳು ಮಾಡಿಲ್ಲ. ಅಲ್ಲಿ ಹಿಂದಿನಿಂದ ತಳ್ಳುವ ಶಕ್ತಿಗಳಿಗೆ ಅವಕಾಶವಿಲ್ಲ. ನಮ್ಮ ವಿದ್ಯಾರ್ಥಿಗಳು 5-6 ಭಾಷೆ ಮಾತನಾಡುವವರನ್ನು ನೋಡಿ ತಾವೂ ಕಲಿಯಬೇಕೆಂದು ಆಸೆಪಡುತ್ತಿರುತ್ತಾರೆ. ಆದರೆ ಸರಕಾರ ನೀತಿಯನ್ನು ತಂದಾಗ ಅದಕ್ಕೆ ವಿರೋಧ ಪ್ರಾರಂಭ. ಇದರ ಹಿನ್ನೆಲೆ ಎಲ್ಲರಿಗೂ ಅರ್ಥವಾಗುತ್ತೆ. ನಾನು ಜಿಲ್ಲಾ ಹಿಂದಿ ಪರಿಷತ್ತು ಅಧ್ಯಕ್ಷನಾಗಿದ್ದೆ. ಅನೇಕರು ತಾವಾಗಿ ಕಲಿಯಲು ಬರುತ್ತಿದ್ದರು. ಸಾಂಕೇತಿಕ ಪ್ರತಿಭಟನೆ ಸೂಚಿಸಲು ವಿದ್ಯಾರ್ಥಿಗಳು ಹೊರಟರು. ಯಾವುದೋ ಹಿಂದುಗಡೆಯ ಶಕ್ತಿ ಇಂತಹ ಚಳುವಳಿ ಬೆಳೆಯಲು ಕಾರಣವಾಯಿತು ಎಂಬುದನ್ನು ನಾವೆಲ್ಲರೂ ತಿಳಿದಿದ್ದೇವೆ. ಹಾಗೆ ಒಂದು ರೀತಿಯಾದ ಬುದ್ಧಿವಾದವನ್ನು ಅವರಿಗೆ ನಾವು ಹೇಳಬೇಕೇ ವಿನಾ ಅವರನ್ನುಪಯೋಗಿಸಿಕೊಂಡು ಸರಕಾರದ ಮೇಲೆ ಚಳುವಳಿ ಮಾಡುತ್ತೇವೆ ಎಂದು ಮಾನ್ಯ ಸದಸ್ಯರಾದ ಶಿವಪ್ಪನವರು ಇಲ್ಲಿ ಹೇಳಿದಂತಹ ವಾದ ಬಹಳ ವಿಷಾದಕರ. ಹೀಗೆ ಮಾನ್ಯ ಸದಸ್ಯರಾದ ಶಿವಪ್ಪನವರು ವಿದ್ಯಾರ್ಥಿಗಳ ಒಂದು ಚಳುವಳಿಯನ್ನೇ ಮುಂದು ಮಾಡಿಕೊಂಡು ಸರಕಾರವನ್ನು ಎದುರಿಸುವಂತೆ ಮಾಡಿದರೆ ಇದರಿಂದ ಪ್ರಜಾಪ್ರಭುತ್ವ ಉಳಿದಂತಾಗುತ್ತದೆಯೇ ? ಇದು ಎಷ್ಟರ ಮಟ್ಟಿನ ಒಳ್ಳೆಯ ಹಾದಿಯಾಗುತ್ತದೆ ಎನ್ನುವುದನ್ನು ನಾವು ದೇಶದ ಜನತೆಗೆ ತೋರಿಸಿಕೊಡಬೇಕು. ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ನಾನು ಇಲ್ಲಿ ಕಾಂಗ್ರೆಸ್ ಸರಕಾರದ ಬಗ್ಗೆ ಮಾತನಾಡುವುದಿಲ್ಲ. ಸರಕಾರ ಒಂದು ಇದೆ ಎಂದು ಇಟ್ಟುಕೊಳ್ಳೋಣ. ಯಾವ ಸರಕಾರವೇ ಆಗಲಿ, ಅದರಲ್ಲಿ ವಿರೋಧಪಕ್ಷವಿರುವುದು ಸ್ವಾಭಾವಿಕ. ಇದಕ್ಕೆ ನನ್ನ ಅಡ್ಡಿಯೇನಿಲ್ಲ, ಸಂತೋಷ. ಆದರೆ ಅವರು ಕಟ್ಟತಕ್ಕ ಮನೆ ಎಷ್ಟರಮಟ್ಟಿಗೆ ಭದ್ರವಾಗಿರಬೇಕು ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ನಾಳೆ ವಿರೋಧಪಕ್ಷದವರೂ ಆಡಳಿತವನ್ನು ನಡೆಸುವ ಸಂದರ್ಭ ಬಂದಾಗ ಅವರುಗಳೂ ಕೂಡ ಇದೇ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬರುತ್ತದೆ ಎನ್ನುವುದನ್ನು ಅವರೂ ಗಮನದಲ್ಲಿಟ್ಟುಕೊಳ್ಳಬೇಕು. ನಾವು ಹೇಗೋ 20 ವರ್ಷ ನಡೆಸಿದೆವು. ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು ಸುಮಾರು 21 ವರ್ಷಗಳಾದವು ಎಂದು ಹೇಳಿದರೆ ಒಬ್ಬ ಮನುಷ್ಯ ಮೆಜಾರಿಟಿಗೆ ಬಂದಂತೆ ನಮ್ಮ ಜನರಿಗೆ ಸ್ವಾತಂತ್ರ್ಯದ ಅನುಭವ ಚೆನ್ನಾಗಿ ಬಂದಿದೆ. ಇದರಂತೆ ಜನತೆಯೂ ಕೂಡ ಆಡಳಿತ ಯಾವ ರೀತಿ ನಡೆಯಬೇಕು ಎನ್ನುವುದನ್ನು ತಿಳಿದುಕೊಂಡಿದ್ದಾರೆ. ಈಗ ಪಂಚಾಯತಿಗಳಲ್ಲಿ ತಾವು ನೋಡಬಹುದು. ಅಲ್ಲಿ ಪಾರ್ಟಿ ಸಿಸ್ಟಂ ಇಲ್ಲಾ ಜನರು ಯಾವ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನೋಡಿದ್ದೇವೆ. ಜನರ ಮೇಲೆ ಟ್ಯಾಕ್ಸ್ ಹಾಕಿದರೂ ಜನರು ಅದನ್ನು ತಮ್ಮ ಅನುಕೂಲಕ್ಕಾಗಿ ಹಾಕುತ್ತಾರೆ ಎಂದು ಅದನ್ನು ಕೊಡುತ್ತಾರೆ. ಇಲ್ಲಿ ಯಾವ ರೀತಿಯಾದ ಚಳುವಳಿಯೂ ನಡೆಯುತ್ತಿಲ್ಲ. ಇದೇ ರೀತಿ ತಾಲ್ಲೂಕು ಬೋರ್ಡುಗಳನ್ನು ತೆಗೆದುಕೊಂಡರೆ ಇದರಲ್ಲೂ ಯಾವ ಪಾರ್ಟಿ ಗೊಂದಲಗಳೂ ಬರುವುದಿಲ್ಲ. ಯಾವ ರೀತಿ ಟ್ಯಾಕ್ಸ್ ವಸೂಲು ಮಾಡಿದರೂ ಚಳುವಳಿ ನಡೆಯುವುದಿಲ್ಲ. ಇದಕ್ಕೆ ಕಾರಣವೇನು ? ಈ ಸಂಸ್ಥೆಗಳವರು

(ಶ್ರೀ ಕೆ. ಎಸ್. ವೀರಪ್ಪಗೌಡ)

ಅವರಿಗೆ ಬೇಕಾಗುವ ಬಡ್ಜೆಟ್ಟನ್ನು ಜನರ ಮುಂದೆ ಹೇಳುತ್ತಾರೆ ಅವರು ಅದಕ್ಕೆ ಒಪ್ಪಿಗೆ ಕೊಡುತ್ತಾರೆ. ಅದರಂತೆ ಅವರಿಗೆ ಅಗತ್ಯವಾಗುವಂತಹ ಟ್ಯಾಕ್ಸ್‌ಗಳನ್ನು ಹಾಕುತ್ತಾರೆ. ಜನರಿಗೂ ಕೂಡ ಇದರಿಂದ ಹೆಚ್ಚು ಅನುಕೂಲಗಳು ದೊರೆಯುತ್ತವೆ ಎಂದು ಟಾಕ್ಸ್‌ಗಳನ್ನು ಕೊಡುತ್ತಾರೆ. ಅದರಂತೆ ನಾವು ಸರಕಾರದ ಕಷ್ಟ ಸುಖಗಳನ್ನು ಜನರಮುಂದೆ ಹೇಳಬೇಕು. ಇದೇರೀತಿ ಈ ಅಸೆಂಬ್ಲಿಯಲ್ಲೂ ನಾವು ಮಾಡತಕ್ಕ ರೀತಿನೀತಿಗಳು ಸಾರ್ವಜನಿಕರ ಹಿತವನ್ನು ರಕ್ಷಣೆ ಮಾಡುವ ರೀತಿಯಲ್ಲಿರಬೇಕೇ ವಿನಾ ನಾವು ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಇದಕ್ಕೆ ಒಂದು ವೈಯ್ಯಕ್ತಿಕವಾದ ಒಂದು ಅಭಿಪ್ರಾಯವನ್ನು ಕಲ್ಪನೆ ಮಾಡುವುದು ಸರಿಯಲ್ಲ. ಎಲೆಕ್ಷನ್‌ಗಳು ಬಂದಾಗ ಹೋರಗೆ ಹೋಗಿ ಏನೋ ಒಂದು ರೀತಿಯಾಗಿ ಮಾತನಾಡುತ್ತೇವೆ. ಆದರೆ ದೇಶದ ಮುಖ್ಯವಾದ ಸಮಸ್ಯೆಗಳನ್ನು ಇಲ್ಲಿ ಚರ್ಚೆ ಮಾಡುವಾಗ ಸರಕಾರದ ನೀತಿಗಳು ಹೇಗೆ ಇರಬೇಕು ಅದನ್ನು ಯಾವರೀತಿಯಾಗಿ ಬೆಳೆಸಬೇಕು ಮತ್ತು ಸಾರ್ವಜನಿಕರಿಗೆ ಯಾವ ರೀತಿ ಉಪಯೋಗವಾಡಬಹುದು ಎನ್ನುವುದರ ಕಡೆಗೆ ಲಕ್ಷ್ಯಕೊಟ್ಟು ಸರಕಾರಕ್ಕೆ ಸಲಹೆಗಳನ್ನು ಕೊಡಬೇಕು. ಇಂತಹ ಒಂದು ಮನೋಭಾವದಿಂದ ಕೆಲಸ ಮಾಡುವುದಾದರೆ ಶಾಂತಿ ಮತ್ತು ಸಮಾಧಾನಗಳು ಬರಲು ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಯಾರಿಗೂ ಅನುಕೂಲವಾಗುವುದಿಲ್ಲ. ಇಲ್ಲಿ ಪೋಲೀಸಿನವರ ಮೇಲೆ ಇಷ್ಟೊಂದು ಹೇಳಿರುವುದನ್ನು ನೋಡಿದರೆ ಅದು ಅಷ್ಟು ಸರಿಯಲ್ಲ ಎಂದು ನನಗೆ ತೋರುತ್ತದೆ. ಪೋಲೀಸಿನವರು ಕೂಡ ಸಂಬಳಕ್ಕಾಗಿ ಜೀವನ ಮಾಡಲು ಸರಕಾರಕ್ಕೆ ಬಂದಿರಬಾರರು; ದೇಶದ ಜನರ ಸೇವೆ ಮಾಡಬೇಕು ಎನ್ನುವ ಮನೋಭಾವದಿಂದ ಅವರು ಆಡಳಿತದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಪೋಲೀಸಿನಲ್ಲಿರುವ ಜನರೂ ಕೂಡ ನಮ್ಮ ಅಣ್ಣ ತಮ್ಮಂದಿರಂತಹ ಜನಗಳೇ. ಅವರೂ ಕೂಡ ದೇಶಸೇವೆ ಮಾಡಲು ಬಂದಿರುತ್ತಾರೆ. ಇಂತಹವರ ಮೇಲೆ ಇಷ್ಟೊಂದು ಟೀಕೆಗಳನ್ನು ಮಾಡುವುದಾದರೆ ಅವರಿಂದ ಕೆಲಸಗಳನ್ನು ತೆಗೆದುಕೊಳ್ಳುವದು ಅಷ್ಟು ಸುಲಲಿತವಾಗುವುದಿಲ್ಲ.

4-30 P.M.

ಆದ್ದರಿಂದ ಪೋಲೀಸ್ ಅಧಿಕಾರಿಗಳು ಸಹ ನಮ್ಮ ಅಣ್ಣತಮ್ಮಂದಿರು ಎಂದು ತಿಳಿದುಕೊಳ್ಳಬೇಕು ದೇಶದಲ್ಲಿ ಶಾಂತಿಯುತವಾದ ವಾತಾವರಣ ಉಂಟಾಗಬೇಕಾದರೆ ಸದಸ್ಯರಾಗಿರುವ ನಾವೆಲ್ಲರೂ ಸಹ ಪೋಲೀಸರೊಡನೆ ಸಹಕರಿಸಬೇಕು. ಈ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ವಿವರವಾಗಿ ತಿಳಿಸಿದ್ದಾರೆ. ವಿದ್ಯಾರ್ಥಿಗಳಲ್ಲಿ ಒಳ್ಳೆಯ ಭಾವನೆ ಬರುವಂತೆ ತಿಳಿವಳಿಕೆ ಕೊಡುವುದು ನಮ್ಮೆಲ್ಲರ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ನಮ್ಮ ವಿದ್ಯಾರ್ಥಿಗಳು ಅತ್ಯುತ್ತಮ ಮನೋಭಾವನೆಯುಳ್ಳವರು.

ಇನ್ನು ಯೋಜನೆಗಳ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇರತಕ್ಕಂಥ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದುವರೆಗೆ ಏನು ಕೆಲಸಗಳು ನಡೆದಿವೆ, ಏನು ಆಗಬೇಕಾಗಿದೆ, ಏನು ತೊಂದರೆಗಳಿವೆ ಎಂಬುದನ್ನು ವಿವರವಾಗಿ ತಿಳಿಸಿದ್ದಾರೆ. ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಹಣಕಾಸಿನ ತೊಂದರೆಯಿಂದಾಗಿ ಯೋಜನೆಗಳು ನಡೆದಿಲ್ಲವೆಂದು ಒಂದು ಸಾರಿ ಹೇಳಿದರು, ಮತ್ತೊಂದು ಸಾರಿ ಕಂದಾಯವನ್ನು ಹಾಕಬಾರದು ಎಂದು ಹೇಳಿದರು. ಇವುಗಳಲ್ಲಿ ಯಾವುದನ್ನು ನಾವು ಅನುಸರಿಸಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಕಂದಾಯದ ವಿಚಾರದಲ್ಲಿ ನಾನೂ ಸಹ ಅನೇಕ ಹಳ್ಳಿಗಳಿಗೆ ಹೋಗಿ ರೈತರಲ್ಲಿ ಚರ್ಚೆ ಮಾಡಿದ್ದೇನೆ. ಕೆಲವು ಹಳ್ಳಿಗಳಲ್ಲಿ ರೈತರು ಹೇಳುತ್ತಾರೆ, ನಮ್ಮ ಹಳ್ಳಿಯಲ್ಲಿರುವ ಶಾಲೆಯಲ್ಲಿ ಒಬ್ಬರೇ ಉಪಾಧ್ಯಾಯರು ಇದ್ದಾರೆ, ಇನ್ನೂ ಇಬ್ಬರು ಬೇಕು ಎಂದು. ಆಗ ನಾನು ನೀವು ಕಂದಾಯ ಕೊಡುವುದಕ್ಕಾಗುವುದಿಲ್ಲ ಎನ್ನುತ್ತೀರಿ, ಇನ್ನೂ ಇಬ್ಬರು ಬೇಕಾದರೆ ಅವರಿಗಾಗುವ ಹೆಚ್ಚಿನ ಖರ್ಚು ನೀವೇ ವಹಿಸಿಕೊಳಬೇಕಲ್ಲವೇ ಎಂದು ಹೇಳಿದಾಗ, ಒಪ್ಪಿಕೊಂಡರು. ರೈತರಿಗೆ ಸದಸ್ಯರುಗಳಾದ ನಾವುಗಳೇ ಸರಿಯಾದ ತಿಳಿವಳಿಕೆಯನ್ನು ಕೊಡಬೇಕಾಗುತ್ತದೆ. ಅಂದರೆ ರೈತರ ಮೇಲೆ ಹೆಚ್ಚಿನ ಟ್ಯಾಕ್ಸ್ ಹಾಕಬೇಕು ಎಂದು ಹೇಳುವ ಮನುಷ್ಯ ನಾನಲ್ಲ. ನಾವುಗಳು ಇವತ್ತು ರಾಜ್ಯಪಾಲರ ಭಾಷಣದಲ್ಲಿರುವ ನೀತಿಯನ್ನು ಅನುಸರಿಸಿ ನಮ್ಮ ರಾಜ್ಯ ಉದ್ಧಾರವಾಗುವುದಕ್ಕೆ ನಾವು ಮತ್ತು ನೀವುಗಳೆಲ್ಲರೂ ಸಹಕರಿಸಬೇಕಾಗಿದೆ. ಈ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಯೋಚನೆ ಮಾಡುವುದಾದರೆ ನಾವುಗಳು ಲ್ಯಾಂಡ್ ರೆವಿನ್ಯೂವನ್ನು ಹಳ್ಳಿಯವರ ತಲೆಗೆ 2.19 ಮಾತ್ರ ಸರ್ಕಾರಕ್ಕೆ ಕೊಡುತ್ತಿದ್ದೇವೆ. ಮಾದರಿಗೆ ಹೇಳುವುದಾದರೆ ನನ್ನ ಕ್ಷೇತ್ರವಾದ ಶೃಂಗೇರಿ ಮುನಿಸಿಪಾಲಿಟಿಯನ್ನು ತೆಗೆದುಕೊಂಡರೆ ಅಲ್ಲಿಯ ಜನರು ಒಂದು ತಲೆಗೆ 22 ರಂತೆ ಕಂದಾಯವನ್ನು ಕೊಡುತ್ತಿದ್ದಾರೆ.

ಇದರಿಂದ ಆ ಕ್ಷೇತ್ರದ ಕೆಲಸಕಾರ್ಯಗಳು ಸುಲಲಿತವಾಗಿ ನಡೆದುಕೊಂಡು ಹೋಗುತ್ತಿವೆ, ಯಾವ ತೊಂದರೆಯೂ ಬರುತ್ತಿಲ್ಲ. ರೈತರುಗಳಿಗೆ ನಾವು ಹೇಳೋಣ. ನೀವು ಸರಿಯಾಗಿ ತೆರಿಗೆಗಳನ್ನು ಕೊಡಿ, ನಿಮ್ಮ ಹಳ್ಳಿಗಳಿಗೆ ಬೇಕಾಗುವ ಸೌಕರ್ಯಗಳನ್ನು ಒದಗಿಸಿಕೊಡುತ್ತೇವೆ ಎಂದು. ಈ ರೀತಿ ದೇಶವನ್ನು ಚೆನ್ನಾಗಿ ಬೆಳೆಸಬೇಕಾದರೆ ಒಂದು ಒಳ್ಳೆಯ ನೀತಿಯನ್ನು ಅನುಸರಿಸಬೇಕಾಗುತ್ತದೆ. ಈ ರೀತಿ ಒಳ್ಳೆಯ ನೀತಿಯನ್ನು ಅನುಸರಿಸಿಕೊಂಡು ಹೋದರೆ ಮುಂದೆ ಯಾರೇ ಅಧಿಕಾರಕ್ಕೆ ಬಂದರೂ ಸಹ ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಹೋಗಬಹುದು.

ಇನ್ನು ಅಭಿವೃದ್ಧಿ ಬಗ್ಗೆ ಶ್ರೀ ಶ್ರೀನಿವಾಸ್ ಅವರು ಸರಿಯಾದ ಅಂಕಿಅಂಶಗಳನ್ನು ಕೊಟ್ಟಿದ್ದಾರೆ ಇದನ್ನು ವಿರೋಧಪಕ್ಷದವರು ಅಲ್ಲಗಳೆಯಲಾರರು. ನಮ್ಮ ವಿರೋಧಪಕ್ಷದವರು ರಸ್ತೆಗಳು ವಗ್ಯೈರೆ ಕೆಲಸ ಸರಿಯಾಗಿ ನಡೆದಿಲ್ಲವೆಂದು ಹೇಳುತ್ತಾರೆ. ಅದು ಸರಿಯಲ್ಲ, ಅನೇಕ ಕಡೆ ಕೆಲಸಗಳಾಗಿದೆ. ಹತ್ತು ವರ್ಷಗಳಿಂದೀಚೆಗೆ ಸ್ಕೂಲ್‌ಗಳ ಸಂಖ್ಯೆ ಒಂದಕ್ಕೆ 10 ರಷ್ಟು ಜಾಸ್ತಿಯಾಗಿವೆ. ಆದರೆ ಸರ್ಕಾರದವರು ಕಂದಾಯವನ್ನು ಒಂದಕ್ಕೆ 10 ರಷ್ಟು ಜಾಸ್ತಿ ಕೇಳುತ್ತಿಲ್ಲ. ಗರಷ್ಟು ಕೇಳುತ್ತಿದ್ದಾರೆ. ಕಂದಾಯವನ್ನೇ ಕೊಡಬೇಡಿ ಎಂದು ಜನರಲ್ಲಿ ತಪ್ಪು ಅಭಿಪ್ರಾಯವನ್ನು ಬೆಳೆಸುವುದು ಸರಿಯಲ್ಲ. ಏನಾದರೂ ಕಂದಾಯ ಕೊಡುವುದು ಕಷ್ಟವಾಗುವುದಾದರೆ ರೈತರು ಮತ್ತು ನಾವು ಕೂಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಅವಕಾಶವಿದೆ. ಚುನಾವಣೆಗಳಲ್ಲಿ ನಾವು ಅನೇಕ ಭರವಸೆಗಳನ್ನು ನೀಡಿ ಚುನಾಯಿಸಿ ಬಂದಿರುತ್ತೇವೆ. ರಸ್ತೆಗಳನ್ನು ಮಾಡಿಸಿಕೊಡುತ್ತೇವೆಂದು ಹೇಳಿರುತ್ತೇವೆ. ಅದನ್ನು ಮಾಡಿಸಲು ಸರಕಾರದಲ್ಲಿ ಹೇಳುತ್ತೇವೆ ಅದಕ್ಕೆ ಹೆಚ್ಚಿನ ಖರ್ಚು ಆಗುತ್ತದೆಯೋ ಇಲ್ಲವೇ ? ಅದು ಎಲ್ಲಿಂದ ಬರಬೇಕು ? ರಸ್ತೆಗಳನ್ನು ಸರ್ಕಾರದವರು ಒಂದು ಸಾವಿರ ಚಿಲ್ಲರೆ ಮೈಲಿಯಷ್ಟು ಈ ಸಾರಿ ರಿಪೇರಿಗೆ ತೆಗೆದುಕೊಂಡಿರುತ್ತಾರೆ. ಒಂದು ಮೈಲಿ ರಸ್ತೆಯನ್ನು ವರ್ಷಂಪ್ರತಿ ರಿಪೇರಿ ಮಾಡಿಸಬೇಕಾದರೆ ಎರಡು ಸಾವಿರ ರೂಪಾಯಿಗಳು ಖರ್ಚಾಗುತ್ತದೆ, ಈ ಹಣ ಎಲ್ಲಿಂದ ಬರಬೇಕು ? ಪ್ರಜೆಗಳಿಂದ ನಾವುಗಳು ಸರಿಯಾಗಿ ತೆರಿಗೆಕೊಡಿಸಿದರೆ ಸರ್ಕಾರದವರು ಕಾರ್ಯಗಳನ್ನು ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ನನ್ನ ಕ್ಷೇತ್ರದಲ್ಲೂ ಸಹ ಹೊಸ ರಸ್ತೆಗಳನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ರಾಜ್ಯಪಾಲರ ಭಾಷಣವನ್ನು ನಾವೆಲ್ಲರೂ ಅರಿತು, ಅವರು ಹೇಳಿರತಕ್ಕ ಸಲಹೆಗಳನ್ನು ಜಾರಿಗೆ ತರುವುದಕ್ಕೆ ಪ್ರಜಾಪ್ರತಿನಿಧಿಗಳಾಗಿರತಕ್ಕ ನಾವೆಲ್ಲರೂ ಪ್ರಯತ್ನಿಸಬೇಕು. ಪಂಚಾಯಿತಿ ಸದಸ್ಯನಿಂದ ಹಿಡಿದು ಲೋಕಸಭೆಯ ಸದಸ್ಯರವರೆಗೂ ಎಲ್ಲರೂ ಸಹ ಜನರಿಗೆ ಸರಿಯಾದ ತಿಳುವಳಿಕೆಯನ್ನು ಕೊಡದೇ ಹೋದರೆ ಮುಂದೆ ಯಾರೇ ಸರ್ಕಾರ ರಚನೆ ಮಾಡಿದರೂ ಸಹ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ಆಹಾರಸರಬರಾಜಿನ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಸ್ವಾತಂತ್ರ್ಯ ಬಂದಾಗ 33 ಕೋಟಿ ಜನಸಂಖ್ಯೆ ಇತ್ತು. ಈಗ ತೆಗೆದು ಕೊಂಡರೆ 56 ಕೋಟಿಯಷ್ಟು ಜನಸಂಖ್ಯೆಯಿದೆ. ಎಲ್ಲರಿಗೂ ಸರಿಯಾಗಿ ಆಹಾರದ ಸರಬರಾಜಾಗಿದೆಯೆಂದು ಹೇಳುವುದಕ್ಕಾಗದಿದ್ದರೂ ಒದಗಿಸಿದೆ. ಈ ವಿಚಾರದಲ್ಲಿ ಎಲ್ಲರ ಸಹಕಾರ ಬೇಕಾಗುತ್ತದೆ. ಮಾನ್ಯ ಶಿವಪ್ಪನವರು ಒಂದು ಮಾತನ್ನು ಹೇಳಿದರು, ರೈತರಿಂದ ಲೆವಿ ವಸೂಲು ಮಾಡುವಾಗ ಹೆಚ್ಚಿನ ಬೆಲೆಯನ್ನು ಸರ್ಕಾರದವರು ಕೊಡಬೇಕೆಂದು. ಮತ್ತೆ ಅವರೇ ಹೇಳಿದರು, ಬಡವರಿಗೆ ಆಹಾರ ಧಾನ್ಯಗಳನ್ನು ಕಡಿಮೆ ದರದಲ್ಲಿ ಹಂಚಬೇಕೆಂದು; ಮತ್ತು ಹೆಚ್ಚಿನ ಟ್ಯಾಕ್ಸ್ ಹಾಕಕೂಡದೆಂದು. ಈ ರೀತಿಯ ಸಲಹೆಗಳನ್ನು ಕೊಟ್ಟರೆ ಸರ್ಕಾರ ನಡೆಸುವುದಾದರೂ ಹೇಗೆ ? ಈ ವಿಚಾರದಲ್ಲಿ ಇನ್ನೂ ಸ್ವಲ್ಪ ಹೆಚ್ಚಿಗೆ ಹೇಳುವುದಾದರೆ, ಮಾನ್ಯ ಶಿವಪ್ಪನವರು ಅವರ ಕ್ಷೇತ್ರದಲ್ಲಿ ಯಾರ ಯಾರ ಹತ್ತಿರ ಹೆಚ್ಚಿನ ಆಹಾರಧಾನ್ಯಗಳು ಇದೆಯೋ, ಅವರಿಂದ ಸರ್ಕಾರಕ್ಕೆ ಕೊಡಿಸುವುದಕ್ಕೆ ತಕ್ಕ ಪ್ರಯತ್ನ ಮಾಡಲಿ. ಇದರಿಂದ ಬಡವರಿಗೆ ಕಡಿಮೆ ದರದಲ್ಲಿ ಹಂಚುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ನಾನೂ ಸಹ ನನ್ನ ಕ್ಷೇತ್ರದಲ್ಲಿ ಇದೇ ನೀತಿಯನ್ನು ಸಾರುತ್ತಿದ್ದೇನೆ. ಯಾವ ದೃಷ್ಟಿಯಿಂದಲೂ ಸಹ ಬಡವರಿಗೆ ಅನಾನುಕೂಲ ಮಾಡಬಾರದು ಎನ್ನುವುದೇ ಎಲ್ಲರ ಉದ್ದೇಶವಾಗಿದೆ.

ಇನ್ನೂ ಕುಟುಂಬ ಯೋಜನೆಯ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಸರ್ಕಾರದವರು ಎಷ್ಟೇ ಪ್ರಚಾರ ಮಾಡಿದರೂ ಸಹ, ಕೆಲವು ಜನಾಂಗಗಳು ತಮ್ಮ ತಮ್ಮ ಜನಸಂಖ್ಯೆ ಜಾಸ್ತಿಯಾಗಬೇಕೆಂದು ಕುಟುಂಬ ಯೋಜನೆಗೆ ಒಳಪಡುತ್ತಿಲ್ಲ. ಇದರಿಂದ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತಿದೆ. ಜನಸಂಖ್ಯೆ ಹೆಚ್ಚು ಬೆಳೆಯುತ್ತಿದ್ದರೆ ಲೆವಿ ವಸೂಲು ಮಾಡುವುದನ್ನು ನಿಲ್ಲಿಸುವುದಕ್ಕಾಗುತ್ತದೆಯೇ ? ಈ ಯೋಜನೆಯ ಬಗ್ಗೆ ರಾಜಕೀಯ ದೃಷ್ಟಿಯನ್ನು ಇಟ್ಟುಕೊಳ್ಳದೆ ಸರ್ವರೂ ಸರ್ಕಾರದೊಡನೆ ಸಹಕರಿಸಬೇಕು. ಆಗ ಮಾತ್ರ ಈ ಯೋಜನೆ ಯಶಸ್ವಿಯಾಗುವುದಕ್ಕೆ ಅವಕಾಶವಾಗುತ್ತದೆಂದು ನಾನು ತಿಳಿದಿದ್ದೇನೆ.

(ಶ್ರೀ ಕೆ. ಎನ್. ವೀರಪ್ಪಗೌಡ)

ಇನ್ನೂ ಸ್ಕೂಲು ವಿಚಾರ ತೆಗೆದುಕೊಂಡರೂ ಕೂಡ ವಿದ್ಯಾಭ್ಯಾಸ ಸೌಕರ್ಯ ಹೆಚ್ಚಿಸುವುದಕ್ಕೆ ಹೆಚ್ಚು ಸ್ಕೂಲುಗಳನ್ನು ಕೊಡಬೇಕು, ಹೆಚ್ಚು ಕಾಲೇಜುಗಳನ್ನು ಪ್ರಾರಂಭಿಸಬೇಕು. ಆದರೆ ಇದಕ್ಕೆ ಎಲ್ಲಿಂದ ದುಡ್ಡು ಕೊಡಬೇಕು ? ಸರಕಾರ ಇದಕ್ಕೆ ಹಣ ಖರ್ಚು ಮಾಡಬೇಕು. ಆದುದರಿಂದ ಮಿತ ಸಂತಾನ ಯೋಜನೆಯನ್ನು ಯಾರೇ ಇರಲಿ ಸಾರ್ವಜನಿಕರೆಲ್ಲರೂ ಯಶಸ್ವಿಯಾಗುವ ಹಾಗೆ ಪ್ರಯತ್ನ ಮಾಡಬೇಕು. ಹತ್ತು ವರ್ಷ ಕಾಲ ಜನಸಂಖ್ಯೆ ಹೆಚ್ಚುವರಿ ಮುಂದುವರಿಸಿಕೊಂಡು ಹೋದರೆ ಜನ ಸುಖವಾಗಿ ಬಾಳಲು ಸಾಧ್ಯವಾಗುತ್ತದೆಯೇ ಎನ್ನುವುದನ್ನು ಎಲ್ಲರೂ ಯೋಚನೆ ಮಾಡಬೇಕು. ಬೃಹ್ಮಾಂಡವಾಗಿ ಬೆಳೆಯತಕ್ಕಂಥ ಪ್ರಜಾಸಂಖ್ಯೆ ತಡೆಗಟ್ಟುವುದು ಅವಶ್ಯಕವಾಗಿದೆ. ಆದುದರಿಂದ ಮಿತ ಸಂತಾನ ಯೋಜನೆಯ ವಿಚಾರದಲ್ಲಿ ಸಾರ್ವಜನಿಕರು ಸಹಕಾರ ಮಾಡಬೇಕಾದುದು ಅಗತ್ಯ ಎಂದು ತಮ್ಮ ಮೂಲಕ ಎಲ್ಲರಿಗೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೂಲಂಕಷವಾಗಿ ಈ ಬಗ್ಗೆ ನಮ್ಮ ಮುಂದೆ ಹೇಳಿದ್ದಾರೆ. ನಾವು ನಮ್ಮ ಕರ್ತವ್ಯ ಮಾಡದೇ ಹೋದರೆ ದೇಶ ಅಭಿವೃದ್ಧಿಯಾಗುವುದಿಲ್ಲ ಎಂದು ಈ ರೀತಿ ಹೇಳಿದ್ದಾರೆ. ನಾವೆಲ್ಲರೂ ನಮ್ಮ ಕರ್ತವ್ಯ ಪಾಲನೆ ಮಾಡಬೇಕು.

ಇನ್ನು ವ್ಯವಸಾಯ ಇಲಾಖೆಯ ಬಗ್ಗೆ ಹೆಚ್ಚಿಗೆ ಹೇಳದೇ ಇದ್ದರೂ ಆಹಾರ ಹೆಚ್ಚು ಬೆಳೆಸುವುದಕೆ ಸಲಹೆ ಮಾಡಿದ್ದಾರೆ. ಇನ್ನು ಫಾರೆಸ್ಟ್ ವಿಚಾರ. ನಮ್ಮ ಮಲೆನಾಡು ಪ್ರದೇಶದಲ್ಲಿ ಭಗವತಿ ವ್ಯಾಲಿಯಲ್ಲಿ ಬೆಂಕಿ ಹತ್ತಿ ಕಾಡು ಸುಟ್ಟು ಹೋದ ಬಗ್ಗೆ ಕೆಲವರು ಹೇಳಿದ್ದಾರೆ. ನಾನೂ ಸಹ ಅಲ್ಲಿಗೆ ಹೋಗಿ ನೋಡಿ ಬಂದಿದ್ದೇನೆ. ಕೆಲವು ಭಾಗ ಅರಣ್ಯ ಸಂಪತ್ತು ನಾಶವಾದುದು ನಿಜವಿದ್ದರೂ ಅರಣ್ಯ ಇಲಾಖೆಯವರು ಎಷ್ಟು ಫಾರೆಸ್ಟ್ ಬೆಳೆಸಿದ್ದಾರೆ ಇದನ್ನು ನೋಡಬೇಕು. ಇದರಿಂದ ಎಷ್ಟು ಪ್ರಯೋಜನವಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಕೇವಲ ಟೀಕೆ ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಅಲ್ಲಿ ಬೆಂಕಿ ಬಿದ್ದು ನಷ್ಟವಾದುದನ್ನು ನಾನು ಸ್ವತಃ ಫಾರೆಸ್ಟ್ ಮಂತ್ರಿಗಳ ಜೊತೆಗೆ ನಡೆದುಕೊಂಡು ಹೋಗಿ ನೋಡಿದ್ದೇನೆ. ಇದೇ ರೀತಿ ಗಂಗಾಮೂಲ ಕೆಲವು ಕಡೆ ಸ್ವಾಭಾವಿಕವಾಗಿ ಬೆಂಕಿ ಬಿದ್ದು ಹೋಗಿದೆ. ಎಡವಿದ್ದನ್ನೇ ಹೆಚ್ಚು ಮಾಡಿ ಟೀಕೆ ಮಾಡುವುದು ಒಳ್ಳೆಯದಲ್ಲ. ಒಳ್ಳೇ ವಾತಾವರಣ ಉಂಟಾಗುವುದಕ್ಕೆ ಎಲ್ಲರೂ ಸಹಕರಿಸಬೇಕು.

ಇನ್ನು ಮಹಾಜನ್ ಕಮಿಷನ್ ವರದಿ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲ ಪ್ರಸ್ತಾಪ ಮಾಡಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಈ ಬಗ್ಗೆ ಹೇಳಲು ನಾನು ಬಯಸುವುದಿಲ್ಲ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟು ಯುವಕರನ್ನು ತಯಾರ್ಮಾಡಬೇಕು. ಇದರಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಇಂದು ಹಿಂದಿ ಭಾಷೆ ಬಗ್ಗೆ ಅನೇಕರು ಗೊಂದಲ ಉಂಟುಮಾಡುತ್ತಿದ್ದಾರೆ. ವಿಧ್ಯಾರ್ಥಿಗಳು ಐದಾರು ಭಾಷೆ ಕಲಿಯಬೇಕು ಎಂದು ಇರತಕ್ಕ ಉತ್ಸಾಹವನ್ನು ಏತಕ್ಕೆ ಕಡಿಮೆ ಮಾಡಬೇಕು ? ಹೆಚ್ಚು ಭಾಷೆ ಕಲಿಯುವುದಕ್ಕೆ ಅವಕಾಶ ಮಾಡಿಕೊಡೋಣ. ಸರಕಾರದ ಯಾವುದಾದರೂ ಒಂದು ಕಾನೂನು ಬರುತ್ತದೆ ಎಂದರೆ ಅದಕ್ಕೆ ವಿರೋಧ ವ್ಯಕ್ತ ಪಡಿಸತಕ್ಕಂಥಾದ್ದು ಸ್ವಾಭಾವಿಕವಾಗಿದೆ. ಮೈಸೂರಿನ ವಿದ್ಯಾರ್ಥಿಗಳು ಹಿಂದೀ ಭಾಷೆಯನ್ನೂ ಕಲಿಯಲಿ, ಬೇರೆ ಅನೇಕ ಭಾಷೆಗಳನ್ನೂ ಕಲಿಯಲಿ, ಆಲ್ ಇಂಡಿಯಾ ಸರ್ವಿಸಿಗೆ ಹೋಗಲಿ ಹಾಗು ಪರದೇಶಕ್ಕೂ ಹೋಗಲಿ ಅದಕ್ಕೆ ಅವಕಾಶ ಕಲ್ಪಿಸೋಣ. ಭಾಷೆ ಕಲಿಯುವ ಬಗ್ಗೆ ರಾಜಕೀಯ ಬೇಡ. ವಿದ್ಯಾರ್ಥಿಗಳು ಹೆಚ್ಚು ಭಾಷೆ ಕಲಿಯಲಿ. ದೇಶದಲ್ಲಿ ಯಾವ ಭಾಗದಲ್ಲಿಯಾದರೂ ಹೋಗಿ ಸುಖವಾಗಿ ಜೀವನ ಮಾಡುವುದಕ್ಕೆ ಪ್ರೋತ್ಸಾಹ ಕೊಡೋಣ. ನಮ್ಮ ರಾಜಕೀಯಕ್ಕೋಸ್ಕರ ಇದನ್ನು ಉಪಯೋಗಿಸಿಕೊಳ್ಳುವುದು ಸರಿಯಲ್ಲ ಎಂದು ಹೇಳುತ್ತೇನೆ. ರಾಷ್ಟ್ರದ ಸೇವೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿರಬೇಕು. ರಾಷ್ಟ್ರದ ಹಿತ ದೃಷ್ಟಿಯ ಮನೋಭಾವನೆಯಿಂದ ಎಲ್ಲರೂ ಕೆಲಸ ಮಾಡಬೇಕಾದುದು ಅಗತ್ಯ.

ಇನ್ನು ಸರಕಾರಿ ನೌಕರರು ಹೆಚ್ಚು ತುಟ್ಟಿ ಭತ್ಯ ಕೇಳುತ್ತಿದ್ದಾರೆ. ಅದು ಒಪ್ಪತಕ್ಕಂಥ ಮಾತು. ಆದರೆ ಡಿ. ಎ. ಹೆಚ್ಚು ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆಹಾರ ಧಾನ್ಯಗಳ ಬೆಲೆ ಹೆಚ್ಚುತ್ತಲೇ ಇದೆ. ದಿನಚರಿ ಬೇಕಾಗುವ ವಸ್ತು ಆಹಾರ ಧಾನ್ಯ ಸುಲಭವಾಗಿ ಕಡಿಮೆ ಬೆಲೆಗೆ ದೊರೆಯುವಂತೆ ಮಾಡಿದರೆ ಅದೇ ಒಳ್ಳೆಯದಾಗುತ್ತದೆ. ಡಿ. ಎ. ಜಾಸ್ತಿ ಮಾಡಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತೇನೆ. ಆದರೆ ಈ ಹೆಚ್ಚಿನ ಭಾರ ಯಾರ ಮೇಲೆ ಬೀಳುತ್ತದೆ ? ಇದನ್ನು ಸರಿತೂಗಿಸಲು ಸಾರ್ವಜನಿಕರ ಮೇಲೆ ತೆರಿಗೆ ಹಾಕಬೇಕಾಗುತ್ತದೆ. ಇದು ಒಳ್ಳೆಯದಲ್ಲ. ಸಾರ್ವಜನಿಕರ ಪ್ರತಿನಿಧಿಗಳಾದ ನಾವು ಇದನ್ನು ಸರಿಪಡಿಸುವುದಕ್ಕೆ ಯೋಚನೆ

ಮಾಡಬೇಕಾದುದು ಅಗತ್ಯ. ಇದನ್ನು ಸಾಧಿಸುವುದು ಕಾನೂನು ಕಟ್ಟಲೆಯಿಂದ ಸಾಧ್ಯವಿಲ್ಲ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿರುವ ಸಭಾಪತಿಗಳನ್ನು ವಂದಿಸಿ, ನಮ್ಮ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ಸೂಚನೆಯನ್ನು ಸಂಪೂರ್ಣವಾಗಿ ಸಂತೋಷದಿಂದ ಅನುಮೋದಿಸಿ ಅವರಿಗೆ ವಂದನೆಗಳನ್ನು ತಮ್ಮ ಮೂಲಕ ಸಲ್ಲಿಸುವುದಕ್ಕೆ ಆಶಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಂಡಿಸಿರುವ ನಿರ್ಣಯವನ್ನು ವಿರೋಧಿಸುತ್ತ ಮತ್ತು ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಹೇಳಿದ ಮಾತುಗಳನ್ನು ಸಮರ್ಥಿಸುತ್ತ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ.

ಶ್ರೀಮಾನ್ ವೀರಪ್ಪ ಗೌಡರು ತಮ್ಮ ಭಾಷಣದಲ್ಲಿ ರಾಜ್ಯಪಾಲರು ಭಾಷಣದಲ್ಲಿ ರಾಜ್ಯ ಮಾಡುವಾಗ ವಿರೋಧ ಪಕ್ಷದ ಸದಸ್ಯರು ಗೈರುಹಾಜರಾದುದಕ್ಕಾಗಿ ವಿಷಾದಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ಬಹಳ ವ್ಯಥೆಯಿಂದ ಕ್ಷಮಿಸಬೇಕಾಗಿದೆ. ಇಡೀ ಕರ್ಣಾಟಕ ರಾಜ್ಯದಲ್ಲಿ ಯಾವ ಕಾಲದಲ್ಲಿಯೂ ಇಲ್ಲದ ಅರಾಜಕತೆಯು ದೇಶದಲ್ಲಿ ಉಂಟಾಗಿದ್ದು, ನಾಗರೀಕ ಜೀವನ ಅಸ್ತವ್ಯಸ್ತವಾಗಿರುವಾಗ ಶಾಂತಿ ಸ್ಥಾಪನೆಗೆ ಸರ್ಕಾರ ಅಧ್ಯಕ್ಷತೆಯನ್ನು ಪ್ರದರ್ಶಿಸಿದಾಗ ಮತ್ತು ಈ ರಾಜ್ಯದಲ್ಲಿ ಅದಕ್ಷವಾದ ಸರ್ಕಾರದಿಂದ ಪ್ರಾಮಾಣಿಕವಾಗಿ ರಾಜ್ಯ ಭಾರ ನಡೆದಿಲ್ಲ ಎಂದು ಜನತೆಗೆ ಕಂಡುಬಂದಂಥ ಕಾಲದಲ್ಲಿ ಕಣ್ಣು ಮುಚ್ಚಿ ಕೈಕಟ್ಟಿ ಕುಳಿತ ರಾಜ್ಯಪಾಲರ ಕರ್ತವ್ಯವನ್ನು ವಿರೋಧ ಮಾಡಿ ವಿರೋಧಪಕ್ಷದವರು ಹೊರಗೆ ಹೋಗಿದ್ದಾರೆಯೇ ವಿನಾ ಬೇರೆ ಅಲ್ಲ. ಇದಕ್ಕಾಗಿ ವಿರೋಧಪಕ್ಷದವರು ತಮ್ಮ ಕಾರ್ಯವನ್ನು ಅವರು ಮಾಡಿದ್ದಾರೆ.

ರಾಜ್ಯಪಾಲರ ಭಾಷಣವನ್ನು ಮೊದಲಿನಿಂದ ಕೊನೆಯವರೆಗೂ ಓದಿದಾಗ ನನಗನ್ನಿಸಿತು, ಹೊಸದಾಗಿ ಶಾಲೆಗೆ ಹೋಗುವ ಒಬ್ಬ ಹುಡುಗನ ಕೈಗೆ ಕೊಟ್ಟ ಪುಸ್ತಕಗಳ ಪಟ್ಟಿಯಂತೆ ಇದೆ, ರಾಜ್ಯಪಾಲರ ಭಾಷಣ. ನಿಜವಾಗಿಯೂ ದೇಶದ ಮುಂದೆ ಇರುವ ಸಮಸ್ಯೆಗಳ ವಿಷಯದಲ್ಲಿ ಅವರು ಒಂದು ನಿರ್ದಿಷ್ಟವಾದ ವಿಷಯವನ್ನು ನಿರೂಪ ಮಾಡಬೇಕಾಗಿತ್ತು. ಆ ರೀತಿ ಮಾಡಿಲ್ಲ. ಈ ಭಾಷಣದಲ್ಲಿ ಯಾವ ಒಂದು ಆಕರ್ಷಕವಾದ ವಿಷಯಗಳಾಗಲೀ ಅಥವಾ ಹೊಸ ಅಂಶಗಳಾಗಲೀ, ನೀತಿ ನಿರೂಪಣೆಗಳಾಗಲೀ ಇಲ್ಲದೆ ಇರುವುದು ಸರ್ಕಾರದ ಅಸಮರ್ಥತೆಯನ್ನು ಸೂಚಿಸುತ್ತದೆ. ಮುಖ್ಯವಾಗಿ ದೇಶದ ಮುಂದೆ ಇರತಕ್ಕ ಭಾಷಾ ಸಮಸ್ಯೆಯ ವಿಷಯದಲ್ಲಿ ಒಂದು ದೃಢ ನಿರ್ಧಾರವನ್ನು ತೆಗೆದುಕೊಳ್ಳತಕ್ಕ ದಿಟ್ಟತನ ಸರ್ಕಾರಕ್ಕೆ ಇಲ್ಲದಿರುವುದು ನಿಜವಾಗಿಯೂ ಶೋಚನೀಯ. ಇವೊತ್ತಿನ ದಿವಸ ಏನೊಂದು ತ್ರಿಭಾಷಾ ಸೂತ್ರವನ್ನು ನಮ್ಮ ಕೇಂದ್ರ ಸರ್ಕಾರದವರು ಒಪ್ಪಿ ಆ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಾಗ ಇಡೀ ದಕ್ಷಿಣದಲ್ಲಿ ಸಂಪು ನಡೆದಾಗ ಮದ್ರಾಸ್ ರಾಜ್ಯದವರು ಒಂದು ತೀರ್ಮಾನವನ್ನು ಕೈಕೊಂಡರು. ಅದರಂತೆಯೇ ನಮ್ಮ ಕರ್ಣಾಟಕದಲ್ಲಿಯೂ ಒಂದು ತೀರ್ಮಾನವನ್ನು ಕೈಕೊಳ್ಳತಕ್ಕ ದಕ್ಷತೆ ನಮ್ಮ ಸರ್ಕಾರಕ್ಕೆ ಇಲ್ಲವಾಗಿದೆ. ಮುಖ್ಯ ಮಂತ್ರಿಗಳು ತ್ರಿಭಾಷಾ ಸೂತ್ರದಿಂದ ದಕ್ಷಿಣದವರ ಮೇಲೆ ಒಂದು ಹೊರೆ ಹೇರಿದಂತೆ ಆಗಿದೆ. ನಿಜವಾಗಿಯು ಇದರ ಬಗ್ಗೆ ಒಂದು ಉಪಾಯವನ್ನು ಕಂಡುಹಿಡಿದು ಈ ಹೊರೆಯನ್ನು ತಗ್ಗಿಸಬೇಕು ಎನ್ನುವ ಅರ್ಥ ಬರತಕ್ಕ ಮಾತುಗಳನ್ನು ಆಡಿದ್ದಾರೆ. ಇದರಿಂದ ಅವರು ತ್ರಿಭಾಷಾ ಸೂತ್ರವನ್ನು ಒಪ್ಪಿದಂತೆಯೇ ಅಥವಾ ವಿರೋಧವನ್ನು ವ್ಯಕ್ತಪಡಿಸಿದಂತೆಯೇ ಅಥವಾ ದ್ವಿಭಾಷೆಯು ನಮ್ಮಲ್ಲಿರಲಿ ಎಂದು ಹೇಳಿದಂತೆಯೇ, ಇದು ಯಾವುದೂ ಕೂಡ ಅವರ ಮಾತಿನ ವೈಖರಿಯಿಂದ ತೋರುತ್ತಿಲ್ಲ. ಇವೊತ್ತು ಯಾವಾಗ ಹಿರಿಯರು ಎನ್ನಿಸಿಕೊಂಡವರು ತಮ್ಮ ಕರ್ತವ್ಯ ಪಾಲನೆಯಲ್ಲಿ ಹಿಂದುಳಿದಾಗ ವಿದ್ಯಾರ್ಥಿಗಳು ದೇಶದ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ ಸಂಪು ನಡೆಸಿದ್ದಾರೆ. ಇಡೀ ಮದ್ರಾಸ್, ಆಂಧ್ರ ಮತ್ತು ಮೈಸೂರು ರಾಜ್ಯಗಳಲ್ಲಿ ನಡೆದ ವಿಷಯಗಳು ಎಲ್ಲರಿಗೂ ಪರಿಚಯವಿದೆ. ಇಂಥ ಒಂದ ಮುಖ್ಯವಾದ ಸಮಸ್ಯೆ ನಮ್ಮ ಮುಂದೆ ಇರುವಾಗ ಭಾಷಾ ಸಮಸ್ಯೆಯ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನೊಂದೂ ಉಲ್ಲೇಖವಿಲ್ಲದಿರುವುದು ನಿಜವಾಗಿಯೂ ದುರದೃಷ್ಟಕರ. ಇದಕ್ಕಾಗಿ ಈ ಭಾಷಣ ನಿಜವಾಗಿಯೂ ವಂದನೆಗೆ ಅರ್ಹವಲ್ಲ ಎಂದು ನಾನು ಹೇಳಬಯಸುತ್ತೇನೆ.

ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ನಾಗರೀಕ ಜೀವನ ಅಸ್ತವ್ಯಸ್ತವಾಗಿ ಶಾಂತಿಪಾಲನೆ ಮಾಡುತ್ತಿಲ್ಲವೋ ಎಂದು ಕಂಡುಬರುತ್ತಿದೆ. ಇವೊತ್ತು ಎಲ್ಲೆಲ್ಲಿಯೂ ಗೋಲೀಬಾರು ನಡೆಯುತ್ತಿದೆ. ರಾಜ್ಯದ ಇತಿಹಾಸದಲ್ಲಿ ಎಂದೂ ಕಂಡರಿಯದ, ಈ ಒಂದೆರಡು ತಿಂಗಳುಗಳಲ್ಲಿ ನಡೆದ ಗೋಲೀಬಾರುಗಳಿಂದ ನಿಜವಾಗಿಯೂ ಸರ್ಕಾರ ನಾಚಿಕೆಯಿಂದ ತಲೆ ತಗ್ಗಿಸಬೇಕು ಎಂದು ಹೇಳುತ್ತೇನೆ. ಸರ್ಕಾರ ಇಂದು ಬರೀ ಯೋಜನೆಗಳನ್ನು ರೂಪಿಸುವುದರಲ್ಲಿ ತಮ್ಮ ದಕ್ಷತೆಯನ್ನು

(ಶ್ರೀ ಎಂ. ಮಲ್ಲಪ್ಪ)

ತೋರಿಸುತ್ತಿದೆ. ಅದಕ್ಕಾಗಿ ಯಥೇಷ್ಟವಾಗಿ ಹಣವನ್ನು ಖರ್ಚುಮಾಡುತ್ತಿದೆ. ಮೂರು ಪಂಚ ವಾರ್ಷಿಕ ಯೋಜನೆಗಳು ಕಳೆದರೂ ಕೂಡ ಸರ್ಕಾರ ಯಾವ ಸಮಸ್ಯೆಯನ್ನು ಬಗೆಹರಿಸಿದೆ ಎಂಬುದನ್ನು ಏತಕ್ಕಾಗಿ ಹೇಳಲಿಲ್ಲ ಎಂದು ನಾನು ಕೇಳುತ್ತಿದ್ದೇನೆ. ನಮ್ಮ ಸರ್ಕಾರ ಆಹಾರ ಸಮಸ್ಯೆಯನ್ನು ಬಗೆಹರಿಸಿಲ್ಲ. ಆಹಾರ ಸಮಸ್ಯೆಯನ್ನು ತೆಗೆದುಕೊಂಡರೆ ಅದು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿದೆ. ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದ್ದೀರಾ ಎಂದರೆ ಒಂದಕಡೆ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಅರ್ಹತೆಯನ್ನು ಪಡೆದ ಸಾವಿರಾರು ಜನ ಕೆಲಸವಿಲ್ಲದೆ ನರಳುತ್ತಿದ್ದಾರೆ. ಯಾವುದನ್ನು ಬಗೆಹರಿಸಿದ್ದೀರಿ? ಬರೀ ಯೋಜನೆಗಳನ್ನು ಮಾಡಿಕೊಂಡು ಹೋಗುತ್ತ ಹಣವನ್ನು ಪೋಲು ಮಾಡುವುದರಲ್ಲಿ ಮಾತ್ರ ನಿಮ್ಮ ದಕ್ಷತೆಯನ್ನು ತೋರಿಸುತ್ತಿದ್ದೀರಿ. ಇದಕ್ಕೋಸ್ಕರವಾಗಿ ನಾವು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವೊತ್ತು ಸರ್ಕಾರ ಇಲ್ಲ ಎನ್ನತಕ್ಕ ಮಾತು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಮಂತ್ರಿಗಳು ಪ್ರವಾಸ ಮಾಡಬೇಕಾದರೆ ಎದೆಯ ಮೇಲೆ ಕೈ ಇಟ್ಟು ಹೋಗಬೇಕಾಗಿದೆ. ಎಲ್ಲೆಲ್ಲಿಯೂ ಕೂಡ ಅವರು ತಪ್ಪಿಸಿಕೊಂಡು ಹೋಗಬೇಕಾದ ಕಾಲವೂ ಕೂಡ ಬಂದಿದೆ. ಏತಕ್ಕೋಸ್ಕರ ಈ ರೀತಿ ಬಂದಿದೆ? ದೇಶದ ಮುಂದೆ ಇರತಕ್ಕ ಮುಖ್ಯವಾದ ಸಮಸ್ಯೆಗಳನ್ನು ಬಗೆಹರಿಸಿದ್ದೀರಾ? ಆ ಬಗ್ಗೆ ತೀರ್ಮಾನವನ್ನು ಕೈಗೊಳ್ಳದೆ ನೀವು ಕರ್ತವ್ಯ ವಿಮುಖರಾಗಿರುವುದರಿಂದ ಈ ರೀತಿ ದೇಶದಲ್ಲಿ ಅರಾಜಕತೆ ಉಂಟಾಗಿದೆ. ಇನ್ನು ಮುಂದಾದರೂ ಕೂಡ ನೀವು ಕಣ್ಣುಮುಚ್ಚಿ ಕುಳಿತರೆ ದೇಶದಲ್ಲಿ ದೊಡ್ಡ ಕ್ರಾಂತಿಯಾದೀತು ಎಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ.

ನಿಮ್ಮ ಆಹಾರ ನೀತಿ ಏನಾಗಿದೆ? ಒಂದು ಕಡೆ ಲೆವಿ ಪದ್ಧತಿ ಎಂದು ಹೇಳುತ್ತೀರಿ. ಲೆವಿಯಿಂದ ವಸೂಲು ಮಾಡುವ ಧಾನ್ಯವನ್ನು ಒಂದಕ್ಕೆ ಎರಡರಷ್ಟು ಧಾರಣೆಗೆ ಮಾರಾಟ ಮಾಡುತ್ತಿದ್ದೀರಿ. ಒಂದು ಕಡೆ ಹೇಳುತ್ತೀರಿ, ಎಲ್ಲಿಂದ ಎಲ್ಲಿಗೆ ಬೇಕಾದರೂ ಧಾನ್ಯವನ್ನು ತೆಗೆದುಕೊಂಡು ಬರಬಹುದು, ಅದನ್ನು ಉಪಯೋಗ ಮಾಡಬಹುದು ಎಂದು. ರಾಯಚೂರಿನಿಂದ ಅಥವಾ ಗುಲ್ಬರ್ಗದಿಂದ ಏನಾದರೂ ಅಕ್ಕಿ, ಜೋಳ ಇವುಗಳನ್ನು ತಂದರೆ ಅವುಗಳನ್ನು ಹಿಡಿದು ಪೋಲೀಸಿನವರು ವಶಪಡಿಸಿಕೊಳ್ಳುತ್ತಾರೆ. ಇಂಥ ದುಸ್ಥಿತಿ ನಮ್ಮ ದೇಶದಲ್ಲಿದೆ. ಬೆಲೆಗಳನ್ನು ನಿರ್ಧರಿಸುವ ನೀತಿಯಾದರೂ ಕೂಡ ಯಾವರೀತಿ ಇದೆ ಎಂಬುದನ್ನು ಹೇಳಬೇಕಾಗಿಲ್ಲ. ಸರ್ಕಾರ ಯಾವ ವಿಷಯವನ್ನು ಕೂಡ ಜನಸಾಮಾನ್ಯರಿಗೆ ಹಿತವಾಗುವ ರೀತಿಯಲ್ಲಿ ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಉದಾಹರಣೆಗೆ ಬೆಂಗಳೂರಿನಲ್ಲಿ ಜನತಾ ಬಜಾರ್ ಇದೆ. ಬೆಂಗಳೂರು ನಾಗರಿಕರ ಸುಖ ಸೌಲಭ್ಯಕ್ಕಾಗಿ ಇದನ್ನು ಮಾಡಿದ್ದೇವೆಂದು ಹೇಳುತ್ತೀರಿ. ಈಗ ತೊಗರಿ ಬೇಳೆಯ ಧಾರಣೆ ಪೇಟೆಯಲ್ಲಿ 150 ರೂಪಾಯಿ, 160 ರೂಪಾಯಿ ಇದೆ. ಜನತಾ ಬಜಾರಿನಲ್ಲಿ 210 ರೂಪಾಯಿ ಪ್ರಕಾರ ಮಾರಾಟ ಮಾಡುತ್ತಿದ್ದಾರೆ. ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್‌ನಿಂದ ಒಂದು ಕೆ. ಜಿ. ಕರ್ಪೂರಕ್ಕೆ ಹದಿನೆಂಟೂವರೆ ರೂಪಾಯಿನಂತೆ ತಂದು ಅದನು 50 ಗ್ರಾಂಗಳಿಗೆ ಒಂದು ರೂಪಾಯಿಗೆ 40 ಪೈಸೆಯಂತೆ ಜನತಾ ಬಜಾರಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ನ್ಯಾಯವಾದ ಬೆಲೆಗೆ ಆಗತ್ಯವಾದ ವಸ್ತುಗಳನ್ನು ಜನರಿಗೆ ಪೂರೈಕೆ ಮಾಡುತ್ತೇವೆಂದು ಹೇಳುತ್ತೀರಿ. ಆದರೆ ನೀವೇ ನಿರ್ಮಿಸಿರತಕ್ಕ ಈ ನ್ಯಾಯ ಬೆಲೆ ಅಂಗಡಿಗಳಿಂದ ನಿಜವಾಗಿಯೂ ಶ್ರೀಸಾಮಾನ್ಯನಿಗೆ ಅನುಕೂಲವಾಗುತ್ತಿದೆಯೆ ಎನ್ನುವುದನ್ನು ಯೋಚನೆ ಮಾಡಬೇಕು. ಈ ಬಗ್ಗೆ ಸರಿಯಾದ ಪರಿಹಾರವನ್ನು ಜನತೆಗೆ ನೀಡಬೇಕೆಂದು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ.

ವಿದ್ಯಾಭ್ಯಾಸದ ಕ್ರಮದಲ್ಲಿ ಪ್ರತಿವರ್ಷವೂ ಕೂಡ ಮಾರ್ಪಾಡು ಮಾಡಿ ಅದರಿಂದ ಏನೋ ಅನುಕೂಲ ಮಾಡುತ್ತೇವೆಂದು ನಿಮ್ಮ ತಲೆಗೆ ಹಿಡಿದ ಹಾಗೆ ಇದೆ. ಇದರಿಂದ ಅನುಕೂಲವಾಗುವುದಕ್ಕೆ ಬದಲು ಅನಾನುಕೂಲ ಬಹಳ ಹೆಚ್ಚಾಗಿ ಆಗುತ್ತಿದೆ. ಎಲ್ಲೆಲ್ಲಿ ನೋಡಿದರೂ ಕೂಡ ಅಶಾಂತಿ ಮೂಡಿದೆ. ವಿದ್ಯಾ ಇಲಾಖೆ ಬೃಹದಾಕಾರವಾಗಿ ಬೆಳೆದಿದೆ, ನಿಜ. ಆದರೆ ಪ್ರಾಥಮಿಕ ಮತ್ತು ನರ್ಸರಿ ವಿದ್ಯಾಭ್ಯಾಸಕ್ಕೆ ಏನು ಪ್ರಾಮುಖ್ಯತೆಯನ್ನು ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಇವೊತ್ತು ಒಬ್ಬ ಡೈರೆಕ್ಟರವರ ಆಡಳಿತದಲ್ಲಿ ಇಡೀ ವಿದ್ಯಾಭ್ಯಾಸದ ಇಲಾಖೆಯನ್ನು ಇಟ್ಟಿದ್ದೀರಿ. ಇದರಲ್ಲಿ ಸ್ವಲ್ಪ ಬದಲಾವಣೆ ಮಾಡಿ ಪ್ರಾಥಮಿಕ ಮತ್ತು ನರ್ಸರಿ ವಿದ್ಯಾಭ್ಯಾಸಕ್ಕೆ ಪ್ರತ್ಯೇಕವಾಗಿ ಒಬ್ಬ ಡೈರೆಕ್ಟರನ್ನು ನೇಮಕ ಮಾಡಿದರೆ ದಕ್ಷತೆಯಿಂದ ಕೆಲಸ ಮಾಡಬಹುದು ಎಂದು ನನಗನ್ನಿಸುತ್ತದೆ. ಸರ್ಕಾರ ಈ ಬಗ್ಗೆ ಯೋಚನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿಸುತ್ತಿದ್ದೇನೆ. ಹಾಗಿಲ್ಲದೆ ಹೋದರೆ ಸಮಾಜ ಕಲ್ಯಾಣ ಇಲಾಖೆಗಾದರೂ ವಹಿಸಿದರೆ ಚೆನ್ನಾಗಿ ಕೆಲಸ ಮಾಡಬಹುದು. ಈ ಬಗ್ಗೆಯೂ ಸರ್ಕಾರದವರು ಯೋಚನೆ ಮಾಡಿ ಸೂಕ್ತ ನಿಲುವು ಕೈಗೊಳ್ಳಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಕಂಟ್ರೋಲ್ ಮತ್ತು ಲೆವಿಯ ಪದ್ಧತಿಗಳು ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಇರುತ್ತವೆಯೋ ಅಲ್ಲಿಯವರೆಗೂ ಭ್ರಷ್ಟಾಚಾರ ತಪ್ಪಿದ್ದಲ್ಲ. ಇದನ್ನು ಕೊನೆಗಾಣಿಸಬೇಕು. ಲೆವಿ ಪದ್ಧತಿಯಿಂದ ಆಹಾರ ಧಾನ್ಯಗಳ ಬೆಲೆಯನ್ನು ನಿಗದಿ ಮಾಡಿ ದೇಶವನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅದು ಆಗದೆ ಇರತಕ್ಕ ಮಾತು. ಆದುದರಿಂದ ದಿಟ್ಟತನದ ಹೆಜ್ಜೆಯನ್ನಿಟ್ಟು ಲೆವಿ ಪದ್ಧತಿಯನ್ನು ರದ್ದುಗೊಳಿಸಿದರೆ ಅದರಿಂದ ದೇಶದ ಜನತೆಗೆ ಅನುಕೂಲವಾಗುತ್ತದೆ. ಅನೌಪಚಾರಿಕ ಪಡಿತರ ಪದ್ಧತಿಯಲ್ಲಿ ನೀವು ಕೊಡತಕ್ಕ ಆಹಾರ ತಿಂಗಳಲ್ಲಿ ಹತ್ತು ದಿವಸಕ್ಕೂ ಸಾಕಾಗುವುದಿಲ್ಲ. ಉಳಿದ ಧಾನ್ಯವನ್ನು ಬಳಕೆದಾರರು ಮಾರುಕಟ್ಟೆಯಲ್ಲಿ ಕೊಳ್ಳಬೇಕು. ಅದಕ್ಕೋಸ್ಕರ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಆಹಾರ ಧಾನ್ಯವನ್ನು ತೆಗೆದುಕೊಂಡು ಹೋಗಲು ನಿರ್ಬಂಧವಿಲ್ಲದಂತೆ ಮಾಡಿ ಲೆವಿ ಪದ್ಧತಿಯನ್ನು ತೆಗೆದು ಹಾಕಿದರೆ ಜನರಿಗೆ ಅದರಿಂದ ಅನುಕೂಲವಾಗುತ್ತದೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಸರ್ಕಾರ ದೀರ್ಘವಾಗಿ ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಕನ್ನಡಕ್ಕೆ ಸರಕಾರ ನೀಡುತ್ತಿರುವ ಪ್ರೋತ್ಸಾಹ ಸಾಲದು, ಕನ್ನಡ ಬರಹಗಾರರಿಗೆ ಆರ್ಥಿಕ ನೆರವನ್ನು ನೀಡಿ ಸಾಕಷ್ಟು ಪ್ರೋತ್ಸಾಹ ಕೊಟ್ಟರೆ ನಮ್ಮ ಆಸೆ ನೆರವೇರುತ್ತದೆ. ಕನ್ನಡ ಗೆಜೆಟ್ ಹೊರಡಿಸುವುದು ಮುಂತಾದ ಒಂದೆರಡು ಕಾರ್ಯಗಳನ್ನು ಮಾಡಿದರೆ ಸಾಲದು, ಬರಹಗಾರರ ಆರ್ಥಿಕ ಮಟ್ಟವನ್ನು ಉತ್ತಮಪಡಿಸಿದರೆ ಬೇಕಾದ ಗ್ರಂಥಗಳನ್ನು ರಚಿಸಲು ಅವಕಾಶವಾಗಿ ಕನ್ನಡಕ್ಕೆ ನಿಜವಾದ ಪ್ರೋತ್ಸಾಹ ದೊರೆತಂತಾಗುವುದು.

5-00 P.M.

ವ್ಯವಸಾಯದಲ್ಲಿ ನಿಜವಾಗಿಯೂ ಕೂಡ ಏನೂ ಪ್ರಗತಿಯನ್ನು ಸಾಧಿಸಿಲ್ಲ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ನಿಜವಾಗಿಯೂ ನಾನು ರೈತನಾಗಿ ಹೇಳುವುದೇನೆಂದರೆ, ಇಂದು ವ್ಯವಸಾಯದ ಇಲಾಖೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಹೆಚ್ಚು ಅಧಿಕಾರಿಗಳನ್ನು ನೇಮಕಮಾಡಿ ಅವರಿಗೆ ಬಡ್ತಿ ಕೊಡುವುದು, ಸಂಬಳ ಪಾವತಿ ಮಾಡುವುದು ಮುಂತಾದ್ದಕ್ಕೆ ಹೆಚ್ಚು ಹಣ ಖರ್ಚಾಗುತ್ತಿದೆಯೇ ಹೊರತು ರೈತರಿಗೇನೂ ವ್ಯವಸಾಯದ ಇಲಾಖೆಯಿಂದ ಸಹಾಯವಾಗುತ್ತಿಲ್ಲ. ರೈತರಿಗೆ ವಿಶೇಷವಾಗಿ ಅನುಕೂಲಮಾಡುತ್ತಿರುವುದಾಗಿ ಅನೇಕ ವೇಳೆ ಭಾಷಣಗಳನ್ನು ದೊಡ್ಡದಾಗಿ ಮಾಡುತ್ತಾರೆ. ಆದರೆ ನಿಜವಾಗಿ ನೋಡಿದರೆ ಏನು ಸಹಾಯವೂ ಆಗಿಲ್ಲ. ಕಳೆದ 3 ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ 600 ಡೀಸಲ್ ಪಂಪುಸೆಟ್ಟುಗಳಿಗೆ ಅರ್ಜಿಗಳನ್ನು ಕೊಟ್ಟರೆ ಡೆಪ್ಯುಟಿ ಡೈರೆಕ್ಟರು ಕೇವಲ 46 ಪಂಪುಸೆಟ್ಟುಗಳನ್ನು ಕೊಟ್ಟು ಇಡೀ ಜಿಲ್ಲೆಗೆ ಅದನ್ನು ಹಂಚಬೇಕೆಂದು ತಿಳಿಸಿದ್ದಾರೆ. ವ್ಯವಸಾಯಗಾರರ ಉದ್ಧಾರಕ್ಕೆ ಏನು ಬೇಕಾದರೂ ಮಾಡುವುದಕ್ಕೆ ಸಿದ್ಧ ಎಂದು ಜನರು ಸೇರುವಕಡೆ ಮಾತನಾಡುತ್ತಾರೆ. ಆದರೆ ಏನೂ ಸಹಾಯಮಾಡುತ್ತಿಲ್ಲ. ಪಂಪುಸೆಟ್ಟುಗಳನ್ನು ಹೆಚ್ಚಾಗಿ ಒದಗಿಸುತ್ತಿಲ್ಲ. ರೈತರ ಹೆಸರು ಹೇಳಿಕೊಂಡು ಬೇಕಾದಷ್ಟು ಧನಸಹಾಯ ಪಡೆಯುತ್ತಿದ್ದಾರೆ ; ಸಾಲ ಪಡೆಯುತ್ತಿದ್ದಾರೆ. ಆದರೆ ರೈತರಿಗೆ ಮಾಡುವ ಉಪಕಾರ ಏನೇನೂ ಸಾಲದು. ಆದುದರಿಂದ ನಿಜವಾಗಿಯೂ ಕೂಡ ರೈತರಿಗೆ ಸಹಾಯಮಾಡಬೇಕೆಂದಿದ್ದರೆ ದಿಟ್ಟ ಹೆಜ್ಜೆಯನ್ನಿಟ್ಟು ಸೂಕ್ತ ಕ್ರಮ ಆ ಬಗ್ಗೆ ಕೈಕೊಳ್ಳಬೇಕೆಂದು ಹೇಳಬಯಸುತ್ತೇನೆ.

ನಾವು ಪ್ರವಾಸ ಹೋದಾಗ ಸರಕಾರದ ನೀತಿಯನ್ನು ಜನತೆಗೆ ವಿವರಿಸಿದರೆ ನೀವು ಹೇಳುವುದು ನಿಜವಲ್ಲ, ಸರಕಾರ ಏನೂ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ಬಜೆಟ್ ಭಾಷಣದಲ್ಲಿ ಹಿಂದೆ ಸರ್ಕಾರದವರು ಕಂದಾಯವನ್ನು ರದ್ದುಮಾಡುತ್ತೇವೆಂದು ಹೇಳಿದ್ದರು. ಆದರೆ ಈಗ ಮಾಡುವುದಿಲ್ಲ, ಕಷ್ಟವಿದೆ, ಪುನರ್ವಿಮರ್ಶೆಮಾಡಬೇಕು ಎಂದು ಹೇಳುತ್ತಾರೆ. ಇದು ಹುಡುಗಾಟವಾಗಿದೆ. ಸರಕಾರದ ಮಾತಿಗೆ ಬೆಲೆಯೇ ಇಲ್ಲದಂತಾಗಿದೆ. ಅಧಿಕೃತವಾಗಿ ಕೊಟ್ಟ ಹೇಳಿಕೆಯನ್ನು ಗಮನಿಸದೆ ಉದಾಸೀನವಾಗಿ ಮನಸ್ಸಿಗೆ ಬಂದಹಾಗೆ ಮಾತನಾಡುತ್ತಿದ್ದರೆ ಜನಸಾಮಾನ್ಯರಿಗೆ ಸರಕಾರದಲ್ಲಿರುವ ನಂಬಿಕೆ ಹೊರಟುಹೋಗುತ್ತದೆ. ಇಂದು ಎಲ್ಲೆಲ್ಲೂ ಲಂಚರುಷುವತ್ತು ತಾಂಡವಾಡುತ್ತಿದೆ, 75 ಪೈಸೆಗಳ ಒಂದು ಸ್ಟ್ಯಾಂಪನ್ನು ಹಚ್ಚಿ ಒಂದು ಅರ್ಜಿಕೊಟ್ಟರೆ ಮುಂದಿನ ಕೆಲಸವಾಗಬೇಕಾದರೆ 75 ರೂಪಾಯಿಗಳನ್ನು ಖರ್ಚುಮಾಡಬೇಕು. ಇದಕ್ಕೆ ಬದಲಾಗಿ ಏಳೂವರೆ ರೂಪಾಯಿಗಳ ಸ್ಟ್ಯಾಂಪನ್ನು ಹಚ್ಚಬೇಕೆಂದು ಹೇಳಿದರೆ ರೈತರಿಗೆ ಎಷ್ಟೋ ಸಮಾಧಾನವಾಗುತ್ತದೆ. ಸಾಮಾನ್ಯ ಆಡಳಿತ ಕುಸಿದುಬಿದ್ದಿದೆ, ಜನರಿಗೆ ಸರಕಾರದಲ್ಲಿ ನಂಬಿಕೆಯಿಲ್ಲ, ಲಂಚ ತಿನ್ನುವವರ ಸಂಖ್ಯೆ ಹೆಚ್ಚುತ್ತಿದೆ, ದಕ್ಷರೂ ಪ್ರಾಮಾಣಿಕರೂ ಆದ ಅಧಿಕಾರಿಗಳಿಗೆ ಪ್ರೋತ್ಸಾಹವಿಲ್ಲ. ಕಾಂಗ್ರೆಸ್ಸಿನವರು ಯಾರಾದರೂ ದಕ್ಷರಾದ ಅಧಿಕಾರಿಗಳಮೇಲೆ ದೂರು ಹೇಳಿದರೆ ಅವರ ಬಡ್ತಿ ಮುಂತಾದುವುಗಳಿಗೆ ತೊಂದರೆ ಮಾಡುತಾರೆ, ಅವರನ್ನು ಬೇರೆ ಕಡೆಗೆ ವರ್ಗಮಾಡುತ್ತಾರೆ. ಮುಖ್ಯಮಂತ್ರಿಗಳಾದರೋ ವರ್ಗದ

(ಶ್ರೀ ಎಂ. ಮಲ್ಲಪ್ಪ)

ವಿಚಾರದಲ್ಲಿ ಯಾರೂ ಕೂಡ ಅವರ ಹತ್ತಿರ ಬಂದು ಏನೂ ಹೇಳಬಾರದು ಎಂದು ಹೇಳುತ್ತಾರೆ. ಆದರೆ ಯಾರಾದರೂ ಲಂಚ ತಿನ್ನುವುದು ಗೊತ್ತಾದರೆ ನ್ಯಾಯವಾಗಿರುವ ವಿಚಾರವನ್ನು ಹೇಳುವುದಕ್ಕೆ ಸದಸ್ಯರಿಗೆ ಅವಕಾಶವಿರಬೇಡವೇ ? ಯಾರಾದರೂ ತಪ್ಪು ಮಾಡಿದರೆ ಅವರಮೇಲೆ ಸರಿಯಾದ ಕ್ರಮ ಕೈಕೊಳ್ಳದಿದ್ದರೆ ಸರಕಾರವೇಕೆ ಇರಬೇಕು ? ಸರಿಯಾಗಿ ಆಡಳಿತ ನಡೆಸದಿದ್ದರೆ ಅದರಿಂದ ದೇಶಕ್ಕೆ ಅನುಕೂಲವಾಗುತ್ತದೆಯೇ ? ಇಂದು ಸಾಮಾನ್ಯ ಆಡಳಿತ ಕುಸಿದುಬಿದ್ದಿದೆ ಇದರಿಂದ ರೈತರಿಗೆ ಸರಕಾರದಲ್ಲಿದ್ದ ನಂಬಿಕೆ ಹೋಗುತ್ತಿದೆ.

ಇನ್ನು ಪಬ್ಲಿಕ್ ವರ್ಕ್ಸ್ ಬಗ್ಗೆ ಹೇಳಬೇಕಾದರೆ ನೀರಾವರಿ ಕೆಲಸ ತ್ವರಿತವಾಗಿ ಆಗುತ್ತಿಲ್ಲ, ಮಂದಗತಿಯಿಂದ ನಡೆಯುತ್ತಿದೆ. ಮಿತವ್ಯಯದ ಹೆಸರಿನಲ್ಲಿ ಕೆಲವುಕೆಲಸಗಳನ್ನು ಕೈಬಿಟ್ಟು ಬೇಕಾದ್ದನ್ನು ಮಾತ್ರ ಮಾಡುತ್ತಿದ್ದಾರೆ. ಇದು ತಪ್ಪಬೇಕು. ಅಧಿಕಾರವೆಲ್ಲಾ ಕೇಂದ್ರೀಕೃತವಾಗಿದೆ, ಯಾವ ಅಂದಾಜು ಮಾಡಿದರೂ ಅದು ಮಂಜೂರಾಗಲು ಬಹಳ ಕಾಲ ಬೇಕು. ಅದು ಸರಕಾರದಲ್ಲೇ ಮಂಜೂರಾಗಬೇಕು. ಇದು ತಪ್ಪಿ ಅಧಿಕಾರ ವಿಕೇಂದ್ರೀಕರಣವಾಗಬೇಕು. ಇಂದು ಸೂಪರಿಂಟೆಂಡಿಂಗ್ ಎಂಜಿನಿಯರು, ಚೀಫ್ ಎಂಜಿನಿಯರುಗಳಿಗೆ ಸ್ವಲ್ಪ ಅಧಿಕಾರ ಕೊಟ್ಟಿದ್ದರೂ ಹೊಸ ಅಂದಾಜುಗಳು ಸರಕಾರದಿಂದಲೇ ಮಂಜೂರಾಗಬೇಕಾಗಿದೆ. ಇದು ಯಾವ ನೀತಿ ? ಮಿತವ್ಯಯದ ದೃಷ್ಟಿಯಲ್ಲಿ ಇಂದು ರೈತರ ಹಿತಕ್ಕೆ ವಿರುದ್ಧವಾಗಿ ಕೆಲಸಮಾಡುತ್ತಿದ್ದಾರೆ.

ಪೋಲೀಸು ಇಲಾಖೆ ನೋಡಿದರೆ ಲಂಚರುಷುವತ್ತು ಹೆಚ್ಚಾಗಿದೆ, ಬಿಗಿಯಾದ ಆಡಳಿತವಿಲ್ಲ. ಹಿಂದೆ ಪಾನನಿರೋಧ ಜಾರಿಯಲ್ಲಿದ್ದಾಗ ಮಾಮೂಲ ಬೇಕಾದಷ್ಟು ಸಿಕ್ಕಿ ಕೆಲವರಿಗೆ ಅನುಕೂಲವಾಗುತ್ತಿತ್ತು. ಇಂದು ಅದು ತಪ್ಪಿರುವುದರಿಂದ ಜಾತಿಯ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ ಅಥವಾ ಬೇರೆ ಹೆಸರಿನಲ್ಲಿ ಜನರಿಗೆ ಪ್ರೋತ್ಸಾಹಮಾಡಿ ದಂಗೆ ಎಬ್ಬಿಸಿ, ಆ ಸಮಯದಲ್ಲಿ ಬೇಕಾದ ನೆರವನ್ನು ನೀಡದೆ ತೊಂದರೆಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯ ವಿಷಯ ಹೇಳಬೇಕಾದರೆ ನಮ್ಮಲ್ಲಿ ಜಾತಿ, ಭಾಷೆ, ಗಡಿ ಮುಂತಾದುವುಗಳ ಯಾವ ಪ್ರಶ್ನೆಯೂ ಇರಲಿಲ್ಲ, ಇದ್ದಕ್ಕಿದ್ದಹಾಗೆ ಉರಿಹಚ್ಚಿ ಅನೇಕರಿಗೆ ತೊಂದರೆಮಾಡಿದ್ದಾರೆ. ಇದರಿಂದ ಗೌರವಸ್ತರು ತಲೆತಗ್ಗಿಸುವ ಪರಿಸ್ಥಿತಿ ಉಂಟಾಗಿದೆ. ಪ್ರಾಮಾಣಿಕವಾದ ಆಡಳಿತ ಈಗಿಲ್ಲ, ಅದಿದ್ದರೆ ಯಾವ ತೊಂದರೆಗೂ ಅವಕಾಶವೇ ಇರುತ್ತಿರಲಿಲ್ಲ. ಜನತೆಗೆ ಇದರಿಂದ ತೊಂದರೆಯಾಗಿದೆ, ರಾಜ್ಯಪಾಲರ ಭಾಷಣ ನಿಜವಾಗಿಯೂ ವಂದನಾರ್ಹವಾಗಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣದ ಬಗ್ಗೆ ಶ್ರೀನಿವಾಸರವರು ಮಂಡಿಸಿರುವ ನಿರ್ಣಯವನ್ನು ಸಮರ್ಥನೆಮಾಡುತ್ತಾ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣವನ್ನು ಬಹಳ ಸೂಕ್ಷ್ಮವಾಗಿ ಮತ್ತು ಬಹಳ ಅಚ್ಚುಕಟ್ಟಾಗಿ ಮಾಡಿದ್ದಾರೆ ಎಂದು ಹೇಳಲು ನಾನು ಆಸೆಪಡುತ್ತೇನೆ. ಅವರು ತಮ್ಮ ಭಾಷಣದಲ್ಲಿ ಎಲ್ಲಾವಿವರಗಳನ್ನೂ ಹೇಳದಿದ್ದರೂ ಕೂಡ ಕೆಲವೊಂದು ವಿಷಯಗಳನ್ನು ಸೂಕ್ಷ್ಮವಾಗಿ ಒತ್ತಿಹೇಳಿದ್ದಾರೆ. ಅವರ ಭಾಷಣದಲ್ಲಿ ನಾನಾ ವಿಚಾರಗಳು ಅಡಕವಾಗಿವೆ. ಅವುಗಳಲ್ಲಿ ಮುಖ್ಯವಾದ ವ್ಯವಸಾಯದ ವಿಷಯವನ್ನು ತೆಗೆದುಕೊಂಡರೆ 1968—69 ರಲ್ಲಿ 12 ಸಾವಿರ ಎಕರೆ ಭೂಮಿಯನ್ನು ಕೃಷಿಗೆ ಯೋಗ್ಯವಾದುದನ್ನಾಗಿ ಮಾಡುವ ಗುರಿಯಿದೆ, ಇದು ಸಂತೋಷದ ವಿಚಾರ. ಈ ದಿವಸ ರಾಜ್ಯದಲ್ಲಿ ಆಹಾರದ ಬಗ್ಗೆ ಹೆಚ್ಚಿನ ಗೊಂದಲವಾಗಿದೆ. ನಮ್ಮ ರಾಜ್ಯ ಸ್ವಾವಲಂಬಿಯಾಗಬೇಕು, ಆಹಾರದ ಕೊರತೆಯನ್ನು ಹೋಗಲಾಡಿಸಿ ಉತ್ಪತ್ತಿಯನ್ನು ಹೆಚ್ಚಿಸಬೇಕು ಎಂಬ ಗುರಿಯಿದೆ. ಈಗ ಲೆವಿ ಪದ್ಧತಿಯಿದೆ, ಆದರೆ 1 ಎಕರೆ, 2 ಎಕರೆ ಅಥವಾ 4 ಎಕರೆ ಇರುವವರಿಂದ ಹೇಗೆ ವಸೂಲುಮಾಡಬೇಕು ಎಂಬುದು ಅಭಿಪ್ರಾಯಕ್ಕೆ ಸಂಬಂಧಪಟ್ಟ ವಿಚಾರ. ಲೆವಿ ಪದ್ಧತಿಯಿಲ್ಲದಿದ್ದರೆ ಆಹಾರವನ್ನು ಸಂಗ್ರಹಮಾಡುವುದು ಹೇಗೆ ? ಮಳೆಯಿಲ್ಲದೆ ಆಹಾರ ವಿಶೇಷವಾಗಿ ಬೆಳೆಯದಿರುವ ಕಡೆ ಲೆವಿಯನ್ನು ಮನ್ನಾಮಾಡಬೇಕು ಎಂದು ಹೇಳಬಹುದೇ ಹೊರತು ಲೆವಿ ಪದ್ಧತಿಯನ್ನು ನಿಲ್ಲಿಸಬೇಕು ಎಂದು ಹೇಳುವುದು ಸರಿಯಲ್ಲ. ನಾವು ತೊಂದರೆಯಾದ ಪಟ್ಟಣಗಳಿಗೆ ರೇಷನ್ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಕೊಡಬೇಕಾದರೆ ನಮ್ಮಲ್ಲಿ ಸಂಗ್ರಹ ಇರಬೇಕು. ಆದರೆ ಲೆವಿ ಕೊಡಬಾರದೆಂದು ಹೇಳುವುದು ಅಂದೋಳನಮಾಡುವುದು ಕೆಲವು ಕಡೆ ಇದೆ. ಏಕೆಂದರೆ ಲೆವಿ ಬಗ್ಗೆ ಹೆಚ್ಚುಕಮ್ಮಿ ಇದ್ದರೆ ಅದನ್ನು ಸರಿಮಾಡಬೇಕೇ ಹೊರತು ಲೆವಿಯನ್ನೇ ಕೊಡಬಾರದು ಎಂದು ಹೇಳತಕ್ಕ ಪರಿಸ್ಥಿತಿ ಬಂದರೆ ನಾವು ಕಾನೂನನ್ನೇ ಬದಲಾವಣೆ ಮಾಡಬೇಕಾದ್ದು ಅಗತ್ಯವಾಗುತ್ತದೆ. ಆ ರೀತಿ ಮಾಡುವುದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಹೇಳಬಹುದು.

ಇನ್ನು ಇಹಾರದ ಬಗ್ಗೆ ರಾಜ್ಯವನ್ನು ಒಳ್ಳೆಯ ರೀತಿಯಲ್ಲಿ ಮುಂದೆ ತರಬೇಕೆಂದು ಹೇಳತಕ್ಕ ಸಂದರ್ಭದಲ್ಲಿ ಕಳ್ಳಮಾರ್ಕೆಟ್ ವಿಚಾರದಲ್ಲೂ ಕೂಡ ರಾಜ್ಯಪಾಲರು ಒಂದು ಮಾತನ್ನು ಹೇಳಿದ್ದಾರೆ. ವ್ಯಾಪಾರಿಗಳ ಲಾಭಕೋರ ಪ್ರವೃತ್ತಿಯನ್ನು ತಡೆಗಟ್ಟುವ ಸಲುವಾಗಿಯೂ ಹತ್ತಿ ಬಟ್ಟೆ, ಶಿಶುಗಳ ಆಹಾರ,ಖಾದ್ಯ ತೈಲ, ವನಸ್ಪತಿ ಮತ್ತು ಬೇರೆ ಕೆಲವಾರು ಅತ್ಯವಶ್ಯ ಸರಕುಗಳನ್ನು ನ್ಯಾಯವಾದ ಬೆಲೆಗೆ ಮಾರುವಂತೆ ವ್ಯಾಪಾರಿಗಳಿಗೆ ಆದೇಶ ನೀಡಲಾಗಿದೆ ಎಂದು ಹೇಳಿದ್ದಾರೆ. ಇವತ್ತು ಆಹಾರ ವನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಸಾಧ್ಯವಿಲ್ಲ, ಇರತಕ್ಕ ಆಹಾರ ನಮ್ಮ ಜನರಿಗೆ ಸಿಕ್ಕಬೇಕು. ಅದು ನಮ್ಮ ದೇಶದಲ್ಲ ಉಳಿಯಬೇಕು, ಜನರಿಗೆ ಸರಿಯಾಗಿ ಹಂಚಿಕೆಯಾಗಬೇಕು. ಈ ಲಾಭಕೋರರನ್ನು ತಡೆಗಟ್ಟದಿದ್ದರೆ ಒಂದು ಗಡಿಗೆಯಲ್ಲಿ ನೀರನ್ನು ತುಂಬಿ ಒಂದು ಕಡೆ ತೂತನ್ನು ತೆಗೆದರೆ ಯಾವ ಪ್ರಕಾರ ನೀರೆಲ್ಲಾ ಸೋರಿಹೋಗುತ್ತದೆಯೋ ಆ ಪ್ರಕಾರ ತೊಂದರೆಯಾಗತಕ್ಕ ಪರಿಸ್ಥಿತಿ ಬರುತ್ತದೆ. ನಾನು ಕೇರಳದ ಗಡಿಯಿಂದ ಬಂದಿರತಕ್ಕ ಪ್ರತಿನಿಧಿ, ಇವತ್ತು ಬೇಕಾದಷ್ಟು ಅಕ್ಕಿ ಕಳ್ಳಸಾಗಾಟವಾಗಿ ಹೋಗುತ್ತಾ ಇದೆ, ಎಂಬುದು ಜನಜನಿತವಾದ ವಿಚಾರ. ಲಾರಿಗಳಲ್ಲಿ, ಸಮುದ್ರಮಾರ್ಗದಲ್ಲಿ, ಯಂತ್ರ ಚಾಲಿತ ದೋಣಿಗಳಲ್ಲಿ, ಸಾಮಾನ್ಯ ದೋಣಿಗಳಲ್ಲಿ ಸಾಗಾಟವಾಗಿ ಹೋಗುತ್ತಾ ಇದೆ. ಆಹಾರ ಮಂತ್ರಿಗಳು ಇದರ ಬಗ್ಗೆ ಹೇಳಿದಾಗ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಮುಂದೆ ಬಂದಿದ್ದಾರೆ. ಆದರೂ ಕೂಡ ಇದಕ್ಕೆ ಪೋಲಿಸರ ಸಹಾಯ ಮುಖ್ಯವಾಗಿ ಬೇಕು, ಅವರ ಸಹಾಯ ಸರಿಯಾಗಿ ಸಿಕ್ಕರೆ ಮಾತ್ರ ಈ ಕೆಲಸ ಯಶಸ್ವಿಯಾಗಿ ಆಗುತ್ತದೆ. ಇವತ್ತು ನಮ್ಮ ರಾಜ್ಯದಿಂದ ಅಕ್ಕಿ ಹೊರಗೆ ಹೋಗುತ್ತಾ ಇರುವುದು ನಿಲ್ಲಬೇಕು. ಅದು ಮಳೆಗಾಲದಲ್ಲಿ ಎಲ್ಲ ಜನರಿಗೂ ನಮ್ಮ ರಾಜ್ಯದಲ್ಲಿ ಸಿಕ್ಕಬೇಕು, ಅದೂಕೂಡ ನ್ಯಾಯ ಬೆಲೆಗೆ ಸಿಕ್ಕಬೇಕು. ಆ ಒಂದು ವ್ಯವಸ್ಥೆಯನ್ನು ಮಾಡದೆ ಹೋದರೆ ಮಳೆಗಾಲದಲ್ಲಿ ಜನರು ಬಹಳ ಕಷ್ಟಪಡತಕ್ಕ ಪರಿಸ್ಥಿತಿ ಬರುತ್ತದೆ. ಅಂತಹ ಸಂದರ್ಭದಲ್ಲಿ ಜನರು ಬೇಸತ್ತು ಒಂದು ಆಂದೋಳನವನ್ನೇ ಮಾಡಬೇಕಾಗಿ ಬರುತ್ತದೆ. ಅದಕ್ಕೆ ಅವಕಾಶ ಕೊಡಬಾರದು. ನಮ್ಮ ಪೋಲೀಸ್ ಇಲಾಖೆಯವರು ಗಡಿಯಲ್ಲಿರತಕ್ಕವರು, ಸಮುದ್ರದ ಮೂಲಕವಾಗಲಿ, ಯಂತ್ರಚಾಲಿತ ದೋಣಿಗಳ ಮೂಲಕವಾಗಲಿ, ಲಾರಿಗಳ ಮೂಲಕವಾಗಲಿ ಕಳ್ಳಸಾಗಾಣಿಕೆಗೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ ಇಲ್ಲದೇ ಇದ್ದರೆ ಗಡಿಗೆಯಲ್ಲಿ ನೀರು ತುಂಬಿ ಒಂದು ಸಣ್ಣ ತೂತು ಮಾಡಿಬಿಟ್ಟರೆ ನೀರೆಲ್ಲಾ ಸೋರಿಹೋದಂತೆ ಕಷ್ಟ ಪರಿಸ್ಥಿತಿ ಬರುತ್ತದೆ, ಈ ವಲಯ ವ್ಯವಸ್ಥೆ ಹೋಗಬೇಕು ಅದಕ್ಕೆ ನನ್ನ ಕಬೂಲು ಇದೆ. ಏಕೆಂದರೆ ಈ ರೀತಿಯ ಕಷ್ಟವಾಗುವುದಾದರೆ ವಲಯ ವ್ಯವಸ್ಥೆ ಹೋದರೂ ದೋಷ ಇಲ್ಲ, ಆಗ ಲಾಭಕೋರರಿಗೆ ಅವಕಾಶ ಇರುವುದಿಲ್ಲ. ಪೋಲಿಸರು ಕಣ್ಣುಮುಚ್ಚಿ ಕುಳಿತಿರುವುದಕ್ಕೆ ಅವಕಾಶ ಇರುವುದಿಲ್ಲ. ಆದರೆ ಬಹುಶಃ ವಲಯ ವ್ಯವಸ್ಥೆಗೆ 4—5 ರಾಜ್ಯಗಳು ಒಟ್ಟಿಗೆ ಸೇರಿರುವುದರಿಂದ ಆಯಾಯ ರಾಜ್ಯದ ಮಂತ್ರಿಗಳು ಒಪ್ಪಬೇಕಾದ ಪರಿಸ್ಥಿತಿ ಇದೆ, ಅದು ಸಾಧ್ಯವೋ ಇಲ್ಲವೋ ಹೇಳಲಿಕ್ಕೆ ಬರುವುದಿಲ್ಲ. ಈ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರವನ್ನು ಹೇಳುವುದಾದರೆ, ಅದರಲ್ಲೂ ಕೂಡ ರಾಜ್ಯಪಾಲರು ಕೆಲವು ಒಳ್ಳೆಯ ಸೂಚನೆಗಳನ್ನು ಮಾಡಿದ್ದಾರೆ, ಅದೇನಂದರೆ ಪ್ರಸಕ್ತ ವರ್ಷದಲ್ಲಿ, ಪ್ರಾಥಮಿಕ ಮತ್ತು ಸೆಕೆಂಡರಿ ಶಾಲಾಧ್ಯಾಪಕರಿಗೆ ಅನ್ವಯಿಸುವ ತ್ರಿಲಾಭ ಯೋಜನೆಯ ನಿಯಮಗಳಲ್ಲಿ ಸರ್ಕಾರದವರು ತಿದ್ದುಪಾಟು ಮಾಡಿದ್ದಾರೆ. ಈ ತಿದ್ದುಪಡಿಯಿಂದ ಎಲ್ಲ ಅಧ್ಯಾಪಕರೂ ಸರ್ಕಾರಿ ನೌಕರರಂತೆಯೇ ವಿಶ್ರಾಂತಿ ವೇತನವನ್ನೂ ಉಪದಾನವನ್ನೂ (ಗ್ರ್ಯಾಚ್ಯುಯಿಟಿ) ಪಡೆಯಲು ಸಾಧ್ಯ ವಾಗುವುದು ಎಂದು ಹೇಳಿದ್ದಾರೆ. ಬಹಳ ಸಂತೋಷ. ಅಧ್ಯಾಪಕರು ಎಂದರೆ ಅವರು ನಮ್ಮ ದೇಶದ ಶಿಲ್ಪಿಗಳು, ಮುಂದೆ ನಮ್ಮ ದೇಶಕ್ಕೆ ಬೇಕಾಗತಕ್ಕ ನಾಯಕರನ್ನು ತಯಾರು ಮಾಡತಕ್ಕ ವರು, ನಮ್ಮ ದೇಶಕ್ಕೆ ಎಂತಹ ಶಿಸ್ತಿನ ನಾಯಕರು ಬೇಕೋ, ಎಂತಹ ಶಿಸ್ತಿನ ಸಾಹಿತಿಗಳು ಬೇಕೋ, ಶಿಸ್ತಿನ ಕಲೆಗಾರರು ಬೇಕೋ, ಎಂತಹ ಇಂಜನಿಯರುಗಳು ಬೇಕೋ, ಎಂತಹ ವಕೀಲರು ಗಳು ಬೇಕೋ ಅಂತಹವರನ್ನು ತಯಾರು ಮಾಡತಕ್ಕವರು ಎಂದರೆ ಈ ಅಧ್ಯಾಪಕರು. ಅಂತಹವರ ಸಮಸ್ಯೆಗಳನ್ನು ತಿಳಿದು ಒಳ್ಳೆಯ ರೀತಿಯಲ್ಲಿ ತಮ್ಮ ಶಿಷ್ಯರನ್ನು ವಿದ್ಯಾರ್ಥಿಗಳನ್ನು ತರಪೇತು ಮಾಡಿ, ಈ ನಾಡಿನ ಒಳ್ಳೆಯ ಪ್ರಜೆಗಳನ್ನಾಗಿ ಮಾಡತಕ್ಕ ಹೊಣೆಗಾರಿಕೆ ಅವರ ಮೇಲೆ ಇದೆ. ಅಂತಹ ಅಧ್ಯಾಪಕರ ಬಗ್ಗೆ ತ್ರಿಲಾಭ ಯೋಜನೆಯನ್ನು ಮಾಡಿರುವುದು ಬಹಳ ಸಂತೋಷದ ವಿಚಾರ. ಇನ್ನೂ ಕೂಡ ಅವರಿಗೆ ಕೊಡಬೇಕಾದ ಡಿಯರ್‌ನೆಸ್ ಅಲೋಯನ್ಸ್ ಮುಂತಾದ ಎಲ್ಲಾ ಸೌಕರ್ಯ ಗಳನ್ನೂ ಸರಿಯಾದ ರೀತಿಯಲ್ಲಿ ಕೊಟ್ಟರೆ ನಿಜವಾಗಿಯೂ ಆ ಅಧ್ಯಾಪಕರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈಗ ಕೆಲವು ಶಾಲಾ ಅಧ್ಯಾಪಕರಿಗೆ ಚೆಕ್ ಮೂಲಕ ಸಂಬಳ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಬಹಳ ಸಂತೋಷ. ಅದೇ ರೀತಿ ಎಲ್ಲಾ ಶಾಲೆಯ ಅಧ್ಯಾಪಕರಿಗೂ ನಿಶ್ಚಿತ ದಿನ ಸಂಬಳ ಸಿಕ್ಕಬೇಕೆಂದು ಅನೇಕರು ಹೇಳುತ್ತಾ ಇದ್ದಾರೆ. ಸಾಲ ವಗೈರೆ ಮಾಡಿಕೊಂಡು ನಿಶ್ಚಿತ ದಿನ ಸಂಬಳ ಬರದೇ ಬಹಳ ತೊಂದರೆಯಾಗುತ್ತಾ ಇದೆ ಎಂದು

(ಶ್ರೀ ಬಿ. ಎಂ. ಇದಿನಬ್ಬ)

ಅವರು ಹೇಳುತ್ತಾ ಇದ್ದಾರೆ. ಇನ್ನು ಕಲಾಕಾರರು, ಸಾಹಿತಿಗಳು, ಲೇಖಕರು ಇವರುಗಳ ಬಗ್ಗೆ ಬಹಳ ಗೌರವತೋರಿಸುವಂತಹ ಒಂದು ಸನ್ನಿವೇಶವುಂಟಾಗಬೇಕು. ಇವತ್ತು ದೇಶ ಚೈತನ್ಯಕಾರಿಯಾಗಬೇಕಾದರೆ, ಕಲಾಕಾರರು, ಲೇಖಕರು, ಸಾಹಿತಿಗಳು ಬರೆದ ಸಾಹಿತ್ಯವನ್ನು ವಿದ್ಯಾರ್ಥಿಗಳು ತಿಳಿದು, ಓದಿ ಅದರಿಂದ ಚೈತನ್ಯವನ್ನು ಪಡೆದು ನಮ್ಮ ದೇಶ ಸುವ್ಯವಸ್ಥಿತವಾದ ದೇಶವಾಗುವುದಕ್ಕೆ ಸಾಧ್ಯವಿದೆಯೇ ಹೊರತು ಬೇರೆ ಮಾರ್ಗದಿಂದ ಸಾಧ್ಯವಿಲ್ಲ. ಆದ್ದರಿಂದ ಕಲಾಕಾರರು, ಸಾಹಿತಿಗಳಿಗೆ ಒಳ್ಳೆಯ ಪ್ರೋತ್ಸಾಹ ಕೊಟ್ಟು ಅವರಿಂದ ಒಳ್ಳೆಯ ಪುಸ್ತಕಗಳನ್ನು ಬರೆಸಿ ಅವರಿಗೆ ಕೊಡಬೇಕಾದ ಗೌರವ, ಪುರಸ್ಕಾರವನ್ನು ಕೊಡಬೇಕಾದ್ದು ಬಹಳ ಅಗತ್ಯ. ಈ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ನಮ್ಮ ವಿದ್ಯಾಭ್ಯಾಸ ಈಗ ಬಹಳ ಜೋರಾಗಿ ನಡೆಯುತ್ತಾ ಇದೆ. ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ಪ್ರೌಢಶಾಲೆ, ಟೆಕ್ನಿಕಲ್ ಶಾಲೆಗಳು, ಇಂಜನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು, ಕೃಷಿ ಕಾಲೇಜುಗಳು ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯಾಗುತ್ತಾ ಇವೆ. ಅದರಲ್ಲಿ ಕಲಿಯತಕ್ಕ ವಿದ್ಯಾರ್ಥಿಗಳ ಸಂಖ್ಯೆಯೂ ಕೂಡ ಹೆಚ್ಚಾಗುತ್ತಾ ಇದೆ. ಈ ಕಾಲೇಜುಗಳಿಂದ ಬರತಕ್ಕ ವಿದ್ಯಾರ್ಥಿಗಳು ನೌಕರಿಗಾಗಿ ವಿದ್ಯಾಭ್ಯಾಸಮಾಡಿ ಬರತಕ್ಕ ಪರಿಸ್ಥಿತಿ ಇದೆ. ಬರೀ ನೌಕರಿಗಾಗಿ ಕಾಲೇಜುಗಳು ಅನ್ನುವ ಪರಿಸ್ಥಿತಿ ಬಂದರೆ ಇನ್ನು ಕೆಲವು ವರ್ಷಗಳಲ್ಲಿ ಕಾಲೇಜುಗಳಿಂದ ಹೊರಗೆ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಾಗ ಅವರಿಗೆ ನೌಕರಿ ಒದಗಿಸತಕ್ಕದ್ದೇ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ನಿರುದ್ಯೋಗದ ಸಮಸ್ಯೆ ಬರುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ 6 ಸಾವಿರ ಜನ ಎಂಜನಿಯರಿಂಗ್ ಗ್ರಾಜ್ಯುಯೇಟ್ಸ್‌ಗೆ ನೌಕರಿ ಇಲ್ಲ. ಇವರನ್ನೆಲ್ಲಾ ಅವರ ಮನೆ ಮುಂದೆ ಕೂಡಿಸಬೇಕು.

ಶ್ರೀ ಬಿ. ಎಂ. ಇದಿನಬ್ಬ.—ಆದ್ದರಿಂದ ನೌಕರಿಗಾಗಿಯೇ ಕಾಲೇಜುಗಳು ಎಂದು ಹೇಳತಕ್ಕ ವ್ಯವಸ್ಥೆ ಇರಬಾರದು. ಶಿಕ್ಷಣವನ್ನು ಪಡೆದ ಮೇಲೆ ಕೃಷಿಯನ್ನು ಮಾಡಿ ಉತ್ಪಾದನೆ ಮಾಡತಕ್ಕ ರೀತಿಯಲ್ಲಿ ಕೆಲಸ ಮಾಡುತ್ತೇವೆ ಎಂಬ ಭಾವನೆ ವಿದ್ಯಾವಂತರಲ್ಲಿ ಬರಬೇಕು, ಅಂತಹ ಒಂದು ಮನೋವೃತ್ತಿ ಅವರಲ್ಲಿ ಉಂಟಾಗಬೇಕು. ಆ ರೀತಿ ಸ್ವತಂತ್ರವಾಗಿ ಕೆಲಸ ಮಾಡತಕ್ಕ ಪರಿಸ್ಥಿತಿ ದೇಶದಲ್ಲಿ ಉಂಟಾಗಬೇಕು. ಅವರು ಶಿಕ್ಷಣವನ್ನು ಮುಗಿಸಿಕೊಂಡು ಕಾಲೇಜಿನಿಂದ ಹೊರಗೆ ಬಂದ ಕೂಡಲೆ ಅವರಿಗೆ ನೌಕರಿಯನ್ನು ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ಎಂಪ್ಲಾಯಮೆಂಟ್ ಆಪರ್‌ಚ್ಯುನಿಟೀಸ್ ಮಾಡಿಕೊಡಿ ಎಂದು ಹೇಳಿ.

ಶ್ರೀ ಬಿ. ಎಂ. ಇದಿನಬ್ಬ.—ಇನ್ನು ಮೀನುಗಾರಿಕೆ ವಿಷಯ—ಇದು ಬಹಳ ಪ್ರಾಮುಖ್ಯವಾದ ವಿಚಾರ. ನಮ್ಮ ಕನ್ನಡನಾಡಿನಲ್ಲಿ ನೆಲ ಸಂಪತ್ತು, ಜಲ ಸಂಪತ್ತು ಬೇಕಾದಷ್ಟು ಇದೆ. ಜಲ ಸಂಪತ್ತಿನಲ್ಲಿ ಮತ್ಸ್ಯ ಸಂಪತ್ತು ಬರುತ್ತದೆ. ನಮ್ಮ ಕನ್ನಡ ನಾಡಿಗೆ 200 ಮೈಲಿ ಕರಾವಳಿ ಪ್ರದೇಶ ಸಿಕ್ಕಿದೆ, ಕೋಟಿಗಟ್ಟಲೆ ರೂಪಾಯಿ ಖರ್ಚುಮಾಡಿ ಮತ್ಸ್ಯ ಸಂಪತ್ತನ್ನು ಒಳ್ಳೆಯ ರೀತಿಯಲ್ಲಿ ಅಭಿವೃದ್ಧಿ ಮಾಡತಕ್ಕ ಕಾರ್ಯವನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಯಂತ್ರಚಾಲಿತ ದೋಣಿಗಳನ್ನು ಕೊಟ್ಟು ಅದರಿಂದ ಮೀನುಗಳನ್ನು ಹಿಡಿಯತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ, ಬಹಳ ಸಂತೋಷ; ಅದೇ ರೀತಿ ಮಲ್ಪೆ ಮೀನುಗಾರಿಕೆ ಬಂದರಿನ ಅಭಿವೃದ್ಧಿಗೊಳಿಸುವುದಕ್ಕೂ ಕೂಡ ಒಂದು ಯೋಜನಾ ವರದಿಯನ್ನು ಯುಗೋಸ್ಲಾವಿಯಾ ದೇಶದ ತಜ್ಞರ ನೆರವಿನಿಂದ ಸಿದ್ಧಪಡಿಸಲಾಗಿದೆ ಎಂದು ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಮಲ್ಪೆ ಮೀನುಗಾರಿಕೆ ಬಂದರಾದರೆ ಬಹಳ ಒಳ್ಳೆಯ ಕೆಲಸವಾಗುತ್ತದೆ. ಈ ಮೀನುಗಾರಿಕೆಯ ಅಭಿವೃದ್ಧಿಗೆ ಇನ್ನೂ ಹೆಚ್ಚು ಹೆಚ್ಚು ಯಂತ್ರಚಾಲಿತ ದೋಣಿಗಳನ್ನು ಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಮೀನುಗಾರಿಕೆಯ ವಿಚಾರದಲ್ಲಿ ರಾಜ್ಯಪಾಲರು ಬಹಳ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ ಎಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಇನ್ನು ನಮ್ಮ ರಾಜ್ಯಪಾಲರು ರಾಜ್ಯದ ಶಾಸನ ಸುವ್ಯವಸ್ಥೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯದ ಶಾಸನ ಸುವ್ಯವಸ್ಥೆಯು ಇತ್ತೀಚಿನವರೆಗೂ ಸಾಮಾನ್ಯವಾಗಿ ಸಮಾಧಾನಕರವಾಗಿದ್ದಿತು. ಆದರೆ ಈಚೆಗೆ ಭಾಷಾ ಪ್ರಶ್ನೆಯ ಸಂಬಂಧವಾಗಿ ವಿದ್ಯಾರ್ಥಿ ಸಮುದಾಯದಲ್ಲಿ ಸಂಭವಿಸಿದ ಅಶಾಂತಿಯನ್ನು ಸಮಾಜ ವಿರೋಧ ವ್ಯಕ್ತಿಗಳು ದುರುಪಯೋಗ ಪಡಿಸಿಕೊಂಡು ತೊಂದರೆಯನ್ನುಂಟು ಮಾಡಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಈ ದೇಶದಲ್ಲಿ ಹಿಂದೀ ಇರಬೇಕೇ ಅಥವಾ ಇಂಗ್ಲೀಷ್ ಇರಬೇಕೆ ಎಂಬ ವಿಚಾರದಲ್ಲಿ ವಿದ್ಯಾರ್ಥಿಗಳು ಒಂದು ಚಳುವಳಿಯನ್ನು ಹೂಡಿದರು. ಅವರು ಆ ಚಳು

ವಳಿಯನ್ನು ಒಂದು ನ್ಯಾಯಸಮ್ಮತ ರೀತಿಯಲ್ಲಿ ಶಾಂತವಾದ ರೀತಿಯಲ್ಲಿ ಮುಂದುವರಿಸುವುದಕ್ಕೆ ಅವರಿಗೆ ಅವಕಾಶವಿತ್ತು. ಆದರೆ ಅದನ್ನು ಹಿಂಸಾತ್ಮಕ ಮಾರ್ಗಕ್ಕೆ ತಿರುಗಿಸಿದ್ದು ಒಳ್ಳೆಯದಲ್ಲ ಎಂದು ಅವರು ಹೇಳಿದ್ದಾರೆ. ಅವರು ಹಾಗೆ ಹೇಳಿರತಕ್ಕದ್ದು ಸಹಜವಾದದ್ದು. ನಿಜವಾಗಿಯೂ ಅವರು ಇತ್ತಿರುವ ಆ ಒಂದು ಆದೇಶಕ್ಕೆ ನಾವು ಮನ್ನಣೆಯನ್ನು ಕೊಡಬೇಕಾದರೆ—ಈ ಭಾಷಾ ಗೊಂದಲದ ಬಗ್ಗೆ ದೇಶದ ಎಲ್ಲಾ ಮುಖಂಡರುಗಳೂ, ಈ ವಿಚಾರದಲ್ಲಿ ಮೇಧಾವಿಗಳಾಗಿರತಕ್ಕಂಥ ಜನರೂ, ವಿದ್ಯಾರ್ಥಿಗಳ ರಕ್ಷಕರೂ, ಪೋಷಕರೂ ಇದರ ಬಗ್ಗೆ ಒಂದು ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಹಾಗೆ ಮಾಡದೆ ಇದರ ತೀರ್ಮಾನವನ್ನು ಆ ವಿದ್ಯಾರ್ಥಿಗಳ ಕೈಗೆ ಕೊಟ್ಟರೆ ಮುಂದೆ ಇನ್ನೂ ಹೆಚ್ಚಿನ ಹಿಂಸಾತ್ಮಕ ಮಾರ್ಗಕ್ಕೆ ತಿರುಗಿ ಇದರಿಂದ ದೇಶಕ್ಕೆ ದೊಡ್ಡ ಹಾನಿಯಾಗಬಹುದು; ಅಪಾಯವಾಗಬಹುದು, ಆದರೆ ಅದಕ್ಕೆ ಅವಕಾಶವಾಗಬಾರದು. ನಾವು ಇಲ್ಲಿಯವರೆಗೂ ನಮ್ಮ ರಾಜ್ಯದಲ್ಲಿ ಶಾಸನಗಳ ವ್ಯವಸ್ಥೆಯ ಬಗ್ಗೆ ಒಂದು ಶಾಂತರೀತಿಯಲ್ಲಿ ಆಡಳಿತವನ್ನು ನಡೆಸಿಕೊಂಡು ಬಂದಿದ್ದೇವೆ. ಅದನ್ನು ನಾವು ಕಲಕುವುದಕ್ಕೆ ಅವಕಾಶ ಕೊಡಬಾರದು. ಇಂಥಾ ಪ್ರಸಂಗಗಳಲ್ಲಿ ಪೋಲೀಸಿನವರಿಂದ ಪರಿಸ್ಥಿತಿಯನ್ನು ತಹಬಂದಿಗೆ ತರಬೇಕಾದರೆ ಬಹಳ ಕಷ್ಟವಾಗುತ್ತದೆ. ಅಂಥ ನಿದರ್ಶನಗಳನ್ನು ನಾವು ಅನೇಕ ನೋಡಿದ್ದೇವೆ. ಪೋಲೀಸಿನವರು ಕೆಲವು ಸಂದರ್ಭಗಳಲ್ಲಿ ಬಲ ಪ್ರದರ್ಶನ ಮಾಡಿದರೆ ಅದು ಹೆಚ್ಚಾಗಬಹುದು, ಇನ್ನು ಕೆಲವು ಸಂದರ್ಭಗಳಲ್ಲಿ ಅದು ಕಡಮೆಯಾಗಬಹುದು. ಅದು ಹೀಗೇ ಇರಬೇಕೆಂದು ಹೇಳುವುದಕ್ಕಾಗುವುದಿಲ್ಲ. ಆ ಬಲಪ್ರಯೋಗ ಹೆಚ್ಚಾದರೂ ಕಷ್ಟ, ಕಡಮೆಯಾದರೂ ಅಪಾಯವೇ. ದೇಶದಲ್ಲಿರತಕ್ಕ ಪ್ರಜೆಗಳು ಸರಿಯಾದ ರೀತಿಯಲ್ಲಿ ನ್ಯಾಯಪಾಲನೆ ಮಾಡಿದರೆ ಆಗ ಪೋಲೀಸರಿಗೂ ನ್ಯಾಯರೀತಿಯಲ್ಲಿ ನಡೆಯಲು ಅವಕಾಶವಾಗುವುದು. ದೇಶಕ್ಕೆ ಒಳ್ಳೆಯದಾಗಬೇಕಾದರೆ ನಾವೆಲ್ಲರೂ ನ್ಯಾಯಪರಿಪಾಲನೆಯನ್ನು ಮಾಡಬೇಕು. ಆಗ ಶಾಸನಗಳು ಸುವ್ಯವಸ್ಥೆಯಿಂದ ಮುಂದುವರಿಯಲು ಅವಕಾಶವಾಗುತ್ತದೆ. ಆಗಾಲೆ ಒಬ್ಬ ಮಾನ್ಯ ಸದಸ್ಯರು ಹೇಳಿದಂತೆ ಆ ಚಿಕ್ಕಮಗಳೂರು ಮತು ಅಜ್ಜಂಪುರದಲ್ಲಿ ಮತ್ತು ತರೀಕೆರೆಯಲ್ಲಿ ತಲೆದೋರಿದ ಅಶಾಂತ ವಾತಾವರಣವನ್ನು ಅವಲೋಕನ ಮಾಡಿದರೆ ಪೋಲೀಸರು ತಮ್ಮ ಕಾರ್ಯಸರಿಯಾಗಿ ಮಾಡಿಲ್ಲ ಎಂಬುದಾಗಿ ಹೇಳಬೇಕಾಗಿದೆ. ಆದರೆ ಅದನ್ನು ಅಷ್ಟಕ್ಕೆ ಹತ್ತಿಕ್ಕಲಾಯತೆಂದು ಹೇಳಿದರು. ನಮ್ಮಲ್ಲಿ ಒಟ್ಟಿನಲ್ಲಿ ಲಾ ಅಂಡ್ ಆರ್ಡರ್ ಎರಡು ಸರಿಯಾಗಿದ್ದರೆ ಎಲ್ಲವೂ ಸರಿಯಾಗಿರುತ್ತದೆ ಎಂದು ಹೇಳಬಹುದು. ಈ ದಿವಸ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಒಳ್ಳೊಳ್ಳೆಯ ಕೆಲಸಗಳಾಗುತ್ತಿವೆ. ಅಲ್ಲಿ ಶಾಸನಗಳು ಸುವ್ಯವಸ್ಥೆಯಲ್ಲಿ ಇವೆ.

ಇನ್ನು ನಮ್ಮ ರಾಜ್ಯಪಾಲರು ವಿದ್ಯುಚ್ಛಕ್ತಿಯ ಬಗ್ಗೆ ಕೆಲವು ಮಾತುಗಳನ್ನು ಅಪ್ಪಣೆ ಕೊಡಿಸಿದ್ದಾರೆ. ದೇಶದಲ್ಲಿ ಈಗ ವಿದ್ಯುಚ್ಛಕ್ತಿಯ ಕೊರತೆ ಎಲ್ಲಿಯೂ ಕಂಡುಬರುತ್ತಿಲ್ಲ ಎಂಬುದಾಗಿ ಹೇಳಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ಸುಮಾರು ಐದು ಸಾವಿರ ಅರ್ಜಿಗಳು ಪಂಪ್ ಸೆಟ್ಟಿಗಾಗಿ ಹಾಕಿಕೊಂಡಿರತಕ್ಕವುಗಳು ಹಾಗೇ ನಿಂತಿವೆ. ಯಾರಿಗೂ ಅವು ದೊರೆತಿಲ್ಲ. ಆದುದರಿಂದ ಇದಕ್ಕೆ ಇನ್ನೂ ಕೊರತೆ ಇದೆಯೆಂದಾಯಿತು. ಇದನ್ನು ನೋಡಿದರೆ ಈಗಿರತಕ್ಕ ಮಗುವಿಗೇ ಅನ್ನನೀರಿಲ್ಲ— ಇನ್ನು ಮುಂದಿನ ಮಗುವಿಗೆ ಚಿನ್ನದಿಂದ ತುಲಾಭಾರ ಮಾಡಿಸುತ್ತೇನೆ ಎಂದ ಹಾಗಿದೆ ಈ ಮಾತು. ನಮ್ಮ ಜಿಲ್ಲೆಯಲ್ಲಿ ಐದು ಸಾವಿರ ಅರ್ಜಿಗಳಿದ್ದಾಗ್ಯೂ ಸರ್ಕಾರದವರು ಅದರಲ್ಲಿ ಒಂದನ್ನಾದರೂ ತೀರ್ಮಾನ ಮಾಡಿಲ್ಲ. ಹೆಚ್ಚು ಬೆಳೆ ಬೆಳೆಯಬೇಕು, ದೇಶದಲ್ಲಿ ಆಹಾರದ ಅಭಾವ ಉಂಟಾಗಿದೆ ಅನ್ನತಕ್ಕ ಕಾಲದಲ್ಲಿ ಯಾರು ಈ ಪಂಪ್ ಸೆಟ್ಟುಗಳಿಗೆ ಅರ್ಜಿಹಾಕಿಕೊಂಡಿದ್ದರೂ ಅಂಥವರಿಗೆ ಮೊದಲು ಅವನ್ನು ಒದಗಿಸಬೇಕು. ಹಾಗೆ ಮಾಡಿದರೆ ದೇಶಕ್ಕೆ ಕ್ಷೇಮ ಉಂಟಾಗುತ್ತದೆ ಹೆಚ್ಚು ಆಹಾರ ಬೆಳೆಯುವುದಕ್ಕೆ ಅನುಕೂಲ ಆಗುತ್ತದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇತ್ತಕಡೆಗೆ ಹೆಚ್ಚಿನ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಮಂಗಳೂರಿನ ಬಂದರ್ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಬಂದರಾಗತಕ್ಕದ್ದು ಇಡೀ ಕನ್ನಡ ನಾಡಿಗೇ ಒಂದು ಕಣ್ಣಾದಂಥ ವಿಚಾರ ಅದು. ಈಗಾಗಲೆ ಅಲ್ಲಿ ಸುಮಾರು 4 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಅನೇಕ ಕೆಲಸಕಾರ್ಯಗಳು ನಡೆದಿವೆ; ಮತ್ತು ಇದನ್ನು ಪೂರ್ಣಗೊಳಿಸತಕ್ಕ ಬಗ್ಗೆ ತಗಲುವ ವೆಚ್ಚವನ್ನು ಅಂದರೆ 24 ಕೋಟಿ 30 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡುವುದಾಗಿ ಭರವಸೆಯನ್ನಿತ್ತಿದ್ದಾರೆ ಎಂಬುದಾಗಿ ಇಲ್ಲಿ ತಿಳಿಸಿದ್ದಾರೆ. ಈ ಹಿಂದೆ ಇಲ್ಲಿ ಬಂದರಾಗುವುದಿಲ್ಲ ಎಂದು ಅನೇಕರು ಹೇಳುತ್ತಿದ್ದರು ಆ ನಮ್ಮ ಕನಸು ಇಂದು ನೆನಸಾಗಿದೆ. ಅಲ್ಲಿ ಕೆಲಸ ಕಾರ್ಯಗಳು ಬಹಳ ತ್ವರಿತವಾಗಿ ಸಾಗುತ್ತಿವೆ. ಅಲ್ಲಿ 30 ಅಡಿ ಆಳದಲ್ಲಿ ಸರ್ವಋತುಗಳ ಬಂದರನ್ನು ನಿರ್ಮಾಣಮಾಡಲಾಗುತ್ತಿದೆ. ಅಷ್ಟಾದರೆ ಅಲ್ಲಿಗೆ ಹಡಗುಗಳು ಬಂದು ಹೋಗುವುದಕ್ಕೇನೂ ತೊಂದರೆಯಾಗುವುದಿಲ್ಲ. ಇಂದು ನಮ್ಮ ಕನ್ನಡ ನಾಡಿಗೊಂದು ಬಂದರಾಯಿತು ಅನ್ನುವದು ಒಂದು ಬಹಳ ಸಂತೋಷದ ವಿಷಯ.

(ಶ್ರೀ ಬಿ. ಎಂ. ಇದಿನಬ್ಬ)

ಇನ್ನು ನಮ್ಮ ರಾಜ್ಯಪಾಲರು ಆ ಮಹಾಜನ್ ಆಯೋಗದ ವರದಿಯನ್ನು ಪ್ರಸ್ತಾಪ ಮಾಡಿದ್ದಾರೆ. ಈ ಆಯೋಗವು ನೀಡಿರತಕ್ಕ ವಿವೇಕಪೂರ್ಣವೂ ಸುವಿಚಾರಿತವೂ ಆದ ಈ ಸಲಹೆಗಳನ್ನು ಸಂಬಂಧಪಟ್ಟ ರಾಜ್ಯಗಳು ಸುಮುಖವಾಗಿ ಒಪ್ಪಿಕೊಳ್ಳುವುದೇ ನ್ಯಾಯವಾಗಿದೆ ಎಂಬುದಾಗಿ ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ಹಿಂದೆ ಮಹಾರಾಷ್ಟ್ರದವರು ಬಹಳವಾಗಿ ಹಠ ಹಿಡಿದಿದ್ದರಿಂದ ಅವರ ಅಭಿಪ್ರಾಯದ ಮೇರೆಗೆ ಕೇಂದ್ರಸರ್ಕಾರದವರು ಒಂದು ಏಕ ಸದಸ್ಯ ಆಯೋಗವನ್ನು ರಚಿಸಿ ಅದಕ್ಕೆ ಬಹಳ ಬುದ್ಧಿವಂತರೂ, ಮೇಧಾವಿಗಳೂ, ನಿವೃತ್ತ ಶ್ರೇಷ್ಠ ನ್ಯಾಯಾಧೀಶರೂ ಆದಂಥ ಮಹಾಜನ್ ಅನ್ನುತಕ್ಕವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದರು. ಅಂಥ ಮೇಧಾವಿಗಳೊಬ್ಬರು ಈಗ ಈ ಗಡೀ ವಿವಾದದ ಬಗ್ಗೆ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಅದ್ದರಿಂದ ನಮ್ಮ ಕನ್ನಡ ನಾಡಿಗೆ ಬಹಳ ಪೆಟ್ಟುಬೀಳುವುದಾಗಿದ್ದರೂ, ಅನೇಕ ಬಹಳ ಫಲವತ್ತಾದ ಭಾಗಗಳು ಮಹಾರಾಷ್ಟ್ರಕ್ಕೆ ಹೋಗುವುದಾಗಿದ್ದರೂ ನಾವು ಆ ತೀರ್ಮಾನಕ್ಕೆ ಒಪ್ಪಿಕೊಂಡಿದ್ದೇವೆ. ಅದಿನ್ನು ಕಾರ್ಯರೂಪಕ್ಕೆ ಬರುವುದು ಮಾತ್ರ ಉಳಿದಿದೆ. ಆದರೆ ಈ ಮಧ್ಯೆ ಕೇಂದ್ರ ಸರ್ಕಾರದಲ್ಲಿ ಗೃಹಮಂತ್ರಿಗಳಾಗಿರತಕ್ಕವರು ಈ ಮೈಸೂರು-ಮಹಾರಾಷ್ಟ್ರಗಳ ಗಡೀ ವಿವಾದವನ್ನು ಒಂದು ರಾಷ್ಟ್ರೀಯ ಅಭಿಮತ ಪಡೆದು ಇದನ್ನು ತೀರ್ಮಾನ ಮಾಡಬೇಕೆಂದು ಹೇಳುತ್ತಿದ್ದಾರೆಂಬುದಾಗಿ ನಾವು ವದಂತಿಗಳನ್ನು ಕೇಳುತ್ತಿದ್ದೇವೆ. ಈ ದಿವಸ ಆ ಮಹಾಜನ್‌ರವರು ಕೊಟ್ಟಿರುವ ತೀರ್ಪು ಕಾರ್ಯಗತವಾದಲ್ಲಿ ನಮಗೆ ಕೇರಳದಿಂದ ಕಾಸರಗೋಡು ಭಾಗವು ಸುಮಾರು ಎರಡೂವರೆ ಲಕ್ಷ ಜನ ಕನ್ನಡಿಗರು ಬಹಳ ದಿವಸಗಳಿಂದ ನಮ್ಮ ಸಂಗಡ ಸೇರಬೇಕೆಂದು ಕಣ್ಣೀರಿಡತಕ್ಕ ಜನ ನಮ್ಮ ರಾಜ್ಯಕ್ಕೆ ಸೇರ್ಪಡೆಯಾಗುತ್ತಾರೆ. ಆದುದರಿಂದ ನಮ್ಮ ರಾಜ್ಯಪಾಲರು ಈ ಆಯೋಗದ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿರತಕ್ಕದ್ದು ಬಹಳ ಸಮಯೋಚಿತವಾಗಿದೆ.

ಇನ್ನು ನಮ್ಮ ರಾಜ್ಯಪಾಲರ ನಿರ್ಣಯದ ಬಗ್ಗೆ ವಂದನಾರ್ಪಣೆಯ ನಿರ್ಣಯವನ್ನು ಮಂಡಿಸಿರತಕ್ಕ ಶ್ರೀ ಕೆ. ಎಚ್. ಶ್ರೀನಿವಾಸನ್ ರವರು ಅನೇಕ ಅಂಕಿಅಂಶಗಳನ್ನು ಕೊಡುತ್ತಾ ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಸರ್ಕಾರದವರು ಎಷ್ಟೋ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅನೇಕ ನೀರಾವರಿ ಯೋಜನೆಗಳನ್ನೂ ಮತ್ತು ಅಲ್ಲಲ್ಲೇ ಸೇತುವೆಗಳನ್ನೂ ಮಾಡಿಸಿದ್ದಾರೆ. ಸರ್ಕಾರದವರು ಮಾಡಿರತಕ್ಕ ಸೇವೆಗಳನ್ನು ನಿರ್ವಂಚನೆಯಿಂದ ಎಲ್ಲರೂ ಒಪ್ಪಲೇಬೇಕು. ಆದರೆ ಮಾಡಬೇಕಾದದ್ದು ಇನ್ನೂ ಇದೆ ಎಂದು ಹೇಳಿದರೆ ಅದನ್ನು ನಾನೂ ಸಹಾ ಒಪ್ಪುತ್ತೇನೆ. ಆದರೆ ಇವರು ಏನೂ ಕೆಲಸಗಳನ್ನೇ ಮಾಡಿಲ್ಲ ಎಂದರೆ ಅದು ಸರಿಯಾದ್ದಲ್ಲ. ನಮ್ಮ ಮಿತ್ರರಾದ ಶ್ರೀ ಶ್ರೀನಿವಾಸನ್ ಅವರು ಮಂಡಿಸಿರತಕ್ಕ ವಂದನಾ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ನೀಡಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಎಸ್. ಲೋಕಯ್ಯ ನಾಯಕ್ (ವಿರಾಜಪೇಟೆ).—ಅಧ್ಯಕ್ಷರೇ, ನಾನು ಈಗ ನಮ್ಮ ರಾಜ್ಯಪಾಲರು ಮಾಡಿರತಕ್ಕ ಭಾಷಣದ ಬಗ್ಗೆ ಮಂಡಿಸಿರತಕ್ಕ ವಂದನಾರ್ಪಣೆಯ ನಿರ್ಣಯದ ಮೇಲೆ ಕೆಲವು ಮುಖ್ಯವಾದ ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ.

ನಮ್ಮ ರಾಜ್ಯಪಾಲರು ಸಮಾಜ ಕಲ್ಯಾಣದ ಬಗ್ಗೆ ಕೆಲವು ಮಾತುಗಳನ್ನಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಅನುಸರಿಸತಕ್ಕ ತತ್ವಗಳೇನೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಈ ಬಾಬಿನಲ್ಲಿ ಎಷ್ಟೋ ಹಣ ಮಂಜೂರಾಗಿದ್ದರೂ ಸರ್ಕಾರದವರು ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವ ಕೆಲಸಗಳನ್ನು ಮಾಡುತ್ತಿದ್ದಾರೆಯೇ ವಿನಾ ಹರಿಜನ ಗಿರಿಜನರ ಉದ್ಧಾರಕ್ಕಾಗಿ ಇವರು ಖಂಡಿತ ಶ್ರಮಿಸುತ್ತಿಲ್ಲ ಅನ್ನುವುದು ನನ್ನ ಅನುಭವಕ್ಕೆ ಬಂದಿರತಕ್ಕ ವಿಷಯ. ಕಾನೂನು ಪ್ರಕಾರ ಹರಿಜನರಿಗೆ ಅಲ್ಲಲ್ಲೆ ಕೆಲವು ಕಡೆ ಉಳುವುದಕ್ಕೆ ಮತ್ತು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಜಮೀನನ್ನು ಕೊಡಲಾಗಿದೆ ಹಾಗೆ ಆ ಜಮೀನುಗಳು ಅವರಿಗೆ ಅಲಾಟಾದ ನಂತರ ಅವು ಅವರಿಗೆ ಕೈ ಸೇರಿರುತ್ತವೆಯೇ ಇಲ್ಲವೇ ಎಂಬುದನ್ನು ಯಾರೂ ವಿಮರ್ಶೆ ಮಾಡುತ್ತಿಲ್ಲ. ಹರಿಜನರಿಗೆ ಕೆಲವು ಕಡೆ ಮುಫತ್ತಾಗಿ ಕೊಟ್ಟಿದ್ದ ಜಮೀನುಗಳನ್ನು ಕಾಂಗ್ರೆಸ್ಸಿನವರು ಬರೆಸಿಕೊಂಡಿದ್ದಾರೆ. ಹರಿಜನರ ಕೈಲಿ ಜಮೀನಿಗೆ ಅರ್ಜಿಗಳನ್ನು ಹಾಕಿಸುವುದು ಜಮೀನು ಮಂಜೂರಾದ ಮೇಲೆ ಅದನ್ನು ಬೇರೆಯವರು ಬರೆಸಿಕೊಳ್ಳುವುದು, ಹೀಗಾಗುತ್ತಿದೆ ಉದಾಹರಣೆಗೆ ಹೇಳುವುದಾದರೆ—ನಮ್ಮ ಮಡಕೇರಿಯ ಹತ್ತಿರ ಹಾಕತ್ತೂರು ಎಂಬ ಗ್ರಾಮದಲ್ಲಿ ಹರಿಜನರಿಗೆ ವಾಸದ ಮನೆಗಳನ್ನು ಕಟ್ಟಿಕೊಳ್ಳಲು ಒಂದು ಎಕರೆ ಚಿಲ್ಲರೆ ಜಮೀನನ್ನು ಕೊಟ್ಟಿದ್ದರು. ಪ್ರತಿಯೊಬ್ಬರಿಗೂ ಒಂದೊಂದು ಮನೆಯನ್ನು

5-30 P.M.

ಕಟ್ಟಿಸಿಕೊಟ್ಟರು. ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ಸುಮಾರು 3 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಬಾವಿಯನ್ನು ಕಟ್ಟಿಸಿಕೊಟ್ಟರು. ಆದರೆ ಕೆಲವರು ಇದರಲ್ಲಿ ಪ್ರವೇಶವಾಗಿ ಅವರ ಮುಖಾಂತರ ಜಿಲ್ಲಾಧಿಕಾರಿಗಳಿಗೆ ಅರ್ಜಿ ಹಾಕಿಸಿ, ಅವರು ಅದನ್ನು ಮಾರುವುದಕ್ಕೆ ಹುಕುಂ ಕೊಡಬೇಕೆಂದು ಹೇಳಿ ಅವನ್ನು ಪಡೆದು ಆ ಜಮೀನು ಮತ್ತು ಮನೆಗಳನ್ನು ಕಾಂಗ್ರೆಸ್ ಪುಡಾರಿಗಳೇ ಗಳಿಸಿಕೊಂಡಿದ್ದಾರೆ. ಅದರಲ್ಲಿ ಒಳ್ಳೆಯ ಬೆಲೆಯಾದ ಮರಗಳೂ ಉಂಟು. ಒಳ್ಳೊಳ್ಳೆಯ ಮರಗಳನ್ನು ಮಾರಲಾಗಿದೆ. ಜಮೀನಿಗೆ ಬೆಲೆಯನ್ನು ನಿಗದಿ ಮಾಡಿಲ್ಲ. ಆದಕಾರಣ ಹರಿಜನರಿಗೆ ಮತ್ತು ಗಿರಿಜನರಿಗೆ ಆಗಿದ್ದಂಥ ಜಮೀನುಗಳನ್ನು ಬೇರೆಯವರಿಗೆ ಕೊಟ್ಟು ತಾತ್ವಿಕವಾಗಿ ವಿರೋಧವಾಗಿ ಜಿಲ್ಲಾಧಿಕಾರಿಗಳು ನಡೆದಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಈ ವಿಷಯದಲ್ಲಿ ನನಗೆ ಕಾಗದ ಬರೆದಿದ್ದರು. ನಾನು ಕೊಡಗಿಗೆ ಹೋದಾಗ ಜಿಲ್ಲಾಧಿಕಾರಿಗಳಿಗೆ ಈ ವಿಷಯ ತಿಳಿಸಿ ಮುಂದಿನ ಕ್ರಮ ತೆಗೆದುಕೊಳ್ಳಕೂಡದು, ನಿಲ್ಲಿಸಬೇಕು ಎಂದು ಹೇಳಿದ್ದೇನೆ.

ಶ್ರೀ ಎನ್. ಲೋಕಯ್ಯ ನಾಯಕ್.—ಅದರಿಂದ ಏನಾಯಿತು. ಏನೂ ಆಗಿಲ್ಲ. ಜಿಲ್ಲಾಧಿಕಾರಿಗಳು ಯಾವ ರೀತಿ ಹರಿಜನರ ಬಗ್ಗೆ ಹುಕುಂಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತೇನೆ.

ಉಪಾಧ್ಯಕ್ಷರು.—ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡ್ಸ್ ಇಲ್ಲಿ ಚರ್ಚೆಗೆ ಬಂದಾಗ ಆ ವಿಷಯವನ್ನು ಮಾತನಾಡಿ. ರಾಜ್ಯಪಾಲರ ಭಾಷಣದ ಮೇಲೆ ನೀವು ಮಾತನಾಡುವಾಗ ಆ ವಿಷಯ ಮಾತನಾಡುವುದು ಬೇಡ.

ಶ್ರೀ ಎನ್. ಲೋಕಯ್ಯ ನಾಯಕ್.—ನಾನು ಮುಖ್ಯವಾಗಿ ಹರಿಜನ-ಗಿರಿಜನರಿಗೆ ಯಾವ್ಯಾವ ರೀತಿಯಲ್ಲಿ ಅನ್ಯಾಯವಾಗುತ್ತಿದೆ ಎಂಬುದನ್ನು ಹೇಳುತ್ತೇನೆ. ಬೇಜವಾಬ್ದಾರಿಯಾದ ಅಧಿಕಾರಿಗಳು ಹೀಗೆ ನಡೆದಿರುವುದು ಅಕ್ಷಮ್ಯ ಅಪರಾಧ. ಜಿಲ್ಲಾಧಿಕಾರಿಗಳು ಯಾವರೀತಿ ತಮ್ಮ ಅಧಿಕಾರವನ್ನು ಚಲಾಯಿಸಿದ್ದಾರೆಂಬ ಬಗ್ಗೆ ತಮ್ಮ ಅಪ್ಪಣೆ ಬೇಡಿ the Proceedings of the D. C., Mercara—ಅದರಲ್ಲಿ ಏನು ಹೇಳಿದೆ ಎಂಬುದನ್ನು ಓದಿ ಹೇಳುತ್ತೇನೆ.

ಉಪಾಧ್ಯಕ್ಷರು.—ಎಲ್ಲವನ್ನೂ ಓದುವುದಕ್ಕೆ ಹೋಗಬಾರದು. ಮುಖ್ಯವಾದ ವಿಚಾರ ಮಾತ್ರ ಹೇಳಬೇಕು. ಇಲ್ಲದಿದ್ದರೆ ಅದನ್ನು ಸಭೆಯ ಮುಂದಿಡಬಹುದು.

ಶ್ರೀ ಎನ್. ಲೋಕಯ್ಯ ನಾಯಕ್.—ನಾನು ಇದನ್ನು ಸಭೆಯ ಮುಂದೆ ಇಡುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ).— ಇಲ್ಲಿ ಪೇಪರ್ ಓದಬಾರದು.

ಉಪಾಧ್ಯಕ್ಷರು.— ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಬೇಕು.

ಶ್ರೀಮತಿ ಚಂಪಾಬಾಯಿ ಭೋಗಲೆ —ಆ ಪೇಪರ್ ಇಲ್ಲಿ ಬರಲಿಕ್ಕೆ ಕಾರಣವೇನು !

ಶ್ರೀ ಎನ್. ಲೋಕಯ್ಯ ನಾಯಕ್.—ಇಷ್ಟರವರೆಗೆ ನಾನು ಅವನ್ನು ಓದಿಯಾಗುತ್ತಿತ್ತು. ಅದರಲ್ಲಿ ಏನು ಹೇಳಿದ್ದಾರೆಂದರೆ "The permission is therefore accorded to sell the land mentioned in para 1 in favour of Sri N. G. Ahamed, subject to the conditions that the Harijans displaced or rehabilitated." ಇವರು ಯಾರು ? ಅವರನ್ನು ಪುನರ್ವಸತಿ ಮಾಡಬೇಕೆಂದು ಹೇಳುವ ವಿಚಾರ ಇವರಿಗೆ ಇಲ್ಲ. ಇನ್ನು ಎರಡನೆಯ ಪ್ಯಾರಾದಲ್ಲಿ ಏನು ಹೇಳಿದೆ ಎಂಬುದನ್ನು ಹೇಳಬೇಕೆಂದಿದ್ದೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರಿಗೆ ಕೊಟ್ಟಿರುವ ವೇಳೆ ಮುಗಿಯಿತು. ಅವರು ಬೇಗ ಭಾಷಣ ಮುಗಿಸಬೇಕು.

ಶ್ರೀ ಎನ್. ಲೋಕಯ್ಯ ನಾಯಕ್.—ಹರಿಜನರು ತಾವೇ ಪುನರ್ವಸತಿಯನ್ನು ಮಾಡಿಕೊಳ್ಳಬೇಕೆಂದು ಇನ್ನೊಂದು ಕಡೆ ಹೇಳಿದ್ದಾರೆ. ಹರಿಜನ ಗಿರಿಜನರಿಗೆ ಮುಫತ್ತಾಗಿ ಕೊಟ್ಟಂಥ ಜಮೀನನ್ನು ಪರಾಧೀನ ಮಾಡುವುದಕ್ಕೆ ಅಧಿಕಾರವಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಮೂರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಅವರ ಉಪಯೋಗಕ್ಕಾಗಿ ಕಟ್ಟಿಸಿದಂಥ ಬಾವಿ, ಅವರಿಗೆ ಬೇಕಾದಂಥ ಮರಗಳು ಮತ್ತು ಅವರಿಗೆ ಮುಫತ್ತಾಗಿ ಕೊಟ್ಟಂಥ ಜಮೀನುಗಳನ್ನು ಪರಾಧೀನ ಮಾಡಿದ್ದಾರೆ. ಈ ವಿಚಾರವಾಗಿ ಸಂಬಂಧಪಟ್ಟ ಪಂಚಾಯತಿ ಬೋರ್ಡಿನವರು ಅದಕ್ಕಾಗಿ ತಕರಾರು ಮಾಡಿದ್ದರೂ ಜಿಲ್ಲಾಧಿಕಾರಿಗಳು ಆ ಬಗ್ಗೆ ಮನ್ನಣೆ ಕೊಟ್ಟಿಲ್ಲ. ಇದರಲ್ಲಿ ಪುಡಾರಿಗಳ ಕೈವಾಡ ತುಂಬಾ ಇದೆಯೆಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ತಾವು ಒಂದು ಮನವಿಯನ್ನು ಕೊಟ್ಟಿದ್ದೀರಾ ?

ಶ್ರೀ ಎನ್. ಲೋಕಯ್ಯ ನಾಯಕ್.—ನಾನು ಕೊಟ್ಟು ಮೂರು ತಿಂಗಳುಗಳಾದುವು.

ಶ್ರೀ ಬಿ. ರಾಚಯ್ಯ.—ಮುಂದಿನ ಕ್ರಮ ತೆಗೆದುಕೊಳ್ಳಕೂಡದು ಎಂದು ಹೇಳಿದ್ದೇನೆ. ಆದರೂ ಹುಡುಗರ ಕೈಲಿ ಗಲಾಟೆ ಮಾಡಿಸಿದ್ದಾರೆ. ಮಾನ್ಯ ಸದಸ್ಯರೂ ಕೂಡ ನನ್ನಲ್ಲಿಗೆ ಬಂದು ಅಲ್ಲಿ ಪ್ರಸ್ತಾಪ ಮಾಡಲಿಲ್ಲ. ಜನತಾ ಹಿತದೃಷ್ಟಿಯಿಂದ ಆ ವಿಚಾರಗಳನ್ನು ಕೇಳೋಣವೆಂಬ ಆಶೆಯಿಂದ ಅಲ್ಲಿಗೆ ಹೋದೆ. ಮಾನ್ಯ ಸದಸ್ಯರು ಅಲ್ಲಿರಲಿಲ್ಲ. ಹೋದ ದಿವಸವೇ ಇದರ ಬಗ್ಗೆ ಸೀರಿಯಸ್ ಅಲಿಗೇಷನ್ಸ್ ಮಾಡಿದ್ದಾರೆ. ಅದರ ಬಗ್ಗೆ ವರದಿ ಮಾಡಿ ಎಂದು ಹೇಳಿದ್ದೇನೆ. ವರದಿ ಬಂದನಂತರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ ಸುಮ್ಮನೆ ಈಗ ಈ ವಿಚಾರದ ಬಗ್ಗೆ ಕಾಲವಿಳಂಬ ಮಾಡುವುದು ಸರಿಯಲ್ಲ. ಮುಂದೆ ಹೋಗುವುದು ಒಳ್ಳೆಯದು.

ಶ್ರೀ ಎನ್. ಲೋಕಯ್ಯ ನಾಯಕ್.—ಈ ಸರ್ಕಾರದಿಂದ ಹರಿಜನ-ಗಿರಿಜನರ ಉದ್ಧಾರಕ್ಕಾಗಿ ಏನೂ ನಡೆಯುತ್ತಾ ಇಲ್ಲ. ಸರ್ಕಾರದವರು ಹರಿಜನ ಮತ್ತು ಗಿರಿಜನರ ವಿಚಾರದ ಬಗ್ಗೆ ಬಹಳ ವಾಗಿ ಮುತುವರ್ಜಿ ವಹಿಸಬೇಕೆಂದು ನಾನು ಭಿನ್ನೈಸುತ್ತೇನೆ.

Mr. DEPUTY SPEAKER.—The member is speaking on the Motion of Thanks. He can mention these points when he speaks on the demands of the respective departments.

ಶ್ರೀ ಎನ್. ಲೋಕಯ್ಯನಾಯಕ್.—ಹರಿಜನ ಮತ್ತು ಗಿರಿಜನರಿಗಾಗಿ ಇಟ್ಟಿರತಕ್ಕ ಸಾಲದ ಮೊಬಲಗು, ಮಹಿಳಾ ಸಮಾಜ ಹಾಗೂ ಹಾಸ್ಟಲುಗಳಿಗೆ ಕೊಡಬೇಕಾಗಿರತಕ್ಕ ಗ್ರಾಂಟುಗಳು, ಯಾವುದು ಉಂಟೋ ಅವು ಸಕಾಲದಲ್ಲಿ ಸರ್ಕಾರದಿಂದ ಆ ಸಂಸ್ಥೆಯವರಿಗೆ ಸಿಗುತ್ತಾ ಇಲ್ಲ. ಇದರಿಂದಾಗಿ ಹರಿಜನ-ಗಿರಿಜನರಿಗೆ ಅನೇಕ ರೀತಿಯಲ್ಲಿ ತೊಂದರೆಗಳು ಆಗುತ್ತಾ ಇವೆ. ಅವರಿಗೆ ನಿಜವಾಗಿ ಸರ್ಕಾರದಿಂದ ಗ್ರಾಂಟು ಕೊಡುವುದನ್ನು ಸಕಾಲದಲ್ಲಿ ಸರ್ಕಾರದವರು ಮಂಜೂರು ಮಾಡಬೇಕೆಂದು ನಾನು ಸರ್ಕಾರಕ್ಕೆ ವಿಜ್ಞಾಪಿಸುತ್ತೇನೆ. ಇನ್ನು ಸರ್ಕಾರದವರು ಇವರಿಗಾಗಿ ರಿಜರ್ವ್ ಮಾಡಿರುವ ಖಾಲಿ ಹುದ್ದೆಗಳಿಗೆ ಇವತ್ತು ಸರಿಯಾದ ನೇಮಕಾತಿ ಆಗುತ್ತಿಲ್ಲವೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನೊಂದು ವಿಚಾರ. ಕುಟುಂಬ ಯೋಜನೆಗೆ ಬದ್ಧರಾಗಬೇಕೆಂದು ಹರಿಜನ-ಗಿರಿಜನರ ಮೇಲೆ ಬಲಾತ್ಕಾರವಾಗಿ ಒತ್ತಡ ತರುತ್ತಿದ್ದಾರೆ. ಆದರೆ ಈ ಕುಟುಂಬ ಯೋಜನೆ ಚಿಕಿತ್ಸೆಯಿಂದ ನಪುಂಸಕತನವಾಗುತ್ತದೆ. ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದು ಬಿಡುವುದು ಅವರವರ ಹಕ್ಕು. ಅವರು ಎಷ್ಟು ಮಕ್ಕಳನ್ನು ಪಡೆಯಬೇಕು, ಪಡೆಯಬಾರದೆಂದು ನಿಗದಿ ಮಾಡುವುದು ಧಾರ್ಮಿಕ ತತ್ವಕ್ಕೇ ವಿರೋಧವಾಗಿದೆ. ಏನೂ ಗೊತ್ತಿಲ್ಲದೇ ಬಡಪಾಯಿಗಳಾಗಿರತಕ್ಕ ಹರಿಜನ-ಗಿರಿಜನರಿಗೆ ಸರ್ಕಾರದವರು ಉಪಾಯದಿಂದ ಏನೋ ಕಾರಣಗಳಿಂದ ಆಸ್ಪತ್ರೆಗಳಿಗೆ ಕಳುಹಿಸಿ ಅವರನ್ನು ನಪುಂಸಕರನ್ನಾಗಿ ಮಾಡಲು ಶಸ್ತ್ರ ಚಿಕಿತ್ಸೆಗಳು ಆಗುತ್ತಿವೆ. ಸಿಬ್ಬಂದಿಗೆ ಒಬ್ಬೊಬ್ಬರಿಗೆ ಇಷ್ಟಿಷ್ಟು ಎಂಬುದಾಗಿ ದುಡ್ಡು ಕೊಡುತ್ತಿದ್ದಾರೆ. ಏನೂ ವಿಚಾರ ಗೊತ್ತಿಲ್ಲದೇ ಇರುವವರ ಮೇಲೆ ಕುಟುಂಬ ಯೋಜನೆ ಕಾರ್ಯಕ್ರಮ ನಡೆಯುತ್ತಾ ಇದೆ. ಇದರಿಂದ ಜನರ ನೈತಿಕ ಮಟ್ಟ ಬಹಳ ಕೆಳಗೆ ಹೋಗುತ್ತಾ ಇದೆ ಮಾತ್ರವಲ್ಲ. ಯಾವ್ಯಾವ ಕಡೆಗಳಲ್ಲಿ ಇದರ ಪ್ರಚಾರವಾಗಬೇಕೋ ಅಲ್ಲಿ ಮಾಡದೆ ವಿರೋಧವಾಗಿ ಸರ್ಕಾರದವರು ಹೋಗುತ್ತಿದ್ದಾರೆ. ಒಳ್ಳೆಯ ಪುಣ್ಯ ಕ್ಷೇತ್ರಗಳಲ್ಲಿ, ತಲಕಾವೇರಿ ಮುಂತಾದ ಪುಣ್ಯ ಕ್ಷೇತ್ರಗಳ ಹತ್ತಿರ ಕುಟುಂಬ ಯೋಜನೆಗಳ ಪೋಸ್ಟರುಗಳನ್ನು ಹಚ್ಚುತ್ತಿದ್ದಾರೆ. ಹೆರ್ತ್ ಯೂನಿಟ್ಟುಗಳಲ್ಲಿಯೂ ಅವನ್ನು ಹಚ್ಚುತ್ತಿದ್ದಾರೆ. ಇದರಿಂದ ನಮ್ಮ ಜನರ ನೈತಿಕ ಮಟ್ಟ ಕೆಟ್ಟಿದೆ ನಮ್ಮ ವಿದ್ಯಾರ್ಥಿಗಳ ಮಟ್ಟವೂ ಕೆಡುತ್ತಾ ಇದೆ. ಇದರ ಪರಿಣಾಮವಾಗಿ ಮುಂದೆ ಈ ದೇಶದಲ್ಲಿ ಬಹಳ ಕೆಟ್ಟದ್ದು ಆಗುತ್ತದೆ. ಈ ರೀತಿ ಪುಣ್ಯ ಕ್ಷೇತ್ರಗಳಲ್ಲಿ ನಪುಂಸಕ ಶಸ್ತ್ರಚಿಕಿತ್ಸೆ ಪೋಸ್ಟರುಗಳನ್ನು...............

ಒಬ್ಬ ಮಾನ್ಯ ಸದಸ್ಯರು.—ನಪುಂಸಕ ಶಸ್ತ್ರಚಿಕಿತ್ಸೆ ಎಂಬುದಾಗಿ ಒಂದು ಡ್ಯಾಮೇಜಿಂಗ್ ಸ್ಟೇಟ್‌ಮೆಂಟನ್ನು ಮಾನ್ಯ ಸದಸ್ಯರು ಮಾಡಿದ್ದಾರೆ.

ಶ್ರೀ ಎನ್. ಲೋಕಯ್ಯನಾಯಕ್.—ಮಕ್ಕಳು ಆಗಬಾರದು ಎಂದು ಗಂಡಸುತನವನ್ನೇ ತೆಗೆಯುವಂಥಾದ್ದು ಸರಿಯೇ ? ಪುಣ್ಯ ಕ್ಷೇತ್ರಗಳಲ್ಲಿ ಇಂಥದ್ದನ್ನು ಹಾಕಬಾರದು. ಒಟ್ಟಿನಲ್ಲಿ ಇದು ಅಕ್ಷಮ್ಯ ಅಪರಾಧವೆಂದು ನಾನು ಹೇಳುತ್ತೇನೆ. ಎಲ್ಲಿ ಇಂತವುಗಳ ಪ್ರದರ್ಶನ ಮಾಡಬೇಕೋ ಅಲ್ಲಿ ಮಾತ್ರ ಮಾಡಬೇಕು. ಬೇರೆ ಕಡೆಗಳಲ್ಲಿ ಖಂಡಿತವಾಗಿ ಮಾಡಕೂಡದು, ಎಂಬುದಾಗಿ ನಾನು ಸಲಹೆ ಕೊಡುತ್ತೇನೆ.

ಫ್ಯಾಮಿಲಿ ಪ್ಲಾನಿಂಗ್ ವಿಷಯದಲ್ಲಿ ಜನಗಳೇ ಸಂಪೂರ್ಣವಾಗಿ ತಿಳಿದುಕೊಂಡು, ಅವರೇ ಮುಂದೆ ಬಂದು, ಅದು ಬೇಕೋ ಬೇಡವೋ ಎನ್ನುವುದನ್ನು ಅವರೇ ನಿರ್ಧಾರ ಮಾಡಬೇಕೇ ಹೊರತು ಸರ್ಕಾರದವರು ಜನಗಳ ಮೇಲೆ ಯಾವುದೇ ಒಂದು ಒತ್ತಾಯವನ್ನು ತಂದು ನಿರಪರಾಧಿಗಳಿಗೆ ಅವಿದ್ಯಾವಂತರಿಗೆ ಈ ಮಿಶಸಂತಾನದ ಹೊರೆಯನ್ನು ಹೊರಿಸಬಾರದೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಈ ನಾಲ್ಕು ವಿಚಾರಗಳನ್ನು ತಮ್ಮ ಮುಂದಿಟ್ಟು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಚಿತಾಪುರ್).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರಿಗೆ ವಂದನೆ ಅರ್ಪಿಸಲು ಈ ಸಭೆಯ ಮುಂದೆ ತಂದಿರುವ ನಿರ್ಣಯವನ್ನು ಅನುಮೋದಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದವರು ವಿವಿಧರಂಗಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ತೋರಿಸಿದ್ದಾರೆ. ಮತ್ತು ಮುಂದಿನ ವರ್ಷದಲ್ಲಿ ಸರ್ಕಾರದ ನೀತಿಯೇನು, ಧೋರಣೆಯೇನೆಂಬುದನ್ನು ಅವರು ತಿಳಿಸಿದ್ದಾರೆ. ಶಿಕ್ಷಣದ ವಿಷಯದಲ್ಲಿ ಹೇಳಬೇಕಾಗಿದ್ದರೆ ರಾಜ್ಯಸರ್ಕಾರದವರು ಬಹಳ ಪ್ರಗತಿಯನ್ನು ಸಾಧಿಸಿದ್ದಾರೆ. ರಾಜ್ಯದಲ್ಲಿ ಅನೇಕ ಕಾಲೇಜುಗಳು ಅಸ್ತಿತ್ವಕ್ಕೆ ಬಂದಿವೆ. ಹೈಸ್ಕೂಲುಗಳು ಅಸ್ತಿತ್ವಕ್ಕೆ ಬಂದಿವೆ. ಹಾಗೆಯೇ ಪ್ರಾಥಮಿಕ ಶಾಲೆಗಳು ಸಾಕಷ್ಟು ಅಸ್ತಿತ್ವಕ್ಕೆ ಬಂದಿವೆ. ವಿದ್ಯಾರ್ಥಿಗಳ ಸಂಖ್ಯೆ ಕೂಡ ದಿನ ದಿನಕ್ಕೂ ಹೆಚ್ಚುತ್ತಾ ಬಂದಿವೆ. ಆದರೆ ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತ್ರ ತಿಳಿಸಬೇಕಾಗಿತ್ತು. ವಿದ್ಯಾಭ್ಯಾಸದ ಮಟ್ಟ ಏನಿದೆ ಅದನ್ನು ಯಾವ ರೀತಿಯಲ್ಲಿ ಹೆಚ್ಚು ಮಾಡಬೇಕಾಗಿತ್ತು, ಮತ್ತು ಯಾವ ರೀತಿಯಲ್ಲಿ, ಕ್ವಾಲಿಟಿ ಆಫ್ ಎಜುಕೇಷನ್ ಅನ್ನು ಸುಧಾರಣೆ ಮಾಡಬೇಕಾಗಿದೆ ಎನ್ನುವ ಬಗ್ಗೆ ಸರ್ಕಾರದವರು ತೆಗೆದುಕೊಳ್ಳುವ ಕ್ರಮವನ್ನೂ ಮತ್ತು ಅದನ್ನು ಸುಧಾರಣೆ ಮಾಡತಕ್ಕ ಕ್ರಮವನ್ನು ಅವರು ಸೂಚಿಸಬೇಕಾಗಿತ್ತು. ಅದು ರಾಜ್ಯಪಾಲರ ಭಾಷಣದಲ್ಲಿಲ್ಲ ಎಂದು ನನಗನಿಸುತ್ತದೆ. ಇನ್ನು ಮುಂದಾದರೂ ಕೂಡ ಸರ್ಕಾರದವರು ವಿದ್ಯಾಭ್ಯಾಸದ ಮಟ್ಟವನ್ನು ಸುಧಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಶಿಕ್ಷಣ ಮಟ್ಟದ ಗುಣವರ್ಧನೆಯಾಗಬೇಕು. ಹೋದ ವರ್ಷ ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಕಂಡುಬಂದ ಫಲಿತಾಂಶವನ್ನು ನೋಡುವುದಾದರೆ, ಅಷ್ಟೊಂದು ಉತ್ತಮವಾದ ರೀತಿಯಲ್ಲಿ ಬಂದಿಲ್ಲವೆಂದು ಗೊತ್ತಾಗುತ್ತದೆ. ಅದರಲ್ಲಿಯೂ ನಮ್ಮ ಹೈದರಾಬಾದ್ ಕರ್ಣಾಟಕದಲ್ಲಿ ಹೈಸ್ಕೂಲುಗಳಲ್ಲಿ ಬಂದಿರತಕ್ಕ ಫಲಿತಾಂಶವನ್ನು ನೋಡುವುದಾದರೆ ಕೆಲವೊಂದು ಹೈಸ್ಕೂಲುಗಳಲ್ಲಿ 30 ಪರ್ಸೆಂಟ್, ಕೆಲವೊಂದು ಹೈಸ್ಕೂಲುಗಳಲ್ಲಿ 20 ಪರ್ಸೆಂಟ್, ಕೆಲವೊಂದು ಹೈಸ್ಕೂಲುಗಳಲ್ಲಿ 15—10 ಪರ್ಸೆಂಟ್ ಫಲಿತಾಂಶ ಬಂದಿದೆ. ಹೀಗೆ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೃಪ್ತಿಕರವಾದ ಫಲಿತಾಂಶ ಬಂದಿಲ್ಲ. ಹೋದ ವರ್ಷ ಸರ್ಕಾರದವರು ಇದನ್ನು ತನಿಖೆ ಮಾಡಬೇಕು, ಇದನ್ನು ಸುಧಾರಣೆ ಮಾಡಬೇಕು, ಆದ್ದರಿಂದ ಇದನ್ನು ಯಾವ ರೀತಿ ಸುಧಾರಣೆ ಮಾಡಬೇಕೆಂಬ ಬಗ್ಗೆ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡುತ್ತೇವೆಂದು ಹೇಳಿದ್ದರು. ಆ ಕಮಿಟಿ ಏನಾಯಿತು ಆ ಕಮಿಟಿ ವರದಿ ಏನಾಯಿತು ಎಂಬುದನ್ನು ಕೂಡ ತಿಳಿಸಲಿಲ್ಲ. ಆದ್ದರಿಂದ ರಾಜ್ಯ ಸರ್ಕಾರದವರು ಈ ದೆಶೆಯಲ್ಲಿ ಕ್ರಮ ತೆಗೆದುಕೊಂಡು ವಿದ್ಯಾಭ್ಯಾಸದ ಮಟ್ಟವನ್ನು ಗುಣವರ್ಧನೆ ಮಾಡುವುದರಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಆಮೇಲೆ ರಾಜ್ಯಪಾಲರ ಭಾಷಣದಲ್ಲಿ ಸೆಕೆಂಡರಿ ಮತ್ತು ಪ್ರೈಮರಿ ಸ್ಕೂಲುಗಳಲ್ಲಿರತಕ್ಕ ಉಪಾಧ್ಯಾಯರುಗಳಿಗೆ ತ್ರಿಲಾಭಯೋಜನೆಯನ್ನು ಅನ್ವಯಿಸಿದ್ದಾರೆ ಮತ್ತು ಪ್ರಾಥಮಿಕ ಶಾಲಾ ಅಧ್ಯಾಪಕರಿಗೆ ತರಬೇತಿ ಅವಧಿಯನ್ನು ಎರಡು ವರ್ಷ ಮಾಡಿದ್ದಾರೆಂದು ಹೇಳಿದ್ದಾರೆ. ಇನ್ನೂ ಇತರ ಸೌಕರ್ಯಗಳನ್ನು ಅವರಿಗೆ ಕೊಟ್ಟಿದ್ದಾರೆಂದು ಮತ್ತು ಕೊಡುವುದರಲ್ಲಿದ್ದಾರೆ ಎಂದು ಅನಿಸುತ್ತದೆ. ಪೋಲೀಸ್ ಕಾನ್‌ಸ್ಟೇಬಲ್ ಮತ್ತು ಪೋಲೀಸ್ ಸಬ್‌ಇನ್‌ಸ್ಪೆಕ್ಟರುಗಳಿಗೆ ಸರ್ಕಾರದವರು ಎಲ್ಲಾ ಕಡೆಗಳಲ್ಲೂ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ. ಆದರೆ ಉಪಾಧ್ಯಾಯರುಗಳಿಗೆ ಸರ್ಕಾರದವರು ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ. ಆದ್ದರಿಂದ ಆ ಬಡಪಾಯಿಗಳಾದ ಹೈಸ್ಕೂಲು ಮತ್ತು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅದರಲ್ಲಿಯೂ ಹೆಚ್ಚಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡತಕ್ಕ ಶಿಕ್ಷಕರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನಮಾಡಬೇಕು. ಎಲ್. ಐ. ಸಿ.ಯಲ್ಲಿ ಸಾಲ ತೆಗೆದುಕೊಂಡು ಹೌಸಿಂಗ್ ಬೋರ್ಡ್ ಮುಖಾಂತರ ಯೋಜನೆಯನ್ನು ಹಾಕಿಕೊಂಡ ಯಾವ ಯಾವ ಭಾಗದಲ್ಲಿ ಪ್ರಾಥಮಿಕ ಶಾಲೆಗಳು ಇವೆ, ಅಥವಾ ಯಾವ ಯಾವ ರೆವಿನ್ಯೂ ಸರ್ಕಲ್‌ಗಳಲ್ಲಿ ಮಿಡಲ್ ಸ್ಕೂಲುಗಳು ಇವೆ ಆ ಶಾಲಾ ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟುವುದಕ್ಕೆ ಒಂದು ಪ್ರೋಗ್ರಾಮ್, ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

(ಶ್ರೀ ಎಸ್. ರುದ್ರಪ್ಪ)

ಇನ್ನು ರಾಜ್ಯಪಾಲರ ಭಾಷಣದಲ್ಲಿ ರಸ್ತೆಗಳ ನಿರ್ಮಾಣ ಕಾರ್ಯದಲ್ಲಿ ಬಹಳಷ್ಟು ಹೇಳಿದ್ದಾರೆ. ಸಾಕಷ್ಟು ಪ್ರಗತಿ ಆಗಿದೆ. ರಾಜ್ಯದಲ್ಲಿ ಕೆಲವು ಭಾಗಗಳಲ್ಲಿ ರಸ್ತೆಗಳ ನಿರ್ಮಾಣ ಬಹಳ ಭರದಿಂದ ನಡೆದಿದೆ. ಕೆಲವು ಭಾಗಗಳಲ್ಲಿ ಈ ರಸ್ತೆಗಳ ನಿರ್ಮಾಣ ಕಾರ್ಯ ಸಾಕಷ್ಟು ಪ್ರಗತಿ ಆಗಿಲ್ಲ, ತೃಪ್ತಿಕರ ವಾಗಿ ನಡೆದಿಲ್ಲ ಎಂದು ನಾನು ಹೇಳುತ್ತೇನೆ. ಹೈದರಾಬಾದ್ ಕರ್ಣಾಟಕವನ್ನು ತೆಗೆದುಕೊಂಡರೆ ಅದು ಬಹಳ ಹಿಂದುಳಿದ ಭಾಗ. ಬೀದರ್ ಜಿಲ್ಲೆಯಲ್ಲಿ the length of the road for every 100 Kilometer area is 12.7 miles ರಾಯಚೂರಿನಲ್ಲಿ 15.6 ಆಗಿದೆ. ಗುಲ್ಬರ್ಗಾದಲ್ಲಿ 11.8 ಆಗಿದೆ. ಹೀಗೆ ಈ ಭಾಗವನ್ನು ಬೇರೆ ಭಾಗಗಳಿಗೆ ಹೋಲಿಸಿದರೆ ರಸ್ತೆಗಳ ನಿರ್ಮಾಣ ಕಾರ್ಯದಲ್ಲಿ ಬಹಳ ಹಿಂದುಳಿದಿದೆ. ರಾಜ್ಯಪಾಲರ ಭಾಷಣದಲ್ಲಿ 1968-69 ರಲ್ಲಿ 80 ಮೈಲಿ ಹೊಸ ರಸ್ತೆಗಳ ನಿರ್ಮಾಣಕ್ಕೂ ಈಗ ಬಳಕೆಯಲ್ಲಿರುವ ರಸ್ತೆಗಳಲ್ಲಿ 200 ಮೈಲಿಗಳಷ್ಟು ರಸ್ತೆಯನ್ನು ಉತ್ತಮಪಡಿಸುವುದಕ್ಕಾಗಿಯೂ ಇನ್ನು 280 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲು ಉದ್ದೇಶಿಸ ಲಾಗಿದೆ ಎಂದು ಸೂಚಿಸಿದ್ದಾರೆ. ಈ ಸೂಚನೆಯಲ್ಲಿ ನಾನು ಹೇಳುವುದೇನೆಂದರೆ, ಹಿಂದುಳಿದ ಭಾಗವಾದ ಹೈದರಾಬಾದ್ ಕರ್ಣಾಟಕಕ್ಕೆ ಹೆಚ್ಚು ಲಕ್ಷ್ಯ ಕೊಟ್ಟು ಮುಂದುವರಿದ ಭಾಗಗಳ ಮಟ್ಟಕ್ಕೆ ಅದನ್ನು ತರಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಮೂರನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಭೂಕಂದಾಯವನ್ನು ರದ್ದು ಮಾಡುವ ವಿಷಯದಲ್ಲಿ ಯಾವುದನ್ನೂ ಹೇಳಿಲ್ಲ. ಹೋದ ವರ್ಷ ಭೂಕಂದಾಯ ಈಗ ಇರುವ ಸ್ವರೂಪ ಇರತಕ್ಕದ್ದು ಸರಿಯಲ್ಲ ಅದನ್ನು ರದ್ದು ಮಾಡುತ್ತೇವೆಂದು ಹೇಳಿದ್ದರೆಂದು ನನಗೆ ಅನಿಸುತ್ತದೆ. ಈ ವಿಚಾರದಲ್ಲಿ ಯಾವ ರೈತರನ್ನು ಕೇಳಿದರೂ ಸಹ ಭೂಕಂದಾಯನ್ನು ರದ್ದು ಮಾಡಬಾರದು ಎಂದು ಹೇಳು ತ್ತಿದ್ದಾರೆ. ಈಗಿರತಕ್ಕ ಭೂಕಂದಾಯದ ಪದ್ಧತಿ ಬಹಳ ಉತ್ತಮವಾದ ಮತ್ತು ಸುಲಭವಾದ ಪದ್ಧತಿ ಪ್ರತಿಯೊಬ್ಬ ರೈತನಿಗೂ ತಾನು ಎಷ್ಟು ಭೂಕಂದಾಯವನ್ನು ಕೊಡಬೇಕೆಂಬುದು ಗೊತ್ತಿದೆ. ಆದ್ದರಿಂದ ಈಗಿರತಕ್ಕ ಭೂಕಂದಾಯದ ಪದ್ಧತಿಯನ್ನು ರದ್ದು ಮಾಡಿದರೆ, ಬೇರೆ ಪದ್ಧತಿಯನ್ನು ತಂದರೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಬರಬಹುದು. ಅಗ್ರಿಕಲ್‌ಚರಲ್ ಇನ್ ಕಂಟ್ಯಾಕ್ಸ್ ಹಾಕಿದರೆ ರೈತರಿಗೆ ಬಹಳ ಅನಾನುಕೂಲವಾಗುತ್ತದೆ. ರೈತ ವ್ಯವಸಾಯಕ್ಕೆ ಸಂಬಂಧಪಟ್ಟ ಲೆಕ್ಕವನ್ನು ಇಡಬೇಕು, ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸನ್ನು ಊಹಿಸಿಕೊಂಡು ರಿಪೋರ್ಟ್ ಕೊಡಬೇಕು. ರಿಪೋರ್ಟಿನಲ್ಲಿ ಏನಾದರೂ ಬದಲಾವಣೆ ಆದರೆ ಅಥವಾ ಅಧಿಕಾರಿಗಳು ನೋಟೀಸು ಕೊಟ್ಟರೆ ಅದಕ್ಕೆ ಒಬ್ಬರು ಅಡ್ವೋಕೇಟರನ್ನು ಇಡಬೇಕು. ಈ ರೀತಿ ಏನೋನೋ ಕಿರುಕುಳಗಳು ಆಗುತ್ತವೆ. ಆದ್ದರಿಂದ ರೈತರು ಭೂ ಕಂದಾಯ ಇರಬೇಕು. ಅದನ್ನು ರದ್ದುಮಾಡಬಾರದು ಎಂದು ಹೇಳು ತ್ತಾರೆ. ಆದ್ದರಿಂದ ಭೂ ಕಂದಾಯವನ್ನು ರದ್ದು ಮಾಡಬಾರದು. ಆದರೆ ಸಣ್ಣ ಸಣ್ಣ ರೈತರಿಗೆ 5-10 ಎಕರೆ ಜಮೀನು ಇರತಕ್ಕ ರೈತರಿಗೆ ಏನಾದರೂ ಒಂದು ರಿಲೀಫ್ ಕೊಡಬೇಕು. ಎಂದರೆ 5 ಎಕರೆ ಜಮೀನು ಇರತಕ್ಕಂಥ ರೈತರಿಗೆ ಭೂ ಕಂದಾಯವನ್ನು ರದ್ದು ಮಾಡಬೇಕು ಎನ್ನುವ ಒಂದು ಕೂಗು ಇದೆ. ಆದ್ದರಿಂದ ಸಣ್ಣ ಸಣ್ಣ ರೈತರಿಗೆ ಏನಾದರೂ ಒಂದು ರಿಲೀಫ್ ಕೊಡಬೇಕು. ಈ ದೃಷ್ಟಿಯಿಂದ 5 ಎಕರೆ ಜಮೀನು ಇರತಕ್ಕ ಸಣ್ಣ ಸಣ್ಣ ರೈತರಿಗೆ ಭೂಕಂದಾಯವನ್ನು ರದ್ದು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ದೆಸೆಯಲ್ಲಿ ಹೇಳುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಪಂಚಾಯತ್ ರಾಜ್ಯದ ಬಗ್ಗೆ ಏನೂ ಹೇಳಿಲ್ಲ. ಸರ್ಕಾರ ದವರು ಪಂಚಾಯತ್ ರಾಜ್ಯವನ್ನು ಎಲ್ಲಾ ಹಂತಗಳಲ್ಲೂ ತರಬೇಕು. ಈ ಮನೆಯಲ್ಲಿ ಅದಕ್ಕೆ ಸಂಬಂಧಪಟ್ಟ ಒಂದು ಮಸೂದೆಯನ್ನು ತಂದು ಅದು ಸೆಲೆಕ್ಟ್ ಕಮಿಟಿಗೆ ಹೋಯಿತು. ಆಮೇಲೆ ಅದು ಏನಾಯಿತು ಎಂಬುದು ಗೊತ್ತಿಲ್ಲ ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಒಂದು ಧೈರ್ಯ ವಾದ ಸ್ಪಷ್ಟವಾದ ನಿಲುವನ್ನು ತಳೆದು ಪಂಚಾಯಿತ್ ರಾಜ್ಯವನ್ನು ತಾಲ್ಲೂಕು ಮಟ್ಟದಲ್ಲೂ, ಜಿಲ್ಲಾ ಮಟ್ಟದಲ್ಲೂ ತರಬೇಕೆಂದು ಈ ಸಂದರ್ಭದಲ್ಲಿ ನಾನು ಸೂಚಿಸುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಭಾರೀ ನೀರಾವರಿ ಯೋಜನೆಗಳ ಬಗ್ಗೆ ಏನು ಸ್ಪಷ್ಟವಾದ ನಿಲುವು ಇದೆ, ಮತ್ತು ಹೋದವರ್ಷ ಎಷ್ಟು ಪ್ರಗತಿ ಆಗಿದೆ ಎಂಬುದನ್ನು ತಿಳಿಸಲಿಲ್ಲ.

ಇನ್ನು ನೀರಾವರಿ ಯೋಜನೆಯ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ರೈತರ ಪರಿಸ್ಥಿತಿ ಸುಧಾರಣೆಯಾಗಬೇಕಾದರೆ, ಹೆಚ್ಚು ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕು. ಅದರಲ್ಲೂ ಬರಗಾಲಕ್ಕೆ ಒಳಗಾಗತಕ್ಕ ಗುಲ್ಬರ್ಗ, ಬಿಜಾಪುರ ಮೊದಲಾದ ಸ್ಥಳಗಳಲ್ಲಿ ಈ ಕಾರ್ಯ ಹೆಚ್ಚಾಗ

ಬೇಕು ಅಪ್ಪರ್ ಕೃಷ್ಣಾ ಪ್ರಗತಿ ಏನಾಗಿದೆ ? ಅದು ಇದುವರೆಗೂ ಬಹಳ ನಿಧಾನವಾಗಿ ನಡೆದಿದೆ ಮತ್ತು ತೃಪ್ತಿಕರವಾಗಿ ನಡೆದಿಲ್ಲ ಎಂದು ನನಗನಿಸುತ್ತದೆ. ಇವತ್ತು ಸರ್ಕಾರದವರ ಧೋರಣೆ, ನೀತಿ ಏನೆಂಬುದು ಸ್ಪಷ್ಟವಾಗಿಲ್ಲ. ಇಷ್ಟು ಮಾತ್ರ ಹೇಳಿದ್ದಾರೆ 'ಸರ್ಕಾರದವರು ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನಲ್ಲಿರತಕ್ಕ ನೀರನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ' ಎಂದು. ಆದರೆ ಮುಂದಿನ ವರ್ಷಗಳಲ್ಲಿ ಅಪ್ಪರ್ ಕೃಷ್ಣಾ ಯೋಜನೆಗೆಯಾಗಲಿ, ಅಥವಾ ಹೇಮಾವತಿ ಹಾರಂಗಿ ಮೊದಲಾದ ಭಾರೀ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆತರಲಿಕ್ಕೆ ಎಷ್ಟು ಖರ್ಚು ಮಾಡುತ್ತೇವೆ ಎಂದು ತಿಳಿಸಿಲ್ಲ. ಹೋದ ವರ್ಷದಲ್ಲಿ ಎಷ್ಟು ಮಾಡಿದ್ದೇವೆ ಎಂದೂ ತಿಳಿಸಿಲ್ಲ. ಬೇರೆ ಇಲಾಖೆ ನೋಡುವುದಾದರೆ, ಹೋದ ವರ್ಷ ಎಷ್ಟು ಖರ್ಚಾಗಿದೆ, ಎಷ್ಟು ಪ್ರಗತಿಯಾಗಿದೆ, ಎಷ್ಟು ಲಾಭ ಎಂದು ತೋರಿಸಿದ್ದಾರೆ. ಆದರೆ ಭಾರೀ ನೀರಾವರಿ ಯೋಜನೆಗಳ ವಿಚಾರದಲ್ಲಿ ಯಾವುದೂ ಸ್ಪಷ್ಟವಾಗಿ ತಿಳಿಸಿಲ್ಲ. ಆದ್ದರಿಂದ ಅಲ್ಲಿರತಕ್ಕ ಜನರಿಗೆ ಪ್ರತ್ಯೇಕವಾಗಿ ಬರಗಾಲಕ್ಕೆ ಪೀಡಿತವಾದಂತಹ ಬಿಜಾಪುರ, ಗುಲ್ಬರ್ಗ, ಮತ್ತು ರಾಯಚೂರಿನ ರೈತರಲ್ಲಿ ಒಂದು ಕಳವಳ ಭೀತಿ ಉಂಟಾಗಿದೆ. ಏಕೆಂದರೆ, 7–8 ವರ್ಷಗಳಿಂದ ನಾವು ಕೇಳುತ್ತಿದ್ದೇವೆ, ಕಷ್ಣಾ ಮೇಲ್ದಂಡೆಯ ಯೋಜನೆ ಕಾರ್ಯ ರೂಪಕ್ಕೆ ಬರುತ್ತದೆ, ರೈತರಿಗೆ ಅನುಕೂಲವಾಗುತ್ತದೆ ಎಂದು. ಆದರೆ ಇದುವರೆಗೂ ಯಾವ ಒಂದು ನಿಲುವನ್ನೂ ಧೈರ್ಯವಾಗಿ ಸರ್ಕಾರದವರು ತೆಗೆದುಕೊಂಡಿಲ್ಲವೆಂದು ವಿಷಾದದಿಂದ ಹೇಳ ಬೇಕಾಗಿದೆ. ಪ್ರತಿವರ್ಷ ಐವತ್ತು–ನಾಲವತ್ತು ಲಕ್ಷ ಖರ್ಚು ಮಾಡಿದರೆ, ಅದು ಬರೇ ಅಲ್ಲಿರತಕ್ಕ ಇಂಜಿನಿಯರ್ರಿಗೆ ಮತ್ತು ಸಿಬ್ಬಂದಿವರ್ಗಗಳಿಗೆ ಖರ್ಚಾಗಿ, ಅದು ನದಿಯಲ್ಲಿರತಕ್ಕ ನೀರನ್ನು ಉಪ ಯೋಗ ಮಾಡುವುದಕ್ಕೆ ಖರ್ಚುಮಾಡಿದಂತಾಗುವುದಿಲ್ಲ. ಇದನ್ನು ಕಾರ್ಯರೂಪಕ್ಕೆ ತರಬೇಕಾದರೆ, ಇನ್ನೂ ಸುಮಾರು 10–20 ವರ್ಷ ಹಿಡಿಯುತ್ತದೋ ಏನೂ ಗೊತ್ತಾಗುವುದಿಲ್ಲ. ಈಗಾಗಲೇ ಆಂಧ್ರದವರು ನಾಗಾರ್ಜುನದ ನೀರನ್ನು ರೈತರಿಗೆ ಕೊಟ್ಟು ಲಾಭಪಡೆಯುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಒಂದು ಸ್ಪಷ್ಟವಾದ ನಿಲುವನ್ನು ಸೂಚಿಸಬೇಕು. ಈ ಕಾರ್ಯವನ್ನು ಯಾವಾಗ ತೆಗೆದುಕೊಳ್ಳುತ್ತಾರೆ, ಅಥವಾ ಕೈಬಿಡುತ್ತಾರೋ ಎಂದು ಹೇಳಬೇಕು. ಏಕೆಂದರೆ ಆ ಭಾಗದಲ್ಲಿರತಕ್ಕ ಜನರು ಬಹಳ ಅನಾನುಕೂಲತೆಗಳಿಗೆ ಈಡಾಗುತ್ತಿದ್ದಾರೆ. ಅಲ್ಲಿ ನೀರಾವರಿ ಶೇಕಡಾ ಒಂದು ಅಥವಾ ಎರಡು ಇದೆ. ಆದಗೆ ಅಲ್ಲಿ ಫಲವತ್ತಾದ ಭೂಮಿ ಇದೆ. ಅಲ್ಲಿಯ ಕೆಲವರು ನಾವು ಅಡ್ವಾನ್ಸ್ ಬೆಟರ್‌ಮೆಂಟ್‌ಲೇವಿ ಆದರೂ ಕೊಡುತ್ತೇವೆ, ಹೇಗಾದರೂ ಅಪ್ಪರ್ ಕೃಷ್ಣಾ ಯೋಜನೆಯನ್ನು ತೀವ್ರವಾಗಿ ಮಾಡಬೇಕೆಂದು ಅಭಿಪ್ರಾಯ ಪಡುತ್ತಿದ್ದಾರೆ. ಇದರ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ರಾಜ್ಯಪಾಲರು ಅದನ್ನು ಮಾಡಿಲ್ಲ. ಆದ್ದರಿಂದ ಸರ್ಕಾರದವರು ಈ ದಿಸೆಯಲ್ಲಿ ಹೆಚ್ಚಿನ ಒಂದು ದೃಢವಾದ ಹೆಜ್ಜೆಯನ್ನು ಇಟ್ಟು ಭಾರೀ ನೀರಾವರಿ ಯೋಜನೆಗಳನ್ನು ಸಾಕಷ್ಟು ಆಸಕ್ತಿ ವಹಿಸಿ, ಪ್ರಗತಿ ಮಾಡುವಂತೆ ಪ್ರಯತ್ನ ಮಾಡಬೇಕೆಂದು ನಾನು ತಿಸುತ್ತೇನೆ. ಮೂರನೆಯದು ಏನೆಂದರೆ, ರಾಜ್ಯಪಾಲರ ಭಾಷಣದಲ್ಲಿ ಮೈನಿಂಗ್ ಜಿಯೋಲಜಿ ಬಗ್ಗೆ ಏನೂ ಕಾಣುವುದಿಲ್ಲ. ನಮ್ಮ ಭಾಗದಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿ ಉದ್ಭವ ವಾಗಿದೆ. ಅದೇನೆಂದರೆ, ಗುಲ್ಬರ್ಗ ಜಿಲ್ಲೆಯಲ್ಲಿ ಕಲ್ಲುಗಣಿಗಳು ಇವೆ. ಇದರಿಂದ ಕಲ್ಲನ್ನು ತೆಗೆಯುತಿದ್ದಾರೆ. ಅಲ್ಲಿ ಸಾವಿರಾರು ಕೂಲಿಯವರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಅವುಗಳನ್ನು ದೊಡ್ಡ ಮೊನಾಪಲಿ ಕಂಟ್ರಾಕ್ಟರುಗಳಿಗೆ ಕೊಡುತ್ತಿದ್ದಾರೆ. ಇದರಿಂದ ಸಣ್ಣ ಸಣ್ಣ ಕಂಟ್ರಾಕ್ಟರು ಗಳಿಗೆ ಇದರ ಅನುಕೂಲತೆ ಸಿಗುತ್ತಾ ಇಲ್ಲ. ಅವರಿಗೆ ಏನು ಸೌಕರ್ಯಗಳನ್ನು ಕೊಡ ಬೇಕಾಗಿತ್ತೋ ಆದನ್ನು ಇದುವರೆಗೂ ಕೊಟ್ಟಿಲ್ಲ. ಒಂದು ವರ್ಷ ಎರಡು ವರ್ಷ ಲೀಜ್ ಕೊಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಸೂಚಿಸುವು ದೇನೆಂದರೆ, ಕಲ್ಗಣಿ ಲೀಸ್ ಕೊಡಬೇಕಾದರೆ, ಕನಿಷ್ಟ 5 ವರ್ಷಕ್ಕಾದರೂ ಕೊಡಬೇಕು. ಏಕೆಂದರೆ ಅವರಿಗೆ ಒಂದೆರಡು ವರ್ಷಗಳಲ್ಲಿ ಗಣಿಯನ್ನು ತೆಗೆದು ಕಲ್ಲುಗಳನ್ನು ತೆಗೆದು ಮಾರಾಟಮಾಡುವುದ ಕ್ಕಾಗಲಿ, ಅಥವಾ ಅವುಗಳನ್ನು ಹೊಲಗಳಿಗೆ ಉಪಯೋಗಿಸುವುದಾಗಲಿ, ಆಗುವುದಿಲ್ಲ. ಆದ್ದರಿಂದ ರಾಜ್ಯಸರ್ಕಾರದವರು ಇದನ್ನು ಗಮನಿಸಬೇಕಾಗುತ್ತದೆ. ಕಲ್ಗಣಿಗಳನ್ನು ಸಣ್ಣಸಣ್ಣ ಕಂಟ್ರಾ ಕ್ಟುದಾರರಿಗೂ ಕೊಡುವಂತೆ ಲೀಜ್ ರೂಲ್ಸಿನಲ್ಲಿ ಬದಲಾವಣೆಯಾಗಬೇಕೆಂದು ನಾನು ಸೂಚಿ ಸುತ್ತೇನೆ.

ಮತ್ತೊಂದು ವಿಷಯವೇನೆಂದರೆ, ಇವತ್ತು ನಿರುದ್ಯೋಗ ದಿನೇ ದಿನೇ ಹೆಚ್ಚಾಗುತ್ತಿದೆ. ಗ್ರ್ಯಾಜ್ಯುಯೇಟ್ ಇಂಜಿನಿಯರ್ಸ್, ಅಥವಾ ಡಿಪ್ಲೋಮಾ ಇಂಜಿನಿಯರ್ಸ್ಸಗಲಿ, ಅವರ ಸಂಖ್ಯೆ ಹೆಚ್ಚು ತ್ತಿದೆ. ಸರ್ಕಾರದವರ ಒಂದು ವಿಚಾರವೇನೆಂದರೆ, ಈ ಕಂಟ್ರಾಕ್ಟರ್ಸ್ ಪದ್ಧತಿ ತೆಗೆದುಹಾಕಿ, ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್ ಅಸ್ತಿತ್ವದಲ್ಲಿ ಬರಬೇಕೆಂದು ಅವರ ಒಂದು ನೀತಿ ಇತ್ತು, ಮತ್ತು ಅದೇ ರೀತಿಯಲ್ಲಿ ಲೋಕೋಪಯೋಗಿ ಮಂತ್ರಿಗಳು ಈ ಮನೆಯಲ್ಲಿ ಇದರ ಬಗ್ಗೆ ಹೇಳಿದ್ದಾರೆ.

(ಶ್ರೀ ಎಸ್. ರುದ್ರಪ್ಪ)

ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅಸ್ತಿತ್ವದಲ್ಲಿ ಬಂದರೆ, ಈ ಡಿಪ್ಲೊಮಾ ಇಂಜಿನಿಯರ್ಸ್, ಮತ್ತು ಗ್ರಾಜ್ಯುಯೇಟ್ ಇಂಜಿನಿಯರ್ಸಿಗೆ ಕೆಲಸ ಕೊಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ರಾಜ್ಯಸರ್ಕಾರದವರು ಈ ದಿಸೆಯಲ್ಲಿ ಬೇಗನೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬರಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಇವತ್ತಿನ ದಿವಸ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಈ ನನ್ನ ಎರಡು ಮೂರು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet again at 8-30 A.M. on Saturday, the 24th February 1968.

The House adjourned at Six of the Clock to meet again at Thirty Minutes past Eight of the Clock on Saturday, the 24th February 1968.

———